ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 3 | ಜನವರಿ 13–19, 2020 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com

ಮತ್ತೊಂದು ಹೋರಾಟದ ಅಲೆ







ಅಭೂತಪೂರ್ವ ಸಾರ್ವತ್ರಿಕ ಮುಷ್ಕರ ಮತ್ತು ಗ್ರಾಮೀಣ ಹರತಾಳ



ಬಲಾಢ್ಯ ಗ್ರಾಮೀಣ ಆಂದೋಲನ ಕಟ್ಟಲು ಕೂಲಿಕಾರರ ನಿರ್ಧಾರ



ಇರಾನಿ ಜನರಲ್ ಸೊಲೆಮಾನಿ ಹತ್ಯೆ: ಅಮೆರಿಕದ ಮಾರಕ ನೀತಿಯಲ್ಲಿ ಭಾರತ ಭಾಗವಹಿಸಬಾರದು

–ಪ್ರಕಾಶ್ ಕಾರಟ್

ಚಾರಿತ್ರಿಕ ಅಖಿಲ ಭಾರತ ಮುಷ್ಕರ: ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದನೆ

"ಇನ್ನಷ್ಟು ಬಲಿಷ್ಟ ಹೋರಾಟಗಳನ್ನು ಬೆಸೆದು ಇನ್ನಷ್ಟು ವಿಶಾಲ ಐಕ್ಯತೆಗೆ ದಾರಿ ಮಾಡಿ ಕೊಡುತ್ತದೆ"

ಜನವರಿ 8 ರಂದು ದೇಶಾದ್ಯಂತ ನಡೆದಿರುವ ಭವ್ಯ ಮುಷ್ಕರಕ್ಕಾಗಿ ಕಾರ್ಮಿಕ ವರ್ಗ, ರೈತರು, ಕೃಷಿ ಕಾರ್ಮಿಕರು, ವಿದ್ಯಾರ್ಥಿಗಳು ಮತ್ತು ಇತರ ಪ್ರಜಾಪ್ರಭುತ್ವವಾದಿ ಜನವಿಭಾಗಗಳನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದಿಸಿದೆ. ವ್ಯಾಪಕ ಪ್ರಮಾಣದಲ್ಲಿ ಬಂಧನಗಳು, ದಮನವನ್ನು ಎದುರಿಸಿಯೂ ಈ ಮುಷ್ಕರ ನಡೆದಿದೆ ಎಂದು ಅದು ಹೇಳಿದೆ.

ಮೋದಿ ಸರಕಾರದ ಧೋರಣೆಗಳಿಂದ ಚಿಂದಿಯಾಗಿರುವ ಜೀವನಾಧಾರದ ಅತ್ಯಂತ ಕಷ್ಟಕರ ಪರಿಸ್ಥಿತಿಗಳನ್ನು ಕಾರ್ಮಿಕ ಸಂಘಗಳು ಮತ್ತು ವಿವಿಧ ಒಕ್ಕೂಟಗಳ ಜಂಟಿ ವೇದಿಕೆ ಈ ಭವ್ಯ ಸಾಮೂಹಿಕ ಕಾರ್ಯಾಚರಣೆಯ ಮೂಲಕ ಯಶಸ್ವಿಯಾಗಿ ಎತ್ತಿ ತೋರಿದೆ. ಸಂಘಟಿತ ವಲಯದಲ್ಲೂ, ಅಸಂಘಟಿತ ವಲಯದಲ್ಲೂ, ಹಣಕಾಸು ಮತ್ತು ಇತರ ಸೇವಾ ವಲಯಗಳಲ್ಲೂ ಕೈಗಾರಿಕಾ ಕಾರ್ಮಿಕರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರಿಂದಾಗಿ ಅರ್ಥವ್ಯವಸ್ಥೆಯ ಎಲ್ಲ ವಿಭಾಗಗಳಲ್ಲೂ ಮುಷ್ಕರ ಉತ್ಕೃಷ್ಟವಾಗಿತ್ತು. ವಿಶೇಷವಾಗಿ, ಸಾರ್ವಜನಿಕ ವಲಯದಲ್ಲಿ, ಸಾರಿಗೆ, ಚಹಾ ತೋಟಗಳು, ಸಣಬು, ಇಂಜಿನಿಯರಿಂಗ್‌ನಲ್ಲಿ ಮತ್ತು ಸ್ಕೀಮ್ ಕಾರ್ಮಿಕರ ಮುಷ್ಕರದ ಯಶಸ್ಸು ಎದ್ದು ಕಂಡಿದೆ.

ಅಖಿಲ ಭಾರತ ಮುಷ್ಕರದ ಒಂದು ಹೊಸ ಲಕ್ಷಣವೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಬಿಕ್ಕಟ್ಟಿನ ತೀವ್ರತೆಯನ್ನು ಎತ್ತಿ ತೋರಿದ ರೈತಾಪಿ ಜನಗಳು ಮತ್ತು ಕೃಷಿ ಕಾರ್ಮಿಕರು ಇದರಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿರುವುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ವಿದ್ಯಾರ್ಥಿ ಸಂಘಟನೆಗಳೂ ಹೆಚ್ಚುತ್ತಿರುವ ಶಿಕ್ಷಣದ ವೆಚ್ಚಗಳ ಮತ್ತು ಇತ್ತೀಚೆಗೆ ಜಾಮಿಯ, ಎಎಂಯು ಮತ್ತು ಜೆಎನ್‌ಯುನಲ್ಲಿ ಕಂಡಿರುವಂತೆ ಕ್ಯಾಂಪಸ್‌ಗಳಲ್ಲಿ ಪ್ರಜಾಪ್ರಭುತ್ವದ ಮೇಲೆ ಆಕ್ರಮಣಗಳ ತೀವ್ರತೆಯತ್ತ ಗಮನ ಸೆಳೆಯಲು ಮುಷ್ಕರಕ್ಕೆ ಕರೆ ನೀಡಿದ್ದವು. ಕಾಲೇಜು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮುಷ್ಕರದ ಸಂದೇಶವನ್ನು, ವಿಶೇಷವಾಗಿ ಭಾರತದ ಸಂವಿಧಾನದ ರಕ್ಷಣೆಯ ಬಗ್ಗೆ ಕಳವಳದ ಸಂದೇಶವನ್ನು ಪಸರಿಸುವಲ್ಲಿ ಒಂದು ದೊಡ್ಡ ಪಾತ್ರವನ್ನು ವಹಿಸಿದ್ದಾರೆ. ಶಾಲಾ, ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಅಧ್ಯಾಪಕರು ವ್ಯಾಪಕವಾಗಿ ಭಾಗವಹಿಸಿದ್ದಾರೆ.

ಕೇರಳದಲ್ಲಿ ಈ ಸಾರ್ವತ್ರಿಕ ಮುಷ್ಕರ ಸಂಪೂರ್ಣವಾಗಿತ್ತು. ತ್ರಿಪುರಾದಲ್ಲಿ ಬಿಜೆಪಿಯ ಮತ್ತು ರಾಜ್ಯ ಆಡಳಿತದ ಪಾಶವೀ ವರ್ತನೆಗಳನ್ನು ಎದುರಿಸಿ ಮುಷ್ಕರ ಸುಮಾರಾಗಿ ಸಂಪೂರ್ಣವಾಗಿಯೇ ನಡೆಯಿತು. ಮಣಿಪುರದಲ್ಲಿ ಸಂಪೂರ್ಣವಗಿತ್ತು. ಪಶ್ಚಿಮ ಬಂಗಾಲದಲ್ಲಿ ಟಿಎಂಸಿ ನೇತೃತ್ವದ ಆಡಳಿತ ಬಂದ್‌ನ್ನು ವಿಫಲಗೊಳಿಸಲು ಸರ್ವಪ್ರಯತ್ನ ನಡೆಸಿದರೂ ಮುಷ್ಕರ ಅತ್ಯುತ್ಸಾಹದಿಂದ, ವ್ಯಾಪಕವಾಗಿ ನಡೆಯಿತು. ಅಸ್ಸಾಂ, ಬಿಹಾರ, ಝಾರ್ಖಂಡ್, ಪಂಜಾಬ್, ಒಡಿಶ, ಮಧ್ಯಪ್ರದೇಶ, ತಮಿಳುನಾಡು, ಮಹಾರಾಷ್ಟ್ರ, ಮತ್ತು ಇನ್ನೂ ಹಲವು ರಾಜ್ಯಗಳಲ್ಲಿ ಮುಷ್ಕರ ಬಹಳ ಗಮನಾರ್ಹವಾಗಿತ್ತು ಎಂದು ಪೊಲಿಟ್‌ಬ್ಯುರೊ ಗಮನಿಸಿದೆ.

ಕಾರ್ಮಿಕರು ಮತ್ತು ಇತರ ದುಡಿಯುವ ಜನವಿಭಾಗಗಳ, ಮತ್ತು ಅವರೊಂದಿಗೆ ವಿದ್ಯಾರ್ಥಿಗಳು ಮತ್ತಿತರ ಪ್ರಜಾಪ್ರಭುತ್ವವಾದಿ ವಿಭಾಗಗಳ ದನಿ ಇವರೆಲ್ಲರ ದೃಢನಿರ್ಧಾರವನ್ನು ದ್ವಿಗುಣಗೊಳಿಸುತ್ತದೆ, ಮತ್ತು ನಮ್ಮ ಬಹುಪಾಲು ದುಡಿಯುವ ಜನಗಳನ್ನು ದಾರಿದ್ರ್ಯಕ್ಕೆ ತಳ್ಳುವ ಬೆನ್ನು ಮುರಿಯುವ ಆರ್ಥಿಕ ಧೋರಣೆಗಳನ್ನು, ವಿಭಜನಕಾರೀ ಧ್ರುವೀಕರಣ ಧೋರಣೆಗಳನ್ನು, ನಮ್ಮ ಗಣತಂತ್ರದ ಸಂವಿಧಾನಿಕ ನೀತಿಗಳ ಬುನಾದಿಯನ್ನೇ ಶಿಥಿಲಗೊಳಿಸುವ ಫ್ಯಾಸಿಸ್ಟ್ ತೆರನ ಆಕ್ರಮಣಗಳನ್ನು ಸೋಲಿಸುತ್ತದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಜನವರಿ 8ರ ಮುಷ್ಕರ ಕಾರ್ಯಾಚರಣೆ ಇನ್ನಷ್ಟು ಬಲಿಷ್ಟವಾದ ಹೋರಾಟಗಳನ್ನು ಬೆಸೆಯುವ ಮೂಲಕ ಇನ್ನಷ್ಟು ವಿಶಾಲವಾದ ಐಕ್ಯತೆಗೆ ದಾರಿ ಮಾಡಿ ಕೊಡುತ್ತದೆ ಎಂದು ಹೇಳಿದೆ.

ಜೆಎನ್‌ಯು ಉಪಕುಲಪತಿಯನ್ನು ರಾಷ್ಟ್ರಪತಿಗಳು ಕೂಡಲೇ ವಜಾಮಾಡಬೇಕು–ಸಿಪಿಐ(ಎಂ)

"ಗೃಹಮಂತ್ರಿಗಳು ಬಿಂಬಿಸಲು ಯತ್ನಿಸಿರುವಂತೆ ಇದು ಗುಂಪು ತಿಕ್ಕಾಟವಲ್ಲ, ಪೂರ್ವಯೋಜಿತ ಹಲ್ಲೆ"

ಜವಹರಲಾಲ್ ನೆಹರು ವಿಶ್ವವಿದ್ಯಾಲಯ (ಜೆಎನ್‌ಯು)ದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ಜನವರಿ 5ರಂದು ಹೊರಗಿನವರು ಬಂದು ಪಾಶವೀ ಹಲ್ಲೆ ನಡೆಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಸಶಸ್ತ್ರ ಮುಸುಕುಧಾರೀ ಮಂದಿ ಜೆಎನ್‌ಯು ಕ್ಯಾಂಪಸ್‌ನೊಳಕ್ಕೆ ದಿಲ್ಲಿ ಪೋಲೀಸರ ಒಂದು ದೊಡ್ಡ ತುಕಡಿಯ ಎದುರೇ ಪ್ರವೇಶಿಸಿ ಮೂರು ಗಂಟೆಗಳ ಕಾಲ ರಂಪಾಟ ನಡೆಸಿದರು, ವಿದ್ಯಾರ್ಥಿನಿಯರ ಹಾಸ್ಟೆಲ್ ಒಳಹೊಕ್ಕು ಅವರನ್ನು ಥಳಿಸಿದರು. ಈ ಹಲ್ಲೆಯಲ್ಲಿ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿರುವ ಆಯಿಷೇ ಘೋಷ್ ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ಮತ್ತು ಇತರ 20 ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳನ್ನು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಏಮ್ಸ್) ಆಸ್ಪತ್ರೆಯ ಆಘಾತ ಕೇಂದ್ರಕ್ಕೆ ಸೇರಿಸಲಾಗಿದೆ.

ಉಪಕುಲಪತಿಗಳು ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು ಪೋಲಿಸ್ ಮಧ್ಯಪ್ರವೇಶಕ್ಕೆ ಕೇಳುವ ಮೊದಲು ಹೀಗೆ ಹೊರಗಿನವರು ಒಳಬಂದು ಗಂಟೆಗಟ್ಟಲೆ ಕಾಲ ರಂಪಾಟ ಮಾಡಲು ಹೇಗೆ ಬಿಟ್ಟರು ಎಂಬುದು ಅರ್ಥವಾಗುತ್ತಿಲ್ಲ ಎಂದು ಪೊಲಿಟ್‌ಬ್ಯುರೊ ಆಶ್ಚರ್ಯ ವ್ಯಕ್ತಡಿಸಿದೆ. ಪೋಲಿಸ್ ಮಧ್ಯಪ್ರವೇಶವನ್ನು ಕೇಳಿದ್ದು ಕೂಡ ದಿಲ್ಲಿಯ ರಾಜ್ಯಪಾಲರು ಪೋಲಿಸರಿಗೆ ಕಾನೂನು–ವ್ಯವಸ್ಥೆಯನ್ನು ಪಾಲಿಸಿ, ಅಪರಾಧಿಗಳನ್ನು ಶಿಕ್ಷಿಸಿ ಎಂದು ನಿರ್ದೇಶನವನ್ನು ನೀಡಿದ ಮೇಲೆಯೇ.

ದೇಶದ ಈ ಪ್ರಧಾನ ವಿಶ್ವವಿದ್ಯಾಲಯವನ್ನು ವ್ಯವಸ್ಥಿತವಾಗಿ ಶಿಥಿಲಗೊಳಿಸುವ ಮತ್ತು ಕಳಚಿ ಹಾಕುವ ಸಾಧನವಾಗಿ ಬಿಟ್ಟಿರುವ ಈ ಉಪಕುಲಪತಿ ಗಂಟೆಗಟ್ಟಲೆ ಈ ರಂಪಾಟವನ್ನು ಯಾವುದೇ ಅಡೆ–ತಡೆಯಿಲ್ಲದೆ ನಡೆಸಲು ಅನುಮತಿ ನೀಡಿದ್ದಾರೆ. ಈ ಹಲ್ಲೆಯನ್ನು ನಡೆಸುವಲ್ಲಿ ಶಾಮೀಲಾಗಿರುವುದಕ್ಕೆ ಈ ಉಪಕುಲಪತಿಯನ್ನು ವಜಾ ಮಾಡಬೇಕಾಗಿದೆ.

ಈ ವಿಶ್ವವಿದ್ಯಾಲಯದ ಸಂದರ್ಶಕರಾಗಿರುವ ಭಾರತದ ರಾಷ್ಟ್ರಪತಿಗಳು ತಕ್ಷಣವೇ ಉಪಕುಲಪತಿಯನ್ನು ವಜಾ ಮಾಡಬೆಕು ಮತ್ತು ವಿ.ವಿ. ಆವರಣದಲ್ಲಿ ಸಾಮಾನ್ಯ ಸ್ಥಿತಿ ನೆಲೆಸುವಂತೆ ಖಾತ್ರಿಪಡಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಕೇಂದ್ರ ಗೃಹಮಂತ್ರಿಗಳು ಚಿತ್ರಿಸಲು ಯತ್ನಿಸಿರುವ ರೀತಿಯಲ್ಲಿ ಇದು ಎರಡು ಗುಂಪುಗಳ ನಡುವಿನ ತಿಕ್ಕಾಟವಲ್ಲ. ವ್ಯಾಪಕವಾಗಿ ಪ್ರಸಾರಗೊಂಡಿರುವ ಈ ರಂಪಾಟದ ವೀಡಿಯೋ ರೆಕಾರ್ಡಿಂಗ್‌ಗಳು ಮತ್ತು "ಯುನೈಟ್ ಅಗೆಂಸ್ಟ್ ಲೆಫ್ಟ್"ನಂತಹ ಗುಂಪುಗಳ ವಾಟ್ಸ್‌ಆಪ್ ಚಿತ್ರಗಳು ಈ ಹಲ್ಲೆ ಪೂರ್ವಯೋಜಿತ ಮತ್ತು ವಿ.ವಿ. ಅಧಿಕಾರಿಗಳಿಗೆ ಈ ಬಗ್ಗೆ ಸಂಪೂರ್ಣವಾಗಿ ಗೊತ್ತಿತ್ತು ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆ. ಈ ಹೊರಗಿನ ಮಂದಿ ಕೂಗುತ್ತಿದ್ದ ಘೋಷಣೆಗಳಿಂದ ಅವರು ಆರೆಸ್ಸೆಸ್–ಬಿಜೆಪಿಯ ಭಾಗ ಎಂಬುದು ಸ್ಪಷ್ಟವಾಗುತ್ತದೆ. ಈ ಗೂಂಡಾಗಳನ್ನು ತಕ್ಷಣವೇ ಶಿಕ್ಷಿಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಇರಾನಿನ ಉನ್ನತ ಸೇನಾಧಿಕಾರಿಯ ಹತ್ಯೆ –ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಇರಾನಿನ ಉನ್ನತ ಸೇನಾಧಿಕಾರಿ ಕಾಸ್ಸೀಮ್ ಸೊಲೈಮನಿಯವರನ್ನು ಅಮೆರಿಕಾ ಸಂಯುಕ್ತ ಸಂಸ್ಥಾನ ಬಾಗ್ದಾದ್ ವಿಮಾನ ನಿಲ್ದಾಣದ ಹೊರಗೆ ಡ್ರೋನ್ ದಾಳಿ ನಡೆಸಿ ಕೊಂದಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಒಂದು ಸಾರ್ವಭೌಮ ದೇಶದ ಸಶಸ್ತ್ರ ಪಡೆಗಳ ಮುಖ್ಯಸ್ಥರ ಹತ್ಯೆ ಟ್ರಂಪ್ ಆಡಳಿತದ ಒಂದು ಅಂತರ್ರಾಷ್ಟ್ರೀಯ ದರೋಡೆಕೋರ ಕೃತ್ಯ. ಇದು ಪಶ್ಚಿಮ ಏಶ್ಯ ಮತ್ತು ಕೊಲ್ಲಿ ಪ್ರದೇಶದ ಮೇಲೆ ಅಗಣಿತ ಪರಿಣಾಮಗಳನ್ನು ಉಂಟು ಮಡುತ್ತದೆ. ಇದರಿಂದಾಗಿ ಉಂಟಾಗುವ ಯಾವುದೇ ಸಂಘರ್ಷ ಮತ್ತು ಹಿಂಸಾಚಾರಕ್ಕೆ ಅಮೆರಿಕಾವೇ ಹೊಣೆಯಾಗುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಮೋದಿ ಸರಕಾರ "ಒಬ್ಬ ಹಿರಿಯ ಇರಾನೀ ಮುಖಂಡರನ್ನು ಅಮೆರಿಕ ಸಂಯುಕ್ತ ಸಂಸ್ಥಾನ ಕೊಂದಿದೆ ಎಂಬುದನ್ನು ಗಮನಿಸಿದೆ" ಯಷ್ಟೇ. ಈ ಹೀನ ಕೃತ್ಯಕ್ಕೆ ಅಸಮ್ಮತಿಯನ್ನು ಕೂಡ ಅದು ವ್ಯಕ್ತಪಡಿಸದಿರುವುದು ದುರದೃಷ್ಟಕರ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸರಕಾರ ಹೇಗೆ ಅಮೆರಿಕಾ ಸಂಯುಕ್ತ ಸಂಸ್ಥಾನದ ಒಂದು ವಿನಮ್ರ ಮಿತ್ರನಾಗಿ ಬಿಟ್ಟಿದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಟೀಕಿಸಿದೆ.

ಉತ್ತರಪ್ರದೇಶದ 'ಬದ್ಲಾ' ಆಡಳಿತದಲ್ಲಿ ಅಭೂತಪೂರ್ವ ಪೋಲೀಸ್ ಕ್ರೌರ್ಯ

ಸಿಎಎ ನಂತರದ ಘಟನಾವಳಿಯ ನ್ಯಾಯಾಂಗ ತನಿಖೆ–ಸುಭಾಷಿಣಿ ಆಲಿ ಆಗ್ರಹ



ಉತ್ತರ ಪ್ರದೇಶದ ಹಲವು ಜಿಲ್ಲೆಗಳು ಡಿಸೆಂಬರ್ ತಿಂಗಳ ಉತ್ತರಾರ್ಧದಲ್ಲಿ ಅಭೂತಪೂರ್ವ ಪೋಲೀಸ್ ಕ್ರೌರ್ಯವನ್ನು ಕಂಡಿವೆ. ಇದಕ್ಕೆ 21 ಜೀವಗಳ ಬಲಿಯಾಗಿದೆ. ಇದು ಯಾವುದೇ ಭಿನ್ನಾಭಿಪ್ರಾಯ ಮತ್ತು ಪ್ರತಿಭಟನೆ ಕುರಿತಂತೆ ಮುಖ್ಯಮಂತ್ರಿಯ ನಿಲುವಿನ ನೇರ ಪರಿಣಾಮವಾಗಿದೆ. ಪ್ರತಿಭಟನೆಕಾರರ ವಿರುದ್ಧ 'ಬದ್ಲಾ'(ಪ್ರತೀಕಾರ' ತಗೊಳ್ಳುವುದಾಗಿಯೂ, ಪ್ರತಿಭಟನೆಗಳ ಕಾಲದಲ್ಲಿ ನಡೆದ ಯಾವುದೇ ಹಾನಿಗೆ ಪ್ರತಿಭಟನಾಕಾರರು ಬೆಲೆ ತೆರುವಂತೆ ಮಾಡಲಾಗುತ್ತದೆ ಎಂದೂ ಆತ ಸಾರ್ವಜನಿಕವಾಗಿಯೇ ಹೇಳಿದ್ದಾರಲ್ಲದೆ, ಅದನ್ನೂ ಮೀರಿ ನಡೆದುಕೊಂಡಿದ್ದಾರೆ. ಹೀಗೆಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ ಹೇಳಿದ್ದಾರೆ. ಉತ್ತರಪ್ರದೇಶದ ಹಲವು ಕೇಂದ್ರಗಳಿಗೆ ಭೇಟಿ ನೀಡಿದ ನಂತರ ಅವರು ಜನವರಿ 7ರಂದು ಒಂದು ಪತ್ರಿಕಾಗೋಷ್ಠಿಯಲ್ಲಿ ಉತ್ತರಪ್ರದೇಶದ ಆಡಳಿತದ ಕ್ರೌರ್ಯದ ಹಲವು ಉದಾಹರಣೆಗಳನ್ನು ನೀಡಿದರು.

ಲಕ್ನೌ, ಕಾನ್ಪುರ, ಮೇರಠ್ ಮತ್ತು ಬಿಜನೌರ್ ಇವು ಅತಿ ಹೆಚ್ಚು ಪೀಡಿತ ಜಿಲ್ಲೆಗಳು. 11 ಸಾವುಗಳು, ಆಸ್ತಿಪಾಸ್ತಿಗಳ ಧ್ವಂಸ, ದುಷ್ಟ ಥಳಿಕೆಗಳು ಮತ್ತು ವ್ಯಾಪಕ ಬಂಧನಗಳು ಈ ನಾಲ್ಕು ಅತಿ ಹೆಚ್ಚು ಜಿಲ್ಲೆಗಳಲೇ ನಡೆದಿವೆ. ಸಾವಿಗೀಡಾದವರು ಎಲ್ಲರೂ ಮುಸ್ಲಿಂ ಯುವಕರು. ಹಲವಾರು ಬಡಕುಟುಂಬಗಳಿಗೆ 'ಹಾನಿ ವಸೂಲಿ'ಯ ನೋಟೀಸುಗಳು ಹೋಗಿವೆ. ಇವು ಎರಡು ಹೊತ್ತು ರೊಟ್ಟಿಗೂ ಗತಿಯಿಲ್ಲದ ಕುಟುಂಬಗಳು ಎಂದು ಅವರು ತಾವು ಕಂಡ ಹಲವಾರು ಉದಾಹರಣೆಗಳನ್ನು ನೀಡುತ್ತ ಹೇಳಿದರು.

ಒಂದನ್ನು ಬಿಟ್ಟು ಬೇರೆಲ್ಲ ಸಾವುಗಳು ಸಂಭವಿಸಿರುವುದು ಸಿಎಎ–ಎನ್‌ಪಿಆರ್–ಎನ್‌ಆರ್‌ಸಿಯ ವಿರುದ್ಧ ರಾಷ್ಟ್ರವ್ಯಾಪಿ ಪ್ರತಿಭಟನೆಯ ದಿನವಾದ ಡಿಸೆಂಬರ್ 19ರಂದಲ್ಲ, ಅದರ ಮರುದಿನ ಡಿಸೆಂಬರ್ 20ರ ಶುಕ್ರವಾರದಂದು, 10 ಜಿಲ್ಲೆಗಳಲ್ಲಿ ಜನಗಳು ನಮಾಜಿನಿಂದ ತಮ್ಮ ಮನೆಗಳಿಗೆ ಮರಳುವ ವೇಳೆಯಲ್ಲಿ. ಅಲ್ಪಸಂಖ್ಯಾತ ಸಮುದಾಯಗಳಲ್ಲಿ ಈ ಕ್ರಮಗಳ ಬಗ್ಗೆ, ಅದನ್ನು ವಿರೋಧಿಸಿದ ಜಾಮಿಯ ಮಿಲಿಯ, ಅಲಿಘಡ್ ವಿಶ್ವವಿದ್ಯಾಲಯಗಳಲ್ಲಿ ನಡೆದ ಘಟನೆಗಳಿಂದ ಎಲ್ಲೆಡೆಯೂ ಕ್ರೋಧದ ವಾತಾವರಣ ಉಂಟಾಗಿದೆ. ಆದರೆ ಎಲ್ಲೆಲ್ಲಿ ಹಿಂಸಾಚಾರಗಳು ನಡೆದಿವೆಯೋ ಅಲ್ಲೆಲ್ಲ ಅವು ಪೋಲೀಸ್ ಅಧಿಕಾರಿಗಳ ಪಕ್ಷಪಾತಪೂರ್ಣ ವರ್ತನೆಗಳು ಅಥವ ಆಡಳಿತದ ವಿಫಲತೆಗಳಿಂದಾಗಿಯೇ ನಡೆದಿವೆ ಎಂದು ಸುಭಾಷಿಣಿ ಆಲಿ ಹೇಳಿದರು.

ರಾಜ್ಯದ ಡಿಜಿಪಿ ಪೋಲಿಸರು ಒಂದೇ ಒಂದು ಗುಂಡು ಹಾರಿಸಲಿಲ್ಲ ಎಂದರು .ಆದರೆ ಸುಮಾರಾಗಿ ಎಲ್ಲ ಸಾವುಗಳೂ ಗುಂಡೇಟಿನಿಂದಲೇ ಸಂಭವಿಸಿರುವುದುಕಂಡು ಬಂದಿದೆ. ನಂತರ ಒಂದು ಸಾವು ಪೋಲಿಸ್ ಗುಂಡೇಟಿನಿಂದ ಸಂಭವಿಸಿದೆ ಎಂದು ಪೋಲೀಸರೂ ಒಪ್ಪಿಕೊಂಡರು, ಆದರೆ ಸಂಬಂಧಪಟ್ಟ ಅಧಿಕಾರಿ ಆತ್ಮರಕ್ಷಣೆಗೆ ಗುಂಡು ಹಾರಿಸಿದರು ಎಂದು ಸಮರ್ಥಿಸಿಕೊಂಡರು. ಆ ಅಧಿಕಾರಿಗೆ ಯಾವುದೇ ಗಾಯಗಳಾಗಿಲ್ಲ. ಮರಣೋತ್ತರ ಪರೀಕ್ಷೆಗಳ ಫಲಿತಾಂಶಗಳನ್ನು ಕೇವಲ ಎರಡು ಪ್ರಕರಣಗಳಲ್ಲಿ ಮಾತ್ರ ಸಂಬಂಧಿಕರಿಗೆ ನೀಡಲಾಗಿದೆ, ಇವೆರಡೂ ಗುಂಡೇಟಿನಿಂದ ಸಾವು ಸಂಭವಿಸಿರುವುದನ್ನು ತೋರಿಸಿವೆ.

ಪೋಲೀಸ್ ದಾವೆಗಳಿಗೆ ವ್ಯತಿರಿಕ್ತವಾಗಿ ಕಾನ್ಪುರದಲ್ಲಿ ಪೋಲೀಸ್ ಗೋಲೀಬಾರಿನ ಮತ್ತು ಪೋಲಿಸರೇ ಖಾಸಗೀ ಕಾರುಗಳಿಗೆ ಹಾನಿಯುಂಟುಮಾಡುತ್ತಿರುವ

ಪುಟ 14 ನೋಡಿ

ಸಂಪಾದಕೀಯ

ಕರ್ನಾಟಕದ ವಿದ್ಯಾರ್ಥಿಗಳೂ ಅಭಿನಂದನಾರ್ಹರು

"ಅವರಿಗೆ ರಾಜಕೀಯ ಕಾರ್ಯಕರ್ತರನ್ನು ಪ್ರಶ್ನಿಸುವ ಹಕ್ಕನ್ನು ಕೊಟ್ಟವರಾರು"? ಎಂದು ಯಾರು, ಯಾವ ಸಂದರ್ಭದಲ್ಲಿ ಕೇಳಿದರು ಎಂಬ ಬಗ್ಗೆ ನಿಮಗೆ ಗೊಂದಲ ಉಂಟಾಗಬಹುದು. ಜ್ಯೋತಿ ನಿವಾಸ್ ಕಾಲೇಜ್ ವಿದ್ಯಾರ್ಥಿನಿಯರಿಗೂ ಪೌರತ್ವ ತಿದ್ದುಪಡೆ ಕಾಯ್ದೆ ಪರವಾಗಿ ಸಹಿ ಸಂಗ್ರಹಕ್ಕಾಗಿ ಅಲ್ಲಿಗೆ ಬಂದಿದ್ದ ಬಿಜೆಪಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆದ ಒಂದು ದಿನದ ನಂತರ ರಾಜ್ಯದ ಉಪ ಮುಖ್ಯಮಂತ್ರಿಗಳಲ್ಲಿ ಒಬ್ಬವರಾದ ಸಿ.ಎನ್. ಅಶ್ವಥ್ ನಾರಾಯಣರವರು ಮೇಲಿನಂತೆ ಆರ್ಭಟಿಸಿದ್ದರು. ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಮಾನ್ಯ ಮುಖ್ಯಮಂತ್ರಿಗೆ ಈ ರೀತಿ ಅಬ್ಬರಿಸಲು ಎಷ್ಟು ಅಧಿಕಾರ ಇದೆಯೋ ಅಷ್ಟೇ ಅಧಿಕಾರ ಇಡೀ ವಿದ್ಯಾರ್ಥಿ ಸಮುದಾಯಕ್ಕೆ ಇದೆ ಎಂದು ತಿಳಿಸೋಣವೇ? ಇದೊಂದು ಬಗೆಯ ಆಧುನಿಕ ಪಾಳೆಗಾರರ ಅಂದರೆ ಬಂಡವಾಳಶಾಹಿ ಪಾಳೆಗಾರರ ಆರ್ಭಟ! ಅದರಲ್ಲಿಯೂ ಮಾನ್ಯ ಅಶ್ವತ್ಥ ನಾರಾಯಣ ರವರು ಉನ್ನತ ಶಿಕ್ಷಣ ಖಾತೆಯ ಸಚಿವರಾಗಿರುವುದರಿಂದ ರಾಜ್ಯದ ವಿದ್ಯಾರ್ಥಿಗಳೆಲ್ಲರೂ ಪ್ರತಿಯೊಂದಕ್ಕೂ ಅವರ ಅನುಮತಿ ಪಡೆಯಬೇಕೆಂದು ಬಯಸುತ್ತಿದ್ದರೆ ಅದು ಸರಿಯೇ ಇರಬಹುದಾ?

ಬೆಂಗಳೂರಿನ ಜ್ಯೋತಿನಿವಾಸ್ ಕಾಲೇಜಿನ ವಿದ್ಯಾರ್ಥಿನಿಯರನ್ನು ನಾವು ಮೆಚ್ಚಬೇಕು. ಅವರ ನಿಷ್ಕಮಲ ಮನಸಿನ ಧೈರ್ಯಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕು. ಜೆಎನ್‌ಯು ಕಾಲೇಜಿನ ಆ ದಿಟ್ಟ ವಿದ್ಯಾರ್ಥಿನಿಯರಿಂದ ತೀವ್ರ ಮುಖ ಭಂಗಕ್ಕೆ ಒಳಗಾದ ಬಿಜೆಪಿ ಕಾರ್ಯಕರ್ತರು ಕ್ಷೇತ್ರದ ಶಾಸಕರೂ ಸನ್ಮಾನ್ಯ ಸಚಿವರೂ ಆಗಿರುವ ಅಶ್ವತ್ಥ ನಾರಾಯಣರನ್ನು ಬೇಟಿಯಾಗಿ, ಆ ಕಾಲೇಜನ್ನು ರಾಜಕೀಯವಾಗಿ ಬಳಕೆ ಮಾಡಲು ಬಿಡಬಾರದೆಂದು ಕೋರಿದ್ದಾರೆ. ಕಾಲೇಜಿನ ವಿದ್ಯಾರ್ಥಿನಿಯರ ವರ್ತನೆಯನ್ನು ಖಂಡಿಸಿದ ಸಚಿವರೂ "ಅವರಿಗೆ ರಾಜಕೀಯ ಕಾರ್ಯಕರ್ತರನ್ನು ಪ್ರಶ್ನಿಸಲು ಅಧಿಕಾರ ಕೊಟ್ಟವರಾರು" ಎಂದು ಪ್ರಶ್ನೆ ಮಾಡಿದ್ದಾರೆ.

ಸಂಬಂದಪಟ್ಟ ಆ ವಿದ್ಯಾರ್ಥಿನಿಯರು ಮತದಾನದ ಹಕ್ಕು ಪಡೆದವರಾಗಿರುತ್ತಾರೆ. ಅವರಲ್ಲಿ ಕೆಲವರು ಮಾನ್ಯ ಸಚಿವರಿಗೆ ಮತ ಹಾಕಿದವರೂ ಆಗಿರಬಹುದು. ಬಿಜೆಪಿ ನವ ಮತದಾರರ ಬಗ್ಗೆ, ಯುವ ಮತದಾರರ ಬಗ್ಗೆ ಚುನಾವಣೆಗಳು ಮುಗಿದ ಮೇಲೆ ಆ ಕಾಳಜಿ ಇರುವುದಿಲ್ಲ ಎಂಬುದು ಮೇಲಿನ ಘಟನೆ ಸಾಬೀತು ಪಡಿಸುತ್ತದೆ. ಅವರ ಮತ ಪಡೆದು ಜನಪ್ರತಿನಿಧಿ ಎಂಬ ಆಯ್ಕೆಯಾದವರನ್ನು ಬಿಡಿ, ಕನಿಷ್ಠ ತಾವು ಮತ ಹಾಕಿ ಗೆಲ್ಲಿಸಿದ ಪಕ್ಷದ ಕಾರ್ಯಕರ್ತರನ್ನು ಸಹ ಏನನ್ನೂ ಕೇಳುವ, ಪ್ರಶ್ನೆ ಮಾಡುವ ಹಕ್ಕೇ ಇಲ್ಲ ಎನ್ನುವುದಾದರೆ ಇದು ಪ್ರಜಾಪ್ರಭುತ್ವವೇ ಅಥವಾ ಸರ್ವಾಧಿಕಾರವೆ? ಬಿಜೆಪಿಗೆ ಆ ವಿದ್ಯಾರ್ಥಿಗಳು ಮತ ಹಾಕಿರಬಾರದು. ಇನ್ನೊಮ್ಮೆ ಅವರು ಆ ತಪ್ಪು ಮಾಡಲಾರರು.

ಪೌರತ್ವ ತಿದ್ದುಪಡಿ ಕಾಯ್ದೆ ಪರ ಸಹಿ ಸಂಗ್ರಹಕ್ಕೆ ಆಕ್ಷೇಪ ಎತ್ತಿದ ವಿದ್ಯಾರ್ಥಿಯರನ್ನು ಬಿಜೆಪಿ ಕಾರ್ಯಕರ್ತರು "ಪಾಕಿಸ್ತಾನಕ್ಕೆ ಹೋಗಿ" ಎಂದೂ "ರಾಷ್ಟ್ರ ವಿರೋಧಿಗಳು" ಎಂದೂ ನಿಂದಿಸಿದ್ದಾರೆ ಮಾತ್ರವಲ್ಲ "ಜೆಎನ್‌ಯು ಮಾದರಿಯಲ್ಲಿ ಹಲ್ಲೆ ಮಾಡುತ್ತೇವೆ" ಎಂದು ಬೆದರಿಸಲು ಮರೆಯಲಿಲ್ಲ. ಜೆಎನ್‌ಯುನ ವಿದ್ಯಾರ್ಥಿ ಸಂಘಟನೆಯ ಚುನಾಯಿತ ಅಧ್ಯಕ್ಷ ಆಯಿಷಿ ಘೋಷ್ ಎಂಬ ಮುಗ್ಧ ಯುವತಿಯ ಮೇಲೆ ಎಬಿವಿಪಿ ಹಲ್ಲೆಕೋರರು ಮಾರಣಾಂತಿಕ ಹಲ್ಲೆ ಮಾಡಿದ್ದಾರೆ. ದೆಹಲಿಯಲ್ಲಾಗಲಿ, ಕರ್ನಾಟಕದಲ್ಲಾಗಲಿ ಸಂಘ ಸಂತತಿಯವರ ನಡವಳಿಕೆ ಒಂದೇಯಾಗಿದೆ. ಆರೆಸ್ಸೆಸ್ ಗರಡಿಯಲ್ಲಿ ತಯಾರಾದವರೆಲ್ಲ ಹೀಗೇ ಇರುತ್ತಿದ್ದಿರಬಹುದು.

ಜೆಎನ್‌ಯು ವಿದ್ಯಾರ್ಥಿಗಳು ಅಭಿನಂದನಾರ್ಹರು. ಅವರಿಗೆ ರಾಜಕೀಯ ಸ್ಪಷ್ಟತೆ ಇದೆ. ಅವರು ಸಂಘ ಪರಿವಾರದವರ ಬೆದರಿಕೆಗಳಿಗೆ, ಹೇಡಿತನದ ಹಲ್ಲೆಗಳಿಗೆ ಬೆದರುವವರಲ್ಲ. ಕೇಂದ್ರ ಸರ್ಕಾರದ ದುರುದ್ದೇಶದ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ಅವರು ಅರ್ಥಮಾಡಿಕೊಂಡಿದ್ದಾರೆ. ನಮ್ಮ ವಿದ್ಯಾರ್ಥಿ ಸಮುದಾಯದ ನಿರ್ಮಲ ಮನಸ್ಸುಗಳಲ್ಲಿ ವಿಷಬೀಜ ಬಿತ್ತುವ ಸಂಘ ಪರಿವಾರದ ಪ್ರಯತ್ನಕ್ಕೆ ಅವರ ಸಹಕಾರವಿಲ್ಲ. ಮತಧರ್ಮದ ಆಧಾರದಲ್ಲಿ ಪೌರತ್ವ ನೀಡುವ ಆ ಕರಾಳ ಕಾಯ್ದೆ ಎಲ್ಲ ಮರ್ಮವನ್ನು ಅವರು ಅರಿತುಕೊಂಡಿದ್ದಾರೆ. ಅವರು ಬಣ್ಣದ ಮಾತುಗಳಿಗೂ ಮೋಸಹೋಗುವವರಲ್ಲ. ಬೆದರಿಕೆಯ ಮಾತುಗಳಿಗೂ ಬಗ್ಗುವವರಲ್ಲ. ಅವರು ಹುಟ್ಟಿನಿಂದ ಹಿಂದುಗಳು, ಮುಸಲ್ಮಾನರು, ಸಿಕ್ಕರು, ಕ್ರೈಸ್ತರು, ಬೌದ್ಧರು ಇರಬಹುದು. ಆದರೆ ಅವರು ಪರಸ್ಪರ ಸ್ನೇಹಿತರು, ಪರಸ್ಪರ ಆಪ್ತರು. ಅವರ ನಡುವೆ ದ್ವೇಷಕ್ಕೆ ಅವರು ಅವಕಾಶ ನೀಡಲು ಸಿದ್ಧರಿಲ್ಲ ಎಂಬುದನ್ನು ಅವರು ತೋರಿದ್ದಾರೆ. ನಮ್ಮ ಸಂವಿಧಾನದ ರಕ್ಷಣೆಯ ಪ್ರಜಾಪ್ರಭುತ್ವವಾದಿ ಹೋರಾಟದಲ್ಲಿ ಮುಂಚೂಣಿಯ ಪಾತ್ರವನ್ನು ನಿರ್ವಹಿಸಿರುವ ನಮ್ಮ ವಿದ್ಯಾರ್ಥಿ ಸಮುದಾಯವನ್ನು ಅಭಿನಂದಿಸೋಣ.

ಕರ್ನಾಟಕದ ವಿದ್ಯಾರ್ಥಿ ಸಮುದಾಯ ಈ ವಿಷಯದಲ್ಲಿ ಹಿಂದೆ ಉಳಿಯಲಿಲ್ಲ. ಬೆಂಗಳೂರು ಪುರಭವನ ಎದುರು ದಿನಗಟ್ಟಲೆ ನಡೆದ ಪ್ರತಿಭಟನೆಯಲ್ಲಿ, ನಗರದ ಗಾಂಧಿ ನಗರ ವೃತ್ತದಲ್ಲಿ, ಮೈಸೂರ್‌ನಲ್ಲಿ, ಕಲ್ಬುರ್ಗಿಯಲ್ಲಿ, ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ನಮ್ಮ ದೇಶದ ಸುಪುತ್ರ ಸುಪುತ್ರಿಯರು ತಮ್ಮ ಸಾತ್ವಿಕವಾದ ಪ್ರತಿಭಟನೆಯನ್ನು ಮಾಡಿದ್ದಾರೆ. ಉತ್ತರ ಭಾರತದ ಇತರ ಕೆಲವು ವಿಶ್ವವಿದ್ಯಾಲಯಗಳಲ್ಲಿಯೂ ಹೋರಾಟ ನಡೆಯುತ್ತಿದೆ. ಶಿಕ್ಷಕರು, ಕನ್ನಡದ ಸಾಹಿತಿಗಳು, ಎಲ್ಲಾ ಮತಧರ್ಮಗಳ ಗುರುವರ್ಗದವರು ಈ ಚಳುವಳೀಗೆ ತಮ್ಮ ಬೆಂಬಲ ನೀಡಿದ್ದಾರೆ. ಈ ಬೆಂಬಲ ಹೆಚ್ಚಾಗಬೇಕು. ನಮ್ಮ ನಾಡಿನ ಕಾರ್ಮಿಕ ವರ್ಗ, ರೈತರು, ಕೂಲಿಕಾರರು ಈ ಹೋರಾಟವನ್ನು ಗುರಿಮುಟ್ಟುವ ವರೆಗೆ ಮುಂದುವರೆಸಲು ಎಲ್ಲರೂ ಒಂದಾಗಿ ಮುಂದಾಗಬೇಕು.

ಜಮ್ಮು ಮತ್ತು ಕಾಶ್ಮೀರದಲ್ಲಿ ಎಲ್ಲ ನಿರ್ಬಂಧಗಳನ್ನು ತೆಗೆಯಬೇಕು –ಸಿಪಿಐ(ಎಂ) ಪೊಲಿಟ್‌ಬ್ಯುರೊ

ಸುಪ್ರಿಂಕೋರ್ಟ್ ಜಮ್ಮು ಮತ್ತು ಕಾಶ್ಮೀರದಲ್ಲಿ ನಾಗರಿಕ ಸ್ವಾತಂತ್ರ್ಯಗಳ ಮೇಲೆ ಹೇರಿರುವ ನಿರ್ಬಂಧಗಳ ಬಗ್ಗೆ ಮಹತ್ವದ ಟಿಪ್ಪಣಿಗಳನ್ನು ಮಾಡಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಇವು ಕೇಂದ್ರ ಸರಕಾರವು ಪರಿಸ್ಥಿತಿ ಸಾಮಾನ್ಯವಾಗಿದೆ ಎಂಬ ಸುಳ್ಳು ದಾವೆಗಳನ್ನು ದೇಶಕ್ಕೆ ಮತ್ತು ಜಗತ್ತಿನ ಮುಂದೆ ಬಿತ್ತರಿಸುತ್ತಿರುವುದನ್ನು ಹುಸಿಗೊಳಿಸಿರುವಂತವುಗಳು.

ಈ ತೀರ್ಪು ಬರುವ ಮುನ್ನಾದಿನ ಕೇಂದ್ರ ಸರಕಾರತನ್ನ ಈ ಅಧಿಕೃತ ದಾವೆಗಳನ್ನು ವಿದೇಶಿ ರಾಯಭಾರಿಗಳ ಒಂದು ಗುಂಪನ್ನು ಜಮ್ಮು ಮತ್ತು ಕಾಶ್ಮೀರದ ಒಂದು ಸೀಮಿತ ಪ್ರಹಸನಕಾರೀ ಪ್ರವಾಸಕ್ಕೆ ಒಯ್ಯುವ ಮೂಲಕ ಬಲಪಡಿಸುವ ಪ್ರಯತ್ನವನ್ನು ನಡೆಸಿತು. ಅಲ್ಲಿ ಅವರು ಸರಕಾರ ತೋರಿಸಿದ್ದನ್ನಷ್ಟೇ ನೋಡಬೇಕಾಗಿತ್ತು, ಹೇಳಿದ್ದನ್ನಷ್ಟೇ ಕೇಳಬೇಕಾಗಿತ್ತು. ಆದ್ದರಿಂದ ಅವರು ಯಾರೂ ಇನ್ನೂ ಜೈಲಿನಲ್ಲೇ ಇರುವ ಮೂವರು ಮಾಜಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ಆಗಲಿಲ್ಲ. ನಿರ್ಬಂಧಗಳನ್ನು ಹೇರಿದಐದು ತಿಂಗಳುಗಳ ನಂತರ ಈ ದೇಶದ ಜನಗಳನ್ನು ಪ್ರತಿನಿಧಿಸುವ ರಾಜಕೀಯ ಮುಖಂಡರು, ಸಂಸತ್ ಸದಸ್ಯರು ಮತ್ತು ಪಕ್ಷಗಳು ಕಾಶ್ಮೀರಕ್ಕೆ ಭೇಟಿ ನೀಡದಂತೆ ಸುಮಾರಾಗಿ ನಿಷೇಧವನ್ನೇ ಹೇರಿರುವಾಗ ಇಂತಹ ಪ್ರವಾಸ ಭಾರತದ ಸಂಸತ್ತಿಗೆ ಮಾಡಿರುವ ಅವಮಾನ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಸುಪ್ರಿಂಕೋರ್ಟ್ ಇಂಟರ್ನೆಟ್ ಸೇವೆಗಳ ಮೇಲೆ ಅನಿರ್ದಿಷ್ಟ ನಿಷೇಧವನ್ನು ಟೀಕಿಸಿದೆ. ಇಂಟರ್ನೆಟ್ ಬಳಕೆ ಒಂದು ಸಂವಿಧಾನಿಕ ಹಕ್ಕು, ಮತ್ತು ವಾಕ್ ಸ್ವಾತಂತ್ರ್ಯ ಹಾಗು ಅಭಿವ್ಯಕ್ತಿ ಸ್ವಾತಂತ್ರ್ಯದ ಒಂದು ಭಾಗ ಎಂದು ಅದು ಹೇಳಿದೆ. ಸೆಕ್ಷನ್ 144ನ್ನು ಭಿನ್ನಅಭಿಪ್ರಾಯವನ್ನು ದಮನ ಮಾಡುವ ಒಂದು ಸಾಧನವಾಗಿ ಮತ್ತೆ–ಮತ್ತೆ ಬಳಸಲು ಸಾಧ್ಯವಿಲ್ಲ ಎಂದೂ ಸುಪ್ರಿಂಕೋರ್ಟ್ ಹೇಳಿದೆ. ಇಂತಹ ಎಲ್ಲ ಆದೇಶಗಳ ಪರಾಮರ್ಶೆಯನ್ನು ಒಂದು ವಾರದ ಒಳಗೆ ಮಾಡಬೇಕು ಎಂದು ಆದೇಶಿಸುತ್ತ, ಸರಕಾರ ಇಂತಹ ಆದೇಶಗಳನ್ನು ಸಾರ್ವಜನಿಕಗೊಳಿಸಬೇಕು, ಈ ಮೂಲಕ ಬಾಧಿತ ನಾಗರಿಕರು ಅವಕ್ಕೆ ಸವಾಲು ಹಾಕುವ ಹಕ್ಕು ಹೊಂದುವಂತಾಗಬೇಕು ಎಂದು ಹೇಳಿದೆ.

ಕೇಂದ್ರ ಸರಕಾರ ಈ ಎಲ್ಲ ನಿರ್ಬಂಧಗಳನ್ನು ತೆಗೆಯಬೇಕು, ಇಂಟರ್ನೆಟ್ ಸೇವೆಗಳನ್ನು ಪೂರ್ಣವಾಗಿ ತೆರೆಯಬೇಕು, ಸೆಕ್ಷನ್ 144ನ್ನು ತೆಗೆಯಬೇಕು ಮತ್ತು ಕಾಶ್ಮೀರದ ಜನತೆಗೆ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಜಾಸತ್ತಾತ್ಮಕ ಹಕ್ಕುಗಳು ಲಭ್ಯವಾಗುವಂತೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.





ಸಂಘರ್ಷ ಮತ್ತು ಸಾಂಸ್ಕೃತಿಕ ಅನನ್ಯತೆಯ ಪ್ರತೀಕವಾದ ಆದಿವಾಸಿ ಸಮ್ಮೇಳನ

ಆದಿವಾಸಿಗಳ ಮೇಲಿನ ಧಾಳಿಗಳ ವಿರುದ್ಧ ಎಲ್ಲಾ ಸಮುದಾಯಗಳ ಒಗ್ಗಟ್ಟಿಗೆ ಕರೆ

ಶ್ರೀಧರ ನಾಡ

ಆದಿವಾಸಿ ಸಮುದಾಯಗಳ ಮೇಲೆ ಹೆಚ್ಚುತ್ತಿರುವ ದಾಳಿಗಳನ್ನು ಹಿಮ್ಮೆಟ್ಟಿಸಿ ಪ್ರತಿರೋಧಿಸುವುದು ಮತ್ತು ಬದುಕಿನ ಮೂಲ ನೆಲೆಗಳನ್ನು ಉಳಿಸಿಕೊಳ್ಳಲು ಪ್ರಬಲ ಐಕ್ಯ ಆಂದೋಲನವನ್ನು ನಡೆಸುವುದು ತುರ್ತು ಅತ್ಯಗತ್ಯವೆಂದು ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಮೂರನೇ ಸಮ್ಮೇಳನ ಪ್ರತಿಪಾದಿಸಿತಲ್ಲದೇ ಅದಕ್ಕಾಗಿ ಸಮುದಾಯಗಳ ನೆಲೆಗಳಲ್ಲಿ ಹಲವು ಸಂಘಟನೆಗಳು ಇರಬಹುದಾದರೂ ಎಲ್ಲರನ್ನೂ ಬಾಧಿಸುವ ನೀತಿಗಳ ವಿರುದ್ಧ ಎಲ್ಲರೂ ಒಗ್ಗೂಡಿ ಹೋರಾಟ ನಡೆಸುವುದು ಅತ್ಯಗತ್ಯವೆಂದು ಈ ದೆಸೆಯಲ್ಲಿ ಐಕ್ಯ ಕಾರ್ಯಾಚರಣೆಗೆ ಮುಂದಾಗಬೇಕೆಂದು ಕರೆ ನೀಡಿತು. ಈ ದೆಸೆಯಲ್ಲಿ ಮುತುವರ್ಜಿ ವಹಿಸಲು ನಿರ್ಧರಿಸಿತು.

ಪ್ರಭಾವಶಾಲಿ ಹೋರಾಟಗಳು

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಮೂರನೇ ರಾಜ್ಯ ಸಮ್ಮೇಳನ ಇದೇ 2019 ಡಿಸೆಂಬರ್ 21 ಮತ್ತು 22ರಂದು ಶಿವಮೊಗ್ಗ ಜಿಲ್ಲೆಯ ಹೊಸನಗರದಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ಆದಿವಾಸಿ ಸಂಘಕ್ಕೆ ಈಗ ಒಂದು ದಶಕದ ಮುನ್ನಡೆ. 2010ರಲ್ಲಿ ಮೈಸೂರಿನ ಕಲಾಭವನದಲ್ಲಿ ಮೊದಲನೆಯ ಸಮಾವೇಶ ಅತ್ಯಂತ ಯಶಸ್ವಿಯಾಗಿ, ಬಳಿಕ 2013 ಡಿಸೆಂಬರ್ 19 ಮತ್ತು 20 ರಂದು ಕೊಡಗು ಜಿಲ್ಲೆಯ ಸಿದ್ದಾಪುರದಲ್ಲಿ 2ನೇ ರಾಜ್ಯ ಸಮಾವೇಶ ಜರುಗಿತು. ಆ ಈ ಅವಧಿಯಲ್ಲಿ ಅನೇಕ ಹೋರಾಟಗಳು, ಚಟುವಟಿಕೆ–ಕಾರ್ಯಕ್ರಮಗಳ ಮೂಲಕವಾಗಿ ಆದಿವಾಸಿ ಸಮುದಾಯಗಳ ನಡುವೆ ತನ್ನನ್ನು ತಾನು ತೊಡಗಿಸಿಕೊಂಡು ವ್ಯಾಪಕಗೊಳ್ಳಲು ಮುಂದಾಗಿದೆ. ಸಂಘಟನೆ ರಾಜ್ಯ ಮತ್ತು ದೇಶದಲ್ಲಿ ಗಮನಸೆಳೆದ ಹಲವು ಹೋರಾಟಗಳನ್ನು ಸಂಘಟಿಸಿದೆ. ಬೆಳ್ತಂಗಡಿಯ ವಿಠಲ ಮಲೆಕುಡಿಯ ಮತ್ತು ಅವರ ತಂದೆಯ ಮೇಲೆ ಹೂಡಲಾದ ಸುಳ್ಳು ಮೊಕದ್ದಮೆ, ಬೆಳ್ತಂಗಡಿ ತಾಲೂಕಿನ ನೆರಿಯ ಪ್ರದೇಶದ ಸುಂದರ ಮಲೆಕುಡಿಯ ಮತ್ತು ಅವರ ಕುಟುಂಬದ ಮೇಲೆ ಭೂದಾಹಿಗಳು ನಡೆಸಿದ ಮಾರಣಾಂತಿಕ ಹಲ್ಲೆ,ಬಾಂಜಾರು ಮಲೆಕುಡಿಯ ಪ್ರದೇಶದ ರಾಷ್ಟ್ರೀಯ ಉದ್ಯಾನವನದಲ್ಲಿನ ಅಭಿವೃದ್ಧಿ ಕೆಲಸಗಳು, ಮಂಗಳೂರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿರ್ವಸತೀಕರಣಗೊಂಡ ಕೊರಗ ಸಮುದಾಯದ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ದೀರ್ಘಕಾಲದ ಯಶಸ್ವಿ ಹೋರಾಟ, ಕೊಡಗು ಜಿಲ್ಲೆಯ ದಿಡ್ಡಳ್ಳಿ ಪ್ರದೇಶದ ಆದಿವಾಸಿಗಳಿಗೆ ವಸತಿಗಾಗಿ ಹಾಗೂ ಕೊಡಗು ಜಿಲ್ಲೆಯ ಆದಿವಾಸಿಗಳಿಗೆ ಭೂಮಿ ಮತ್ತು ಸಮುದಾಯದ ಹಕ್ಕುಗಳು, ಜೀತ ಪದ್ಧತಿ ವಿರುದ್ಧ ಹಾಗೂ ನಾಗರಿಕ ಸೌಲಭ್ಯಗಳಿಗಾಗಿ, ದಬ್ಬಾಳಿಕೆಗಳ ವಿರುದ್ಧ ನಡೆದ ಹೋರಾಟಗಳು, ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ನಿಟ್ಟೂರು ಪ್ರದೇಶದಲ್ಲಿ ಅರಣ್ಯ ಹಕ್ಕುಗಳ ಕಾಯ್ದೆಯಂತೆ ಭೂಮಿ ಮತ್ತು ಸಮುದಾಯದ ಹಕ್ಕುಗಳಿಗಾಗಿ ನಡೆದ ನಿರಂತರ ಧರಣಿ ಸತ್ಯಾಗ್ರಹ ಮತ್ತು ಯಶಸ್ಸು, ಉತ್ತರ ಕನ್ನಡದಲ್ಲಿ ಕುಣಬಿ, ಹಾಲಕ್ಕಿ, ಕುಂಬ್ರಿಮರಾಠಿ, ಗೌಳಿ, ಮುಂತಾದ ಸಮುದಾಯಗಳನ್ನು ಎಸ್ಟಿ ಪಟ್ಟಿಗೆ ಸೇರಿಸಲು ನಡೆಸಲಾದ ಪ್ರಯತ್ನಗಳು, ಮೈಸೂರಿನ ನಾಗರಹೊಳೆ ಪ್ರದೇಶದ ನಾಗಾಪುರ ಹಾಡಿ ಪರಿಸರದ ಸಮಸ್ಯೆಗಳಿಗಾಗಿ ನಡೆಸಲಾದ ಜಿಲ್ಲಾ ಮಟ್ಟದ ಕಾಲ್ನಡಿಗೆ ಜಾಥಾ ಮತ್ತು ವಿವಿಧ ಹಂತದ ಹೋರಾಟಗಳು, ರಾಮನಗರ ಜಿಲ್ಲೆಯಲ್ಲಿ ಇರುಳಿಗರು ಸಮುದಾಯ ನಡೆಸಿದ ಭೂಮಿ ಹಕ್ಕಿನ ಹೋರಾಟಕ್ಕೆ ಸಕ್ರಿಯ ಬೆಂಬಲ, ಹೀಗೆ ಅನೇಕ ಪ್ರಮುಖ ಹೋರಾಟಗಳನ್ನು ಗುರುತಿಸಬಹುದು. ರಾಜ್ಯ ಮತ್ತು ಕೇಂದ್ರ ಸರ್ಕಾರದ ನೀತಿಗಳ ಆಘಾತಕಾರಿ ಪರಿಣಾಮಗಳ ವಿರುದ್ಧ ಹೋರಾಟವನ್ನು ನಡೆಸುತ್ತಲೇ ಸ್ಥಳೀಯ ಹಲವಾರು ಬೇಡಿಕೆಗಳಿಗಾಗಿ ವಿವಿಧ ಸ್ವರೂಪದ ಹೋರಾಟಗಳು ಚಟುವಟಿಕೆಗಳನ್ನು ನಡೆಸಲಾದುದು ಆದಿವಾಸಿ ಸಮುದಾಯಗಳ ನಡುವಿನಲ್ಲಿ ಬಹುದೊಡ್ಡ ಆತ್ಮವಿಶ್ವಾಸವನ್ನು ಸೃಷ್ಟಿಸುವಲ್ಲಿ ಸಂಘವು ಯಶಸ್ವಿಯಾಗಿದೆ. ಈ ಕಾರಣದಿಂದ ಸಂಘಟನೆ ವಿವಿಧ ಸಮುದಾಯಗಳ ನಡುವೆ ವಿಸ್ತರಣೆಯನ್ನು ಪಡೆಯುತ್ತಾ ನೆಲೆಗೊಳ್ಳುತ್ತಿದೆ.

ಸಾಂಸ್ಕೃತಿಕ ಸಂಭ್ರಮ

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಗೆ ಹತ್ತು ವರ್ಷಗಳಾಗುತ್ತಿರುವ ಈ ಒಂದು ಸಂದರ್ಭದಲ್ಲಿ ಮೂರನೇ ರಾಜ್ಯ ಸಮ್ಮೇಳನವನ್ನು ವಿಭಿನ್ನವಾಗಿ ಸಂಘಟಿಸಿತು. ಒಂದೆಡೆ ಸಮ್ಮೇಳನದ ಕಲಾಪಗಳ ಜೊತೆಗೆ ಆದಿವಾಸಿಗಳ ಸಾಂಸ್ಕೃತಿಕ ಸಂಭ್ರಮ ಈ ಬಾರಿಯ ವಿಶೇಷತೆ.ಸಮ್ಮೇಳನವು 21ರಂದು ಉದ್ಘಾಟನೆಗೊಂಡ ಬಳಿಕ ನಡೆದ ಪ್ರತಿನಿಧಿಗಳ ಅಧಿವೇಶನದ ನಂತರದಲ್ಲಿ ನಡೆಸಲಾದ ಸಾಂಸ್ಕೃತಿಕ ಕಲಾ ಪ್ರದರ್ಶನ ಎಲ್ಲರ ಗಮನವನ್ನು ಸೆಳೆಯಿತು. ಸಮ್ಮೇಳನವು ಆದಿವಾಸಿಗಳ ಸಂಘರ್ಷದ ಮತ್ತು ಸಾಂಸ್ಕೃತಿಕ ಅನನ್ಯತೆಯ ಸಂಕೇತವಾಗಿ ಪ್ರತಿ ಧ್ವನಿಸಿತು.

ನಿರ್ಭಂಧಗಳ ನಡುವೆ ಯಶಸ್ಸು

ಪೌರತ್ವ ಕಾಯ್ದೆ ಅಂಗೀಕಾರ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಘೋಷಿಸಿದ 144ನೇ ಕಲಮಿನ ನೆಪದಲ್ಲಿ ಸಾಂಸ್ಕೃತಿಕ ಮೆರವಣಿಗೆಗೆ ಅನುಮತಿ ದೊರೆಯದಿದ್ದರೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. 21 ರಂದು ಮಧ್ಯಾಹ್ನ ಹಿರಿಯ ಜಾನಪದ ವಿದ್ವಾಂಸರಾಗಿ, ಆದಿವಾಸಿಗಳಿಗಾಗಿ ಜೀವನವಿಡಿ ಶ್ರಮಿಸಿದ ದಿವಂಗತ ಶ್ರೀ ಹುಚ್ಚಪ್ಪ ಎನ್.ಮಾಸ್ಟರ್ ಅವರ ಹೆಸರನ್ನು ಸಮ್ಮೇಳನದ ವೇದಿಕೆಗೆ ಇಡಲಾಗಿತ್ತು. ಹಸಲರು ಸಮುದಾಯದ ಹಿರಿಯ ಜಾನಪದ ಕಲಾವಿದರಾದ ಶ್ರೀ ಯಲ್ಲಮ್ಮೆಂ.ನಣಬೂರು ಇವರು 'ದುಡಿ' ಬಾರಿಸುವುದರ ಮೂಲಕ ಉದ್ಘಾಟಿಸಿದರು. ಆದಿವಾಸಿ ಅಧಿಕಾರ ರಾಷ್ಟ್ರೀಯ ಮಂಚ್‌ನ ರಾಷ್ಟ್ರೀಯ ಸಂಚಾಲಕರಾದ ಮಾಜಿ ಸಂಸದ ಶ್ರೀ ಜಿತೇಂದ್ರ ಚೌಧರಿಯವರು ದಿಕ್ಸೂಚಿ ಭಾಷಣವನ್ನು ಮಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಸಮ್ಮೇಳನ ಉದ್ದೇಶಿಸಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ನಿರ್ದೇಶಕರು ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಪ್ರಸನ್ನ ಹೆಗ್ಗೋಡು ವಹಿಸಿದ್ದರು. ಆರಂಭದಲ್ಲಿ ಸ್ವಾಗತ ಸಮಿತಿಯ ಕಾರ್ಯಾಧ್ಯಕ್ಷರು ಕರ್ನಾಟಕ ರಾಜ್ಯ ಕುಣಬಿ ಸಮಾಜ ಸಂಘಟನೆಯ ರಾಜ್ಯಾಧ್ಯಕ್ಷರಾದ ಎಸ್.ಬಿ. ಮಂಜಪ್ಪ, ವಕೀಲರು ಎಲ್ಲರನ್ನೂ ಸ್ವಾಗತಿಸಿದರು. ರಾಜ್ಯ ಸಹ ಸಂಚಾಲಕರಾದ ಎಸ್ ವೈ ಗುರುಶಾಂತ್ ಅವರು ಪ್ರಸ್ತಾವನೆ ಮಾಡಿದರು. ನಿರ್ವಹಣೆಯನ್ನು ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀಧರ ನಾಡ ನೆರವೇರಿಸಿದರು. ರಾಜ್ಯ ಸಂಚಾಲಕರಾದ ವೈ.ಕೆ.ಗಣೇಶ್ ರವರು ಸಮ್ಮೇಳನ ಹಾಗೂ ಆದಿವಾಸಿಗಳ ಸಮಸ್ಯೆಗಳ ಕುರಿತು ವಿವರಿಸಿದರು. ಈ ಉದ್ಘಾಟನಾ ಸಮಾರಂಭದಲ್ಲಿ 800ಕ್ಕೂ ಅಧಿಕ ಜನತೆ ಭಾಗವಹಿಸಿದ್ದರು.

ಸಮ್ಮೇಳನದ ಕಲಾಪಗಳು

ಮಧ್ಯಾಹ್ನ ಪ್ರತಿನಿಧಿಗಳ ಅಧಿವೇಶನ ಆರಂಭಗೊಂಡಿತು. ರಾಜ್ಯ ಸಹ ಸಂಚಾಲಕರಾದ ಡಾ.ಕೃಷ್ಣಪ್ಪ ಕೊಂಚಾಡಿ ಅವರು ಶ್ರದ್ಧಾಂಜಲಿ ನಿರ್ಣಯವನ್ನು ಮಂಡಿಸುವುದರೊಂದಿಗೆ ಸಮ್ಮೇಳನ ಕಲಾಪಗಳು ಆರಂಭಗೊಂಡವು. ಸಮ್ಮೇಳನವು ಕಾಂ.ರಾಧಾ ಮೂಡಬಿದರೆ, ಜೆ.ಆರ್. ಪ್ರೇಮಾ, ಪ್ರೇಮಾನಂದ ವೆಳಿಪ,ವಿ.ಬಸವರಾಜ್ ಅವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿಯನ್ನು ಚುನಾಯಿಸಿತು. ಶೇಖರ್ ಲಾಯಿಲ ಅವರ ಸಂಚಾಲಕತ್ವದಲ್ಲಿ ನಿರ್ಣಯ ಸಮಿತಿ,ಯುವ ವಕೀಲ ಮಹೇಶ್ ಸಾಲಿಯಾನ್ ಅವರು ಸಂಚಾಲಕರಾದ ದಾಖಲಾತಿ ಸಮಿತಿಗಳು ಚುನಾಯಿತಗೊಂಡು ಸಮ್ಮೇಳನಗಳನ ಇತರೆ ಕಲಾಪಗಳು ಸುಲಲಿತವಾಗಿ ಸಾಗಲು ಸಹಕರಿಸಿದವು. ಸಮ್ಮೇಳನದಲ್ಲಿ 225 ಪ್ರತಿನಿಧಿಗಳು ಪಾಲ್ಗೊಂಡರು.

ಕರಡು ವರದಿ ಅಂಗೀಕಾರ

ಸಮ್ಮೇಳನಕ್ಕೆ ಕರಡು ವರದಿಯನ್ನು ರಾಜ್ಯ ಸಂಚಾಲಕರಾದ ವೈ.ಕೆ.ಗಣೇಶ್ ಹಾಗೂ ಸಹ ಸಂಚಾಲಕರಾದ ಎಸ್.ವೈ.ಗುರುಶಾಂತ ರವರು ಮಂಡಿಸಿದರು. ಕರಡು ವರದಿಯ ಮೇಲೆ ಜಿಲ್ಲೆಯ ಪ್ರತಿನಿಧಿಗಳಿಂದ ಚರ್ಚೆ ನಡೆಯಿತು. ರಾಜ್ಯ ಸಂಘಟನಾ ಸಮಿತಿಯ ಪರವಾಗಿ ವೈಕೆ ಗಣೇಶ್ ರವರು ಉತ್ತರಿಸಿದರು. ಬಂದ ಎಲ್ಲಾ ಸಲಹೆ–ಸೂಚನೆಗಳನ್ನು ತಿದ್ದುಪಡಿಗಳನ್ನು ಒಳಗೊಂಡು ಕರಡು ವರದಿಯ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಸಂಘದ ಬೈಲಾ

ಈ ಸಮ್ಮೇಳನದಲ್ಲಿ ಮತ್ತೊಂದು ಮಹತ್ವದ ಕಲಾಪವೆಂದರೆ ಕ.ಆದಿವಾಸಿ ಸ.ಸ.ಸಂಘಕ್ಕೆ ದೆಯೋದ್ದೇಶಗಳು ಮತ್ತು ಸಂವಿಧಾನದ ಕರಡನ್ನು ಅಂಗೀಕರಿಸಿದ್ದು. ಈ ಕರಡನ್ನು ರಾಜ್ಯ ಸಹಸಂಚಾಲಕರಾದ ಎಸ್.ವೈ.ಗುರುಶಾಂತ ರವರು ಮಂಡಿಸಿದರು. ಈ ಕುರಿತು ಚರ್ಚಿಸಿದ ಜಿಲ್ಲೆಯ ಪ್ರತಿನಿಧಿಗಳು ಹಲವಾರು ಸಲಹೆ–ಸೂಚನೆ, ತಿದ್ದುಪಡಿಗಳನ್ನು ಸೂಚಿಸಿದರು. ಆಬಳಿಕ ಇವೆಲ್ಲವನ್ನೂ ಪರಿಗಣಿಸಿ ಇನ್ನಷ್ಟು ವಿಸ್ತೃತವಾಗಿ ಚರ್ಚಿಸಿ ಅಂತಿಮಗೊಳಿಸಲು ನೂತನ ರಾಜ್ಯ ಸಂಘಟನಾ ಸಮಿತಿಗೆ ರಾಜ್ಯ ಸಮ್ಮೇಳನವು ಅಧಿಕಾರ ನೀಡಿ ಅಂಗೀಕರಿಸಿತು.

ನೂತನ ಸಮಿತಿ

ಸಮ್ಮೇಳನವು 25 ಸದಸ್ಯರುಳ್ಳ ನೂತನ ರಾಜ್ಯ ಸಂಘಟನಾ ಸಮಿತಿಯನ್ನು ಚುನಾಯಿಸಿತು. ಸಂಗಾತಿ ವೈ.ಕೆ. ಗಣೇಶ್ ರವರು ರಾಜ್ಯ ಸಂಚಾಲಕರಾಗಿ ಪುನರಾಯ್ಕೆಗೊಂಡರು. ಡಾ. ಕೃಷ್ಣಪ್ಪ ಕೊಂಚಾಡಿ–ದ.ಕ, ಶ್ರೀಧರ ನಾಡ ಶಿವಮೊಗ್ಗ–ಉಡುಪಿ, ಜೆ.ಆರ್.ಪ್ರೇಮಾ ಕೊಡಗು, ಜೆ.ಕೆ.ತಿಮ್ಮ ಮೈಸೂರು, ಪ್ರೇಮಾನಂದ ವೆಳಿಪ, ಲಕ್ಷ್ಮಿ ಸಿದ್ಧಿ ಉತ್ತರಕನ್ನಡ, ವಸಂತ ನಡದ.ಕ, ಎಸ್.ವೈ.ಗುರುಶಾಂತ್ ರಾಜ್ಯ ಕೇಂದ್ರ ಇವರು ರಾಜ್ಯ ಸಹ ಸಂಚಾಲಕರುಗಳಾಗಿ ಆಯ್ಕೆಯಾದರು. ಸಮ್ಮೇಳನವು ಒಟ್ಟು ಎಂಟು ಪ್ರಮುಖ ನಿರ್ಣಯಗಳನ್ನು ಅಂಗೀಕರಿಸಿತು.

ಸಮಾರೋಪ

ಆದಿವಾಸಿಗಳಿಗೆ ಬಲ ಬೆಂಬಲ

ಮಧ್ಯಾಹ್ನ ಸಮಾರೋಪ ಸಮಾರಂಭ ಜರುಗಿತು. ಹಿರಿಯ ಬುಡಕಟ್ಟು ವಿದ್ವಾಂಸರಾದ ಡಾ.ನಾಗ ಹೆಚ್. ಹುಬ್ಳಿ ಇವರು ಸಮಾರೋಪ ಭಾಷಣವನ್ನು ಮಾಡಿದರು. ಮಾಜಿ ಸಚಿವರು, ಮಾಜಿ ಸಭಾಧ್ಯಕ್ಷರು ಆಗಿದ್ದ ಹಿರಿಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ, ಶಿವಮೊಗ್ಗ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ರತ್ನಾಕರ ಕಲಗೋಡು,







ಹಿರಿಯ ಸಾಮಾಜಿಕ ಕಾರ್ಯಕರ್ತರಾದ ಶ್ರೀ ದೇವಾನಂದ್ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷರಾದ ಶ್ರೀಎಸ್.ಬಿ.ಮಂಜಪ್ಪ ವಕೀಲರು,ಸಾಮಾಜಿಕ ಚಿಂತಕರಾದ ಶ್ರೀ ಮಂಜುನಾಥ್ ಬ್ಯಾಣದ್ ಮುಂತಾದವರು ಸಮಾರೋಪದ ಅತಿಥಿಗಳಾಗಿ ಮಾತನಾಡಿದರು. ಸಮ್ಮೇಳನದ ಎರಡನೆಯ ದಿನದ ಕಲಾಪಗಳು ಗಾಯತ್ರಿ ಭವನದಲ್ಲಿ ಸಮಾರೋಪಗೊಂಡವು. ಸಮಾರಂಭದ ಅಧ್ಯಕ್ಷತೆಯನ್ನು ವೈ.ಕೆ.ಗಣೇಶ್ ರವರು ವಹಿಸಿದ್ದರು. ವಿವಿಧ ಸಂದರ್ಭಗಳಲ್ಲಿ ದಬ್ಬಾಳಿಕೆಗೆ ಒಳಗಾದರೂ ಎದೆಗುಂದದೆ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗುತ್ತಾ ಮುಂದುವರಿದಿರುವ ಸುಂದರ ಮಲೆಕುಡಿಯ, ನಿಟ್ಟೂರಿನ ಮರಿಯ ಅವರನ್ನು ರಾಷ್ಟ್ರೀಯ ಸಂಚಾಲಕರಾದ ಜಿತೇಂದ್ರ ಚೌಧರಿಯವರು ಅಭಿನಂದಿಸಿದರು.

ಜನ ಕಾಳಜಿಯ ನೆರವು

ಹೊಸನಗರ ಸಂಘಟನೆ ಬೆಳೆಯುತ್ತಿರುವ ಹೊಸ ಪ್ರದೇಶವಾಗಿದೆ. ಇಲ್ಲಿ ಎಲ್ಲಾ ಆದಿವಾಸಿ ಸಮುದಾಯಗಳು ಅಲ್ಲದೆ ಸಮಾಜದ ವಿವಿಧ ಹಿತಚಿಂತಕರು, ಸಾಮಾಜಿಕ ಕಳಕಳಿಯುಳ್ಳ ಗೆಳೆಯರು, ಧಾರ್ಮಿಕ, ಸಾಮಾಜಿಕ ಒಳಗೊಂಡು ವಿವಿಧ ಕೇತ್ರಗಳ ಗಣ್ಯರು, ಸಂಘ–ಸಂಸ್ಥೆಗಳು ಈ ಸಮ್ಮೇಳನ ಯಶಸ್ವಿಗೊಳ್ಳಲು ಉದಾರ ಹಸ್ತ ನೀಡಿ, ನಿರಂತರ ಶ್ರಮಿಸಿದ್ದು ನಿಜಕ್ಕೂ ಅತ್ಯಂತ ಅಭಿನಂದನಾರ್ಹ ಹಾಗೂ ಸ್ಫೂರ್ತಿದಾಯಕವೂ ಆಗಿದೆ. ಅವರೆಲ್ಲರಿಗೂ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ಧನ್ಯವಾದಗಳನ್ನು ತಿಳಿಸಿದೆ.

ಉದ್ಘಾಟನಾ ಸಮಾರಂಭದಲ್ಲಿ ಆತ್ಮವಿಶ್ವಾಸ ತುಂಬಿದ ಅತಿಥಿಗಳು

ಹಕ್ಕುಗಳ ರಕ್ಷಣೆಗಾಗಿ ಪ್ರಬಲ ಸಂಘಟನೆ ಅಗತ್ಯದ ಪ್ರತಿಪಾದನೆ

'ಆದಿವಾಸಿಗಳು ಭಾರತದ ವೈವಿದ್ಯತೆಯ ಸಂಸ್ಕೃತಿಯ ಪ್ರತೀಕ. ಆದಿವಾಸಿಗಳು ತಮ್ಮದೇ ಭಾಷೆ, ಬದುಕು ಕಟ್ಟಿಕೊಂಡು ನಮ್ಮ ಪರಪಂರೆಯನ್ನು ಬೆಳೆಸಿವೆ. ಆದರೆ ತಲೆತಲಾಂತರದಿಂದ ಬದುಕಿ ಬಾಳಿದ ಅವರ ನೆಲೆಗಳಿಂದ ಹೊರ ಹಾಕಲು ಹುನ್ನಾರಗಳು ನಡೆಯುತ್ತಿವೆ. ಅರಣ್ಯ ಹಕ್ಕು ಕಾಯ್ದೆ 2006 ರ ಜಾರಿಗೆ ಬಂದು 13 ವರ್ಷ ಕಳೆದರೂ ಬುಡಕಟ್ಟು ಆದಿವಾಸಿಗಳಿಗೆ ಭೂಮಿ ಹಕ್ಕು ನೀಡುವಲ್ಲಿ ಸರ್ಕಾರಗಳ ವಿಫಲತೆ ವಿಷಾದನೀಯ' ಎಂದು ತ್ರಿಪುರಾ ಮಾಜಿ ಸಚಿವ, ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ ನ ರಾಷ್ಟ್ರೀಯ ಸಂಚಾಲಕರೂ ಆದ ಕಾಂ. ಜಿತೇಂದ್ರ ಚೌಧುರಿ ಹೇಳಿದರು.

*ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 8.6ರಷ್ಟು ಭೂರಹಿತರಿದ್ದಾರೆ. ಇದರಲ್ಲಿ ಅರ್ಧದಷ್ಟು ಆದಿವಾಸಿ ಸಮುದಾಯಕ್ಕೆ ಸೇರಿದವರು. ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದ ಶೇಕಡಾ 80 ರಷ್ಟು ಆದಿವಾಸಿಗಳ ಅರ್ಜಿ ತಿರಸ್ಕರಿಸಲಾಗಿದೆ. ತಿರಸ್ಕೃತ ಅರ್ಜಿದಾರನ್ನು ಅರಣ್ಯದಿಂದ ಹೊರದಬ್ಬಲು ಸರ್ಕಾರಗಳಿಂದ ಹುನ್ನಾರ ನಡೆದಿದೆ ಎಂದರು.

ಶಿವಮೊಗ್ಗ ಜಿಲ್ಲೆಯ ಹೊಸನಗರದ ವಿದ್ಯಾ ಸಂಘ ರಂಗಮಂದಿರದಲ್ಲಿ ಶನಿವಾರ ಆದಿವಾಸಿಗಳ 3 ನೇ ರಾಜ್ಯ ಸಮ್ಮೇಳನದ ದಿಕ್ಸೂಚಿ ಭಾಷಣ ಮಾಡಿದರು.

'ಚುನಾವಣೆ ಸಂದರ್ಭದಲ್ಲಿ ರಾಜಕಾರಣಿಗಳು ಆದಿವಾಸಿಗಳಿಗೆ ಕೇವಲ ಭರವಸೆ ನೀಡುತ್ತಾರೆ. ಚುನಾವಣೆ ನಂತರ ಎಲ್ಲವನ್ನೂ ಮರೆಯುತ್ತಾರೆ. ಬುಡಕಟ್ಟು ಸಮುದಾಯಗಳ ಅಭಿವೃದ್ಧಿ ಸೂಚ್ಯಂಕ ಇತರೆ ಸಮುದಾಯಗಳಿಗಿಂತ ಕೆಳಗಿದೆ. ಅವರ ಅಭಿವೃದ್ಧಿಗಾಗಿ ಅನುದಾನಗಳು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಎಡಪಕ್ಷಗಳು ಹೊರತುಪಡಿಸಿ ಕಾಂಗ್ರೆಸ್, ಬಿಜೆಪಿಯೇತರ ರಾಷ್ಟ್ರೀಯ ಪಕ್ಷಗಳು ಸಹಾ ಆದಿವಾಸಿಗಳ ಅಭಿವೃದ್ಧಿ ಕುರಿತು ಕಾಳಜಿ ವಹಿಸುತ್ತಿಲ್ಲ ಎಂದು ಆಪಾದಿಸಿದರು. ದೇಶದ ಸಂಸ್ಕೃತಿ, ಇತಿಹಾಸಕೆ ಆದಿವಾಸಿ ಜನತೆ ತಮ್ಮದೇ ಆದಂತಹ ಕೊಡುಗೆ ನೀಡಿದ್ದಾರೆ. ಸ್ವಾತಂತ್ರ್ಯ ದೊರಕಿ 7 ದಶಕ ಕಳೆದರೂ ಆದಿವಾಸಿಗಳ ಅಭಿವೃದ್ಧಿ ಆಗದಿರುವುದು ವಿಪರ್ಯಾಸ. ದೌರ್ಜನ್ಯ, ದಬ್ಬಾಳಿಕೆ, ಜೀತ ಪದ್ಧತಿಗಳಿಗೆ ಬಲಿಯಾಗುತ್ತಿರುವುದು ಆಘಾತಕಾರಿ ಬೆಳವಣಿಗೆ. ಈ ದಿಶೆಯಲ್ಲಿ ಸಂಘಟನಾತ್ಮಕ ಹೋರಾಟ ಅಗತ್ಯ. ಆದಿವಾಸಿಗಳ ಒಗ್ಗಟ್ಟು ಬಲಗೊಳಿಸಲು ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಇನ್ನಷ್ಟು ಕಾರ್ಯೋನ್ಮುಖವಾಗಬೇಕು' ಎಂದರು.

ಸಮ್ಮೇಳನಕ್ಕೆ ಚಾಲನೆ ನೀಡಿರುವ ಹಿರಿಯ ಜಾನಪದ ಕಲಾವಿದ ಎಂ. ಯಲ್ಲಪ್ಪ ನಣಬೂರು ಮಾತನಾಡಿ 'ವಿದ್ಯೆ ಇಲ್ಲದೇ ಏನನ್ನೂ ಗಳಿಸಲು ಸಾಧ್ಯವಿಲ್ಲ. ದೌರ್ಜನ್ಯ ದಬ್ಬಾಳಿಕೆಯಿಂದ ಆದಿವಾಸಿಗಳು ನಲುಗಿ ಹೋಗಿದ್ದಾರೆ. ಭವಿಷ್ಯದ ಪೀಳಿಗೆಯನ್ನು ರೂಪಿಸುವ ಜವಾಬ್ದಾರಿ ಪೋಷಕರು ಮೇಲಿದೆ. ಆದಿವಾಸಿಗಳು ದುರಾಭ್ಯಾಸಗಳಿಂದ ದೂರವಾಗಬೇಕು' ಎಂದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ರಂಗನಿರ್ದೇಶಕ ಹೆಗ್ಗೋಡು ಪ್ರಸನ್ನ ಮಾತನಾಡಿ ಐಶಾರಾಮಿ ಆಡಂಬರದ ಬದುಕಿನಿಂದ ನಮ್ಮತನವನ್ನು ಕಳೆದುಕೊಂಡಿದ್ದೇವೆ. ದೇಶದ ಸಂಸ್ಕೃತಿ ಅಧಃಪತನ ಸಾಗುತ್ತಿದೆ. ವೈವಿಧ್ಯತೆಯೇ ನಮ್ಮ ವಿಶೇಷ. ಆದಿವಾಸಿಗಳಿಂದ ಕಲಿಯಬೇಕಾದ ಅನೇಕ ಗುಣಗಳಿವೆ. ಇದಕ್ಕೆ ಸನ್ನದ್ಧರಾಗಬೇಕು. ಅವರ ಜ್ಞಾನ ಪರಂಪರೆ ರಕ್ಷಣೆಯಾಗಬೇಕು. ಎಂದರು. ಬದುಕಿನ ಬವಣೆಗಳ ಬಗ್ಗೆ ಚರ್ಚಿಸುವಾಗಲೇ ಸಾಂಸ್ಕೃತಿಕತೆಯನ್ನೂ ಒಳಗೊಂಡಿರುವ ಸಮ್ಮೇಳನದ ಕಲಾಪಗಳನ್ನು ಶ್ಲಾಘಿಸಿದರು.

"ಶಿವಮೊಗ್ಗ ಜಿಲ್ಲೆಯಲ್ಲಿ ಶರಾವತಿ ನದಿಯ ಕುರಿತು ವಿವಾದ ಏರ್ಪಟ್ಟಿರುವುದನ್ನು ಕೇಳಿದ್ದೇನೆ. ಇದು ಇಲ್ಲಿಗಷ್ಟೇ ಸೀಮಿತವಾಗಿಲ್ಲ, ಕಾವೇರಿ, ನರ್ಮದಾ, ಗೋದಾವರಿ ಹೀಗೆ ಬಹುತೇಕ ನದಿಗಳ ನೀರಿನ ಹಂಚಿಕೆ ವಿವಾದಗಳಿವೆ.ಹವಾಮಾನ ವೈಪರೀತ್ಯದಂತಹ ಸಮಸ್ಯೆಗಳು ನೀರಿನ ಕೊರತೆಗೆ ಕಾರಣವಾಗಿದೆ. ಆದಿವಾಸಿಗಳು ಕಾಡಿನ ನಡುವೆ ಜೀವನ ಮಾಡುತ್ತಾರೆ. ಅವಿದ್ಯಾವಂತರಾಗಿದ್ದರೂ, ಜೀವ ವೈವಿಧ್ಯಗಳ ಸಂರಕ್ಷಣೆ ಕಾರ್ಯ ಅವರಿಂದಲೇ ಆಗುತ್ತಿದೆ ಎನ್ನುವುದು ಗಮನಾರ್ಹ."

– ಜಿತೇಂದ್ರ ಚೌಧರಿ

ಸಮ್ಮೇಳನದ ಸಿದ್ಧತೆ

ಸಮ್ಮೇಳನ ಸಿದ್ಧತೆಗಾಗಿ ಹೊಸನಗರ ಸಾಗರ ತಾಲೂಕುಗಳಲ್ಲಿ 10 ಘಟಕಗಳನ್ನು ರಚಿಸಿ ಘಟಕ ಸಮ್ಮೇಳನವನ್ನು ಆಯೋಜಿಸಲಾಯಿತು ಹಾಗೆ ತಾಲೂಕಿನ ಮತ್ತಿಮನೆಯಲ್ಲಿ 200 ಪ್ರತಿನಿಧಿಗಳನ್ನು ಒಳಗೊಂಡ ಜಿಲ್ಲಾ ಸಮ್ಮೇಳನ ನಡೆಸಿ ಜಿಲ್ಲಾ ಪದಾಧಿಕಾರಿಗಳನ್ನು ಹಾಗೂ ರಾಜ್ಯ ಸಮ್ಮೇಳನದ ಪ್ರತಿನಿಧಿಗಳು ಮತ್ತು ಸ್ವಯಂ ಸೇವಕರನ್ನು ಆಯ್ಕೆಮಾಡಲಾಯಿತು.

ರಾಜ್ಯ ಸಮ್ಮೇಳನ ಸಿದ್ಧತೆಯ ಭಾಗವಾಗಿ ಜಿಲ್ಲೆಯಲ್ಲಿ ಮೂರು ಬಾರಿ ಸ್ವಾಗತ ಸಮಿತಿಯ ಸಭೆ ಸೇರಲಾಯಿತು. ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿ ಪ್ರಸನ್ನ ಹೆಗ್ಗೋಡು, ಕಾರ್ಯಾಧ್ಯಕ್ಷರಾಗಿ ಮಂಜಪ್ಪ ವಕೀಲರು, ಹಾಗೆ ಪ್ರದಾನ ಕಾರ್ಯದರ್ಶಿಯಾಗಿ ಶ್ರೀಧರ ನಾಡ ಕಾರ್ಯ ನಿರ್ವಹಿಸಿದ್ದಾರೆ. ಈ ಸಮ್ಮೇಳನದ ಯಶಸ್ವಿಗೆ ಜಿಲ್ಲೆಯ ಪ್ರಗತಿಪರ ಸಂಘಟನೆಗಳು ಹಾಗೂ ಚಿಂತಕರು ಸಾಹಿತಿಗಳು ಮತ್ತು ಇತರ ಸಂಘ ಸಂಸ್ಥೆಗಳ ಸಹಕಾರ ಪಡೆಯಲಾಯಿತು.

ಅಲ್ಲದೆ ಈ ಸಮ್ಮೇಳನದಿಂದ ಜಿಲ್ಲಾಡಳಿತ ತಾಲೂಕು ಆಡಳಿತ ಹಾಗೆ ಜನಪ್ರತಿನಿಧಿಗಳ ಗಮನ ಸೆಳೆಯಲು ಸಾಧ್ಯವಾಗಿ ಸಹಕಾರ ಪಡೆಯಲು ಸಾಧ್ಯವಾಯಿತು. ಜಿಲ್ಲೆಯಲ್ಲಿ ಹಸಲರು ಕೊರಗ ಮರಾಠಿ ನಾಯ್ಕ ಕುಣಬಿ ಸಮುದಾಯಗಳನ್ನು ಸಂಘಟನೆಯ ಸಂಪರ್ಕಕ್ಕೆ ತರಲು ಸಾಧ್ಯವಾಯಿತು.

ಆದಿವಾಸಿಗಳ ಸಂಸ್ಕೃತಿ ಸಮ್ಮಿಲನ

ಆದಿವಾಸಿಗಳ ಬದುಕಿನ ಭಾಗವೇ ಆಗಿರುವ ಹಾಡು, ಕುಣಿತ ವಿಶಿಷ್ಟ ಹಾಗೂ ಭಿನ್ನವಾಗಿದೆ. ಕುಣಬಿ ಸಮುದಾಯದ ಹೋಳಿ ಕುಣಿತ, ಹಸಲರು ಅಂಟಿಕೆ ಪಿಂಟಿಕೆ, ಪಂಜರಿ ಎರವರ ನೃತ್ಯ ಹಾಗೂ ದುಡಿ ಚೆಣ್ಣ, ಸಿದ್ದಿಯರ ದಮಾಮಿ ಹಾಗೂ ಪುಗುಡಿ ನೃತ್ಯ, ಸೇರಿದಂತೆ ಜಾನಪದ, ಸುಗ್ಗಿ ಕುಣಿತ, ಹಿರಿಯ ಜಾನಪದ ಕಲಾವಿದ ಯಲ್ಲಪ್ಪ ಎಂ.ನಣಬೂರು ಅವರ ಬಲಿ ಚಕ್ರವರ್ತಿ ಪಾತ್ರ ಸಮ್ಮೇಳನದ ಗಮನ ಸೆಳೆದವು. ಹೊಸನಗರ ತಾಲೂಕಿನ ಆದಿವಾಸಿ ಮಕ್ಕಳ ನೃತ್ಯ–ಕುಣಿತ ಒಳಗೊಂಡು ಹಲವಾರು ತಂಡಗಳು ಭಾಗವಹಿಸಿ ಬುಡಕಟ್ಟು ಸಮುದಾಯಗಳ ಜೀವ ಕೇಂದ್ರವಾಗಿರುವ ಸಾಂಸ್ಕೃತಿಕ ಸಂಭ್ರಮಕ್ಕೆ ಸಾಕ್ಷಿಯಾದವು. ಕಾರ್ಯಕ್ರಮದಲ್ಲಿ ಭಾಗವಹಿಸಿ ನಾಲ್ಕು ಮಾತನಾಡಿದ ಹಕ್ಕಿಪಿಕ್ಕಿ ಅಲೆಮಾರಿ ಜನಾಂಗದ ಪ್ರಮುಖರೂ, ಮೊಟ್ಟ ಮೊದಲ ಇಂಜನೀಯರ್ ಆದ (ಜೋಗ ವಿದ್ಯುತ್ ನಿಗಮದಲ್ಲಿ ಎಕ್ಸಿಕ್ಯೂಟೀವ್ ಇಂಜನೀಯರ್) ಸಹೋದರಿ ಶ್ರೀಮತಿ ಕುಮುದಾ ರವರು ಹಾಗೂ ಜಾನಪದ ವಿಶ್ವವಿದ್ಯಾಲಯದ ಉಪನ್ಯಾಸಕರೂ, ಅಲೆಮಾರಿ ಸಮುದಾಯಗಳ ಸಂಘದ ರಾಜ್ಯ ಉಪಾಧ್ಯಕ್ಷರಾದ ಡಾ.ಮಲ್ಲಿಕಾರ್ಜುನ ಮಾನ್ಪಡೆ ಯವರು ಪಾಲ್ಗೊಂಡು ಕಳ್ಳು ಬಳ್ಳಿಯ ಸಂಬಂಧವನ್ನು ತೋರುತ್ತಾ ಶುಭ ಹಾರೈಸಿದರು. ಈ ಕಾರ್ಯಕ್ರಮದ ಬಗ್ಗೆ ಪ್ರಚಾರಿಸಲು ಸೆಕ್ಷನ್ 144 ಕಲಮಿನ ಹೇರಿಕೆಯ ಕಾರಣವೊಡ್ಡಿ ತಡೆಯೊಡ್ಡಿದರೂ ಹೊಸನಗರ, ತೀರ್ಥಹಳ್ಳಿ, ಸಾಗರದ ಕೆಲವು ನಾಗರೀಕರೂ ಬಂದು ಸಂಭ್ರಮಿಸಿದರು.

ಸಮಾರೋಪ ಸಮಾರಂಭ

ಸರಕಾರಗಳಿಗೆ ಆದಿವಾಸಿಗಳ ಹೆಬ್ಬಟ್ಟು ಬೇಕು, ಅಭಿವೃದ್ಧಿ ಅಲ್ಲ.

ಕಾಡಿನಲ್ಲಿ ನೆಲೆಸಿರುವ ಆದಿವಾಸಿಗಳು ಎಂದಿಗೂ ಕಾಡಿನ ರಕ್ಷಕರೆ ಹೊರೆತು ಭಕ್ಷಕರಲ್ಲ ಈ ನೆಲದ ಸಂಸ್ಕೃತಿ, ಅರಣ್ಯದ ಉಳಿವಿಗೆ ಆದಿವಾಸಿಗಳು ಮಾತ್ರ ಕಾರಣ ಎಂದು ಸಂಶೋಧಕ ಡಾ.ನಾಗ ಎಚ್ ಹುಬ್ಬಿ ಅಭಿಪ್ರಾಯಪಟ್ಟರು. ಅವರು ಸಮ್ಮೇಳನದ ಸಮಾರೋಪ ಭಾಷಣ ಮಾಡುತ್ತಾ 'ಅಭಿವೃದ್ಧಿ ಹೆಸರಿನಲ್ಲಿ ಆದಿವಾಸಿಗಳನ್ನು ಕಷ್ಟದ ದಳ್ಳುರಿಗೆ ಸರ್ಕಾರಗಳು ದೂಡಿವೆ. ಆದಿವಾಸಿಗಳ ಹೆಬ್ಬೆಟ್ಟು ಮಾತ್ರ ಸರ್ಕಾರಕ್ಕೆ ತಲುಪುತ್ತಿದೆ. ಅವರಿಗೆ ಯಾವುದೇ ಅನುದಾನ, ಭೂಮಿ, ನೀರು ಮೂಲ ಸೌಕರ್ಯ ತಲುಪುತ್ತಿಲ್ಲ' ಎಂದು ತಿಳಿಸಿದರು.

"ಆದಿವಾಸಿ ಬುಡಕಟ್ಟು ಜನಾಂಗಗಳಿಗೆ ಅರಣ್ಯ ಹಕ್ಕು ಕಾಯ್ದೆಯಡಿ ನಮ್ಮ ಅಧಿಕಾರ ಅವಧಿಯಲ್ಲಿ ಪ್ರಾಮಾಣಿಕವಾಗಿ ಜಾರಿಗೆಗೋಳಿಸಲಾಗಿದೆ. ಆದಿವಾಸಿಗಳಿಗೆ ಮನೆ, ಜಮಿನು ಸೇರಿದಂತೆ ಮೂಲ ಸೌಕರ್ಯದ ಹೋರಾಟಕ್ಕೆ ಈಗಲೂ ತಾವು ಬದ್ಧ. ಈ ಕುರಿತಂತೆ ಸರ್ಕಾರದ ಗಮನ ಸೆಳೆಯೋಣ, ನಾನು ನಿಮ್ಮ ಜೊತೆ ಇರುವೆ."

ಕಾಗೋಡು ತಿಮ್ಮಪ್ಪ.

ಮಾಜಿ ಸಚಿವರು, ಮಾಜಿ ಸಭಾಧ್ಯಕ್ಷರು

"ಗ್ರಾಮೀಣ ಪ್ರದೇಶದ ಕಾರ್ಷಿಕ ಬಿಕ್ಕಟ್ಟು ಮತ್ತಷ್ಟು ಆಳಗೊಳ್ಳುತ್ತಿದೆ. ಆದಿವಾಸಿಗಳಿಗೆ ಅರಣ್ಯ ಹಕ್ಕು ಕಾಯ್ದೆ ಸಮರ್ಪಕವಾಗಿ ಜಾರಿಯಾಗಲಿಲ್ಲ. ಅಘಾತಕಾರಿ ನೀತಿಗಳೆದುರು ಪ್ರಬಲ ಹೋರಾಟಗಳು ಬೆಳೆಯಬೇಕು. ಸಂಘಟನೆಯೂ ಬಲಗೊಳ್ಳಲಿ."

ಜಿ.ಸಿ.ಬಯ್ಯಾರೆಡ್ಡಿ

ರಾಜ್ಯಾಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ

ಅಖಿಲ ಭಾರತ ಮುಷ್ಕರಕ್ಕೆ ಉತ್ತಮ ಪ್ರತಿಕ್ರಿಯೆ

ವರದಿ: ವಾ.ಉ.

ಜನವರಿ 8 ರಂದು ಅಖಿಲ ಭಾರತ ಕಾರ್ಮಿಕ ಮುಷ್ಕರಕ್ಕೆ ರಾಷ್ಟ್ರ ಮಟ್ಟದ ಕಾರ್ಮಿಕ ಸಂಘಟನೆಗಳೂ, ರೈತ ಸಂಘಟನೆಗಳೂ ಕರೆಕೊಟ್ಟ ಹಿನ್ನೆಲೆಯಲ್ಲಿ ಉಡುಪಿ ಮತ್ತು ದ.ಕ.ಜಿಲ್ಲೆಗಳಲ್ಲೂ ಮುಷ್ಕರ ನಡೆದಿದ್ದು ಆಂಶಿಕವಾಗಿ ಯಶಸ್ವಿಯಾಗಿದೆ.

ವಾಹನ ಸಾರಿಗೆ ನೌಕರರು ಹಾಗೂ ಅವರ ಸಂಘಟನೆಗಳು ಮುಷ್ಕರದಲ್ಲಿ ಸಕ್ರಿಯ ಪಾತ್ರ ವಹಿಸದೆ ಇದ್ದುದರಿಂದ, ಮುಷ್ಕರವು ಬಂದ್ ಸ್ವರೂಪ ತಾಳಲಿಲ್ಲ. ಆದರೆ ಮುಷ್ಕರ ದಿನದಂದು 'ಬಂದ್' ಆಗಲಿದೆ ಎಂಬ ಪ್ರಚಾರವನ್ನು ಸರಕಾರ ಮತ್ತು ಮಾಧ್ಯಮಗಳೇ ಬಿಂಬಿಸಿದ ಕಾರಣ, ಉಡುಪಿ ಮತ್ತು ಮಂಗಳೂರು ಹಾಗೂ ಉಳಿದ ಪಟ್ಟಣಗಳಲ್ಲಿ ಜನಸಂದಣಿ ಕಡಿಮೆಯಾಗಿತ್ತು. ಕೆಲವು ಉದ್ಯಮ ಸಂಸ್ಥೆಗಳು ಬಾಗಿಲು ತೆರೆಯಲಿಲ್ಲ.

ಮಂಗಳೂರು: ಮಂಗಳೂರಿನಲ್ಲಿ ಬಂದರು ಶ್ರಮಿಕ ಸಂಘ ಹಿಂದಿನ ದಿನವೇ ಮುಷ್ಕರದ ಬೇಡಿಕೆಗಳನ್ನು ಮುಂದಿಟ್ಟು ಪ್ರತಿಭಟನೆ ನಡೆಸಿದ್ದುವು. ಇದರಿಂದಾಗಿ ಮುಷ್ಕರದ ದಿನ ಮಂಗಳೂರಿನ ಬಂದರು ಪ್ರದೇಶದ ಅಂಗಡಿ ಮುಂಗಟ್ಟುಗಳು ಹಾಗೂ ಕೇಂದ್ರ ಮಾರುಕಟ್ಟೆ ಸಂಪೂರ್ಣ ಬಂದ್ ಆಗಿತ್ತು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಆಶ್ರಯದಲ್ಲಿ ಮಂಗಳೂರಿನ ಪುರಭವನದ ಆವರಣದಲ್ಲಿ ಪ್ರತಿಭಟನಾ ಸಭೆ ನಡೆಸಲಾಯಿತು. ಈ ಹಿಂದಿನ ವರ್ಷಗಳಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರುಗಡೆ ಅಖಿಲ ಭಾರತ ಮುಷ್ಕರದ ಪ್ರತಿಭಟನಾ ಪ್ರದರ್ಶನಗಳು ನಡೆಯುತ್ತಿದ್ದುವು. ಆದರೆ ಡಿಸೆಂಬರ 19ರ ಪೋಲೀಸ್ ಗೋಲಿಬಾರ್ ಆನಂತರದ ಹಿನ್ನೆಲೆಯಲ್ಲಿ ಪೋಲೀಸ್ ಅಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆಗೆ ಅವಕಾಶ ನೀಡದ್ದರಿಂದ ಪುರಸಭ ಆವರಣದಲ್ಲಿ ಅನುಮತಿ ಪಡೆಯಲಾಗಿತ್ತು. ಪ್ರತಿಭಟನೆಯಲ್ಲಿ ಸಿಐಟಿಯು, ಎಐಟಿಯುಸಿ, ಇಂಟಕ್ ಸಂಯೋಜಿತ ಕಾರ್ಮಿಕ ಸಂಘಟನೆಗಳ ಕಾರ್ಮಿಕರು, ಬ್ಯಾಂಕ್, ವಿಮೆ, ದೂರವಾಣಿ ನೌಕರರು ಭಾಗವಹಿಸಿದ್ದರು. ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಎಐಟಿಯುಸಿಯ ಜಿಲ್ಲಾ ಮುಖಂಡ ಎಚ್.ವಿ.ರಾವ್, ವಿಮಾ ನೌಕರರ ಸಂಘದ ರಾಘವೇಂದ್ರ ರಾವ್ ಹಾಗೂ ಇತರ ನೌಕರ ಮುಖಂಡರು ಮಾತನಾಡಿದರು.

ಉಡುಪಿ: ಉಡುಪಿ ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ವತಿಯಿಂದ ನಡೆದ ಪ್ರತಿಭಟನೆ ಕಾರ್ಮಿಕರ ಮೆರವಣಿಗೆಯೊಂದಿಗೆ ಪ್ರಾರಂಭವಾಯಿತು. ಉಡುಪಿ ಬೋರ್ಡ್ ಹೈಸ್ಕೂಲಿನಿಂದ ನಗರದ ಬೀದಿಗಳಲ್ಲಿ ಸಾಗಿ ಅಜ್ಜರಕಾಡು ಮೈದಾನದಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿತು.

ಪ್ರತಿಭಟನೆಯನ್ನುದ್ದೇಶಿಸಿ ಜಂಟಿ ಸಮಿತಿಯ ಸಂಚಾಲಕ ಕೆ.ಶಂಕರ್, ಸಿಐಟಿಯು ಮುಖಂಡ ಬಾಲಕೃಷ್ಣ ಶೆಟ್ಟಿ, ಮಾಜಿ ಸಂಚಾಲಕ ಅದಮಾರು ಶ್ರೀಪತಿ ಆಚಾರ್ಯ, ವಿಮಾ ನೌಕರರ ಸಂಘದ ಪ್ರಭಾಕರ ಕುಂದರ್, ಬಿಇಎಫ್ಐನ ರವೀಂದ್ರ ಮತ್ತಿತರರು ಮಾತನಾಡಿದರು.

ಕುಂದಾಪುರ: ಕುಂದಾಪುರದಲ್ಲಿ ಜಂಟಿ ಸಮಿತಿಯ ನೇತೃತ್ವದಲ್ಲಿ ಕಾರ್ಮಿಕರು ಕುಂದಾಪುರ ಶಾಸ್ತ್ರಿ ಸರ್ಕಲ್‌ನಿಂದ ಹೊಸ ಬಸ್ ನಿಲ್ದಾಣದ ಮಾರ್ಗವಾಗಿ ಪಾದಯಾತ್ರೆ ನಡೆಸಿ ಬಳಿಕ ರಿಕ್ಷಾ ಪಾರ್ಕ್ ಬಳಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿದರು. ಇಂಟಕ್ ಮುಖಂಡ ಲಕ್ಷ್ಮಣ ಶೆಟ್ಟಿ, ಸಿಐಟಿಯು ಮುಖಂಡರಾದ ಮಹಾಬಲ ವಡೇರಹೋಬಳಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಣ್ಣ ಪಟ್ಟಣಗಳಲ್ಲಿ ಮುಷ್ಕರದ ಅಲೆ: ಉಡುಪಿ ಜಿಲ್ಲೆಯ ಬೈಂದೂರು, ಕೋಟೇಶ್ವರ, ಅಮಾಸೆಬೈಲ್, ವಂಡ್ಸೆ, ಗಂಗೊಳ್ಳಿ, ತಲ್ಲೂರು, ಹಾಲಾಡಿ, ಬಿದ್ಕಲ್‌ಕಟ್ಟೆ, ಸಾಲಿಗ್ರಾಮ, ಕಾರ್ಕಳ ಮೊದಲಾದ ಊರುಗಳಲ್ಲಿ ಸಿಐಟಿಯು ಕಾರ್ಯಕರ್ತರು ಮುಷ್ಕರದ ಭಾಗವಾಗಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆ, ಉಳ್ಳಾಲ ಪ್ರದೇಶದ ಕುತ್ತಾರ್ ಮತ್ತಿತರ ಕಡೆಗಳಲ್ಲಿ ಸಿಐಟಿಯು ಮುಖಂಡತ್ವದಲ್ಲಿ ಪ್ರತಿಭಟನಾ ಪ್ರದರ್ಶನಗಳು ನಡೆದವು. ಬಂಟ್ವಾಳ ತಾಲೂಕಿನ ಬಿ.ಸಿ.ರೋಡಿನಲ್ಲಿ ಸಿಐಟಿಯು ಮತ್ತು ಎಐಟಿಯುಸಿ ಜಂಟಿಯಾಗಿ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಿತ್ತು.

ಸೊಲೆಮಾನಿ ಹತ್ಯೆಗೆ ಟ್ರಂಪ್ ಅವರ ಆಜ್ಞೆ ಇರಾಕಿನಲ್ಲಿ ಮತ್ತು ಪಶ್ಚಿಮ ಏಶ್ಯಾ ಪ್ರದೇಶದಲ್ಲಿ ಯು.ಎಸ್ ಹಿತಾಸಕ್ತಿಗೆ ಮಾರಕವಾಗಲಿದೆ. ಇರಾನನ್ನು ಈ ಪ್ರದೇಶದಲ್ಲಿ ಒಂಟಿಯಾಗಿಸಲು ಹೋಗಿ ಯು.ಎಸ್ ಸ್ವತಃ ಒಂಟಿಯಾಗಿದೆ.

ಸೊಲೆಮಾನಿ ಹತ್ಯೆಗೆ ಮೋದಿ ಸರಕಾರದ ಪ್ರತಿಕ್ರಿಯೆ ನೋಡಿದರೆ, ಯು.ಎಸ್ ಗೆ ಮುಜುಗರವನ್ನು ಉಂಟುಮಾಡಬಹುದಾದ ಯಾವುದೇ ರೀತಿಯ ಕ್ರಮ ಕೈಗೊಳ್ಳದಿರಲು ನಿರ್ಧರಿಸಿದಂತಿದೆ. ಇರಾನಿ ಜನರಲ್ ಒಬ್ಬರನ್ನು ಯು.ಎಸ್ ಹತ್ಯೆಗೈದಿದೆ ಅಂತ ಬಿಟ್ಟರೆ, ಅದನ್ನು ಖಂಡಿಸಲು ಅಥವಾ ಆ ಕುರಿತು ಅಸಮ್ಮತಿ ವ್ಯಕ್ತ ಪಡಿಸಲು ಸಹ ನಿರಾಕರಿಸಿದೆ.

ಮೋದಿ ಸರಕಾರಕ್ಕೆ ಭಾರತದ ಹಿತಾಸಕ್ತಿಗಳನ್ನು ರಕ್ಷಿಸುವುದು ಆದ್ಯತೆಯ ವಿಷಯವಾಗಬೇಕು. ಅದು ಯು.ಎಸ್ ಸರಕಾರಕ್ಕೆ ನೇರವಾಗಿ ಮತ್ತು ಅಸಂಧಿಗ್ದ ಮಾತುಗಳಲ್ಲಿ, ಇರಾನಿನ ವಿರುದ್ಧ ಅದರ ಆಕ್ರಾಮಕ ನೀತಿ ಮಾರಕವಾಗಿದೆ ಮತ್ತು ಭಾರತ ಅದರಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವ ಧೈರ್ಯ ತೋರಬೇಕು.

ಇರಾನಿ ಜನರಲ್ ಸೊಲೆಮಾನಿ ಹತ್ಯೆ ಮಾರಕ ಅಮೆರಿಕನ್ ನೀತಿಯಲ್ಲಿ ಭಾರತ ಭಾಗವಹಿಸಬಾರದು

ಪ್ರಕಾಶ್ ಕಾರಟ್



ಇರಾನಿನ ಹಿರಿಯ ಜನರಲ್ ಖಾಸೀಂ ಸೊಲೆಮಾನಿ ಅವರ ಹತ್ಯೆಯಿಂದ, ಯು.ಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗಂಭೀರ ಪ್ರಚೋದನೆಯನ್ನು ಉಂಟು ಮಾಡಿದ್ದಾರೆ. ಇದು ಇರಾನಿನ ಮೇಲೆ ಯುದ್ಧದ ಘೋಷಣೆಯೆಂದು ಪರಿಗಣಿಸಲಾಗುತ್ತದೆ. ಸೊಲೆಮಾನಿ ಇರಾನಿನ ಸೈನ್ಯದ (ಇಸ್ಲಾಮಿಕ್ ರೆವೆಲ್ಯೂಷನರಿ ಗಾರ್ಡ್ ಕೋರ್)ನ ಪ್ರಬಲ ಕುಡ್ಸ್ ಪಡೆಯ ಕಮಾಂಡರ್ ಆಗಿದ್ದರು. ಅವರ ಜತೆಗೆ ಇರಾಕಿನ ಹಿರಿಯ ಜನರಲ್ ಅಬು ಮಹದಿ ಅಲ್–ಮುಹಂದಿಸ್ ಅವರು ಸಹ ಹತ್ಯೆಯಾಗಿದ್ದಾರೆ. ಅವರು 'ಪಾಪ್ಯುಲರ್ ಮೊಬಿಲೈಸೇಶನ್ ಫೋರ್ಸಸ್' ಎಂಬ ಶಿಯಾ ಪೌರಸೈನ್ಯದ ಡೆಪ್ಯುಟಿ ಕಮಾಂಡರ್ ಆಗಿದ್ದರು. ಇದು ಇರಾಕಿ ಸೈನ್ಯದ ಭಾಗವೆಂದು ಪರಿಗಣಿಸಲಾಗುತ್ತದೆ.

ಯು.ಎಸ್ ಸರಕಾರ ಮತ್ತು ಅಧ್ಯಕ್ಷರು ಯಾರನ್ನು ಬೇಕಾದರೂ ಜಗತ್ತಿನ ಎಲ್ಲಿ ಬೇಕಾದರೂ ಕೊಲ್ಲಬಹುದು, ಅವರು ಯು.ಎಸ್ ಗೆ ಅಪಾಯವೊಡ್ಡಿದ್ದಾರೆ ಎಂದು ಯು.ಎಸ್ ಸರಕಾರ ಘೋಷಿಸಿದರೆ ಸಾಕು ಎಂದುಕೊಂಡಂತಿದೆ. ಅಫ್ಘಾನಿಸ್ತಾನ, ಪಾಕಿಸ್ತಾನ, ದಕ್ಷಿಣ ಯೆಮೆನ್ ಮತ್ತು ಇತರ ದೇಶಗಳಲ್ಲಿ ಒಬಾಮಾ ಅಧ್ಯಕ್ಷರಾಗಿದ್ದ ದಿನಗಳಿಂದಲೇ, ಭಯೋತ್ಪಾದಕ ಗುಂಪುಗಳು ಮತ್ತು ಇಸ್ಲಾಮಿಕ್ ಸಂಘಟನೆಗಳ ನಾಯಕರನ್ನು ಡ್ರೋನ್ ದಾಳಿಗಳಲ್ಲಿ ನ್ಯಾಯ–ಬಾಹಿರ ವಿಧಾನದಲ್ಲಿ ಕೊಲ್ಲಲಾಗುತ್ತಿದೆ. ಆದರೆ ಸೊಲೆಮಾನಿ ಅವರ ಹತ್ಯೆ ಬೇರೆನೇ ವರ್ಗಕ್ಕೆ ಸೇರುತ್ತದೆ. ಅವರು ಒಂದು ಸಾರ್ವಭೌಮ ದೇಶದ ಸೈನ್ಯದ ಹಿರಿಯ ಅಧಿಕಾರಿಯಾಗಿದ್ದರು. ಅವರು ರಾಯಭಾರ ಪಾಸ್‌ಪೋರ್ಟ್ ಹೊಂದಿದ್ದರು. ಯು.ಎಸ್. ಮತ್ತು ಇರಾನಿ ಬೆಂಬಲಿತ ಪೌರಸೈನ್ಯಗಳ ನಡುವೆ ಹೆಚ್ಚುತ್ತಿದ್ದ ಘರ್ಷಣೆಗಳನ್ನು ಶಮನ ಮಾಡಲು ಸಹಾಯ ಕೋರಿ ಅವರನ್ನು ಇರಾಕಿ ಪ್ರಧಾನಿ ಆಹ್ವಾನಿಸಿದ್ದರು. (ಇರಾಕಿ ಪ್ರಧಾನಿ ಯು.ಎಸ್ ಸರಕಾರದ ಕೋರಿಕೆಯ ಮೇಲೆ ಈ ಆಹ್ವಾನ ನೀಡಿತ್ತು. ಯು.ಎಸ್. ಮತ್ತು ಇರಾನಿ ಬೆಂಬಲಿತ ಪೌರಸೈನ್ಯಗಳು ಐಸಿಸ್ ಉಗ್ರಪಡೆಗಳನ್ನು ಸದೆಬಡಿಯುವಲ್ಲಿ ಸಹಕರಿಸಿದ್ದವು ಎಂದು ಹೇಳಲಾಗಿದೆ)

ಸೊಲೆಮಾನಿ ಹೊರತು ಪಡಿಸಿ ಸಹ ಇರಾಕಿ ಸೈನ್ಯದ ಹಿರಿಯ ಕಮಾಂಡರ್ ಆಗಿರುವ ಅಲ್–ಮುಹಂದೀಸ್ ಅವರನ್ನು ಇರಾಕಿ ನೆಲದಲ್ಲೇ ಯು.ಎಸ್ ಪಡೆಗಳು ಕೊಲೆ ಮಾಡುವುದು, ಇರಾಕಿನಲ್ಲಿ ನೆಲೆಸಿರುವ ಯು.ಎಸ್ ಪಡೆಗಳ ನೆಲೆಯ ಬಗೆಗೆ ಆಗಿರುವ ಒಪ್ಪಂದದ ಶರತ್ತುಗಳ ಉಲ್ಲಂಘನೆಯಾಗಿತ್ತು.

ಅಧ್ಯಕ್ಷ ಟ್ರಂಪ್ ರವರು ಇರಾನನ್ನು ಗುರಿಯಾಗಿಸಿದ್ದು, "ಗರಿಷ್ಟ ಒತ್ತಡ" ನೀತಿಯನ್ನು ಜಾರಿಗೊಳಿಸಿದ್ದರು. ಯು.ಎಸ್ ಇತರ ಯುರೋಪಿಯನ್ ಶಕ್ತಿರಾಷ್ಟ್ರಗಳ ಜತೆಗೆ ಜಂಟಿಯಾಗಿ ಸಹಿ ಮಾಡಿದ್ದ ಇರಾನ್ ಜತೆಗಿನ ಅಣು ಒಪ್ಪಂದವನ್ನು ಏಕಪಕ್ಷೀಯವಾಗಿ ಮುರಿದು ಹೊರಗೆ ಬಂದಿತ್ತು. ಇರಾನಿನ ಆರ್ಥಿಕ ಮತ್ತು ತೈಲ ಉದ್ಯಮವನ್ನು ಊನಗೊಳಿಸಲು ದಿಗ್ಬಂಧನಗಳನ್ನು ಪುನಃ ಹೇರಿತ್ತು, ಹೊಸ ದಿಗ್ಬಂಧನಗಳನ್ನು ಸೇರಿಸಿತ್ತು. ಜೂನ್ 2019ರಲ್ಲಿ ಕರಾವಳಿ ಬಳಿ ಹಾರುತ್ತಿದ್ದ ಯು.ಎಸ್ ಡ್ರೋನ್ ನ್ನು ಇರಾನ್ ಹೊಡೆದುರುಳಿಸಿದ್ದಕ್ಕೆ ಪ್ರತೀಕಾರವಾಗಿ ಇರಾನಿನ ಮೂರು ಕೇಂದ್ರಗಳ ಮೇಲೆ ಕ್ಷಿಪಣಿ ದಾಳಿಗೆ ಟ್ರಂಪ್ ಆಜ್ಞೆ ಮಾಡಿದ್ದರು. ಆದರೆ ದಾಳಿಗೆ ಕೆಲವೇ ನಿಮಿಷಗಳ ಮೊದಲು ಆಜ್ಞೆ ಹಿಂತೆಗೆದುಕೊಂಡರು. ಆದರೆ ಇರಾನಿನ ಜತೆ ಸಂಘರ್ಷದ ಸ್ಥಿತಿಯನ್ನು ಉಲ್ಬಣಗೊಳಿಸುವುದು ಯು.ಎಸ್ ಉದ್ದೇಶವಾಗಿತ್ತು ಎಂಬುದು ಸ್ಪಷ್ಟ.

ಸೊಲೆಮಾನಿ ಹತ್ಯೆಗೆ ಆಜ್ಞೆ ಮಾಡಿದ್ದು ಮಾತ್ರವಲ್ಲದೆ, ಅದನ್ನು ಅಧ್ಯಕ್ಷ ಟ್ರಂಪ್ ಸಾರ್ವಜನಿಕವಾಗಿ ಘೋಷಿಸಿದರು ಕೂಡಾ. ನವೆಂಬರಿನಲ್ಲಿ ನಡೆಯುವ ಅಧ್ಯಕ್ಷೀಯ ಚುನಾವಣೆಯಲ್ಲಿ ಇದು ನೆರವಾಗಬಹುದು ಎಂದು ಅವರ ನಿರೀಕ್ಷೆಯಾಗಿದ್ದಿರಬಹುದು. ಸೆನೆಟ್ ಮುಂದೆ ಬರಲಿರುವ ಅವರ ಮೇಲಿನ 'ದೋಷಾರೋಪಣೆ' ವಿಚಾರಣೆಯಿಂದ ಯು.ಎಸ್ ಸಾರ್ವಜನಿಕ ಗಮನವನ್ನು ಬೇರೆಡೆಗೆ ಸೆಳೆಯುವುದು ಅನುಕೂಲಕರ ಎಂದೂ ಅವರು ಭಾವಿಸಿರಬಹುದು.

ಸೊಲೆಮಾನಿ ಹತ್ಯೆಗೆ ಟ್ರಂಪ್ ಅವರ ಆಜ್ಞೆ, ಇರಾಕಿನಲ್ಲಿ ಮತ್ತು ಪಶ್ಚಿಮ ಏಶ್ಯಾ ಪ್ರದೇಶದಲ್ಲಿ ಯು.ಎಸ್ ಹಿತಾಸಕ್ತಿಗೆ ಮಾರಕವಾಗಲಿದೆ. ಇದಕ್ಕಿಂತ ಮೊದಲು ಇರಾಕಿ ಪೌರಸೈನಿಕರ ನೆಲೆಗಳ ಮೇಲೆ ಯು.ಎಸ್ ನಡೆಸಿದ ಕ್ಷಿಪಣಿ ದಾಳಿಗಳಲ್ಲಿ 26 ಇರಾಕಿಗಳು ಸತ್ತಿದ್ದರು. ಇದರಿಂದ ಆಕ್ರೋಶಗೊಂಡ ಇರಾಕಿಗಳು ಬಾಗ್ದಾದಿನಲ್ಲಿರುವ ಯು.ಎಸ್ ರಾಯಭಾರ ಕಚೇರಿ ಸುತ್ತುವರಿದು ದಾಳಿ ನಡೆಸಿದ್ದರು. ಸೊಲೆಮಾನಿ ಮತ್ತು ಇರಾಕಿ ಪೌರಸೈನ್ಯ ಕಮಾಂಡರ್ ಹತ್ಯೆ ಇರಾಕಿ ನಾಗರಿಕರನ್ನು ಉದ್ರೇಕಿಸಿದೆ. ಈಗ ಎಲ್ಲ ವಿದೇಶಿ ಮಿಲಿಟರಿ ಪಡೆಗಳೂ ಇರಾಕ್ ಬಿಟ್ಟು ತೊಲಗಬೇಕು ಎಂಬ ಇರಾಕಿನ ಪಾರ್ಲಿಮೆಂಟಿನ ನಿರ್ಣಯವನ್ನು ಯು.ಎಸ್ ಎದುರಿಸಬೇಕಾಗಿದೆ. ಇರಾಕಿನಲ್ಲಿ ಐದು ಸಾವಿರ ಯು.ಎಸ್ ಸೈನಿಕರು ಇದ್ದಾರೆ. ಇರಾನನ್ನು ಈ ಪ್ರದೇಶದಲ್ಲಿ ಒಂಟಿಯಾಗಿಸಲು ಹೋಗಿ ಯು.ಎಸ್ ಸ್ವತಃ ಒಂಟಿಯಾಗಿದೆ.

ಇರಾನಿನ ಪರಮ ನಾಯಕ ಖಮೇನಿ ಕಟುವಾದ ತಿರುಗೇಟಿನ ಎಚ್ಚರಿಕೆ ಕೊಟ್ಟಿದ್ದಾರೆ. ಸೊಲೆಮಾನಿ ದಫನ್ ನಂತರ ಇರಾನ್ ಯು.ಎಸ್ ಪಡೆಗಳಿರುವ ಎರಡು ಇರಾಕಿ ನೆಲೆಗಳ ಮೇಲೆ ಕ್ಷಿಪಣಿ ದಾಳಿ ನಡೆದಿದೆ. ಇದು ಬಹುಶಃ ಇರಾನಿ ಪ್ರತಿಕ್ರಿಯೆಯ ಆರಂಭವಷ್ಟೇ.

ಇಡೀ ಪಶ್ಚಿಮ ಏಶ್ಯಾ ಮತ್ತು ಕೊಲ್ಲಿ ಪ್ರದೇಶ ಕ್ಷುಬ್ಧವಾಗಿದೆ. ಇಸ್ರೇಲ್ ಮತ್ತು ಸೌದಿ ಅರೇಬಿಯಗಳು ಮಾತ್ರ, ತಮ್ಮ ಸಮಾನ ಶತ್ರು ಇರಾನಿನ ವಿರುದ್ಧ ಯು.ಎಸ್ ಕ್ರಮಗಳನ್ನು ಬೆಂಬಲಿಸಬಹುದು. ಇರಾಕ್ ಮತ್ತು ಸಿರಿಯಾ ಗಳಲ್ಲಿ ಯು.ಎಸ್ ಮಧ್ಯಪ್ರವೇಶ ಇರಾನನ್ನು ಒಂಟಿಯಾಗಿಸುವ ಬದಲು, ಈ ದೇಶಗಳಲ್ಲಿ ಮತ್ತು ಲೆನಬನಾನಿನಲ್ಲಿ ಅದರ ಪ್ರಭಾವವನ್ನು ಇನ್ನಷ್ಟು ಹೆಚ್ಚಿಸಿದೆ. ಇರಾಕ್, ಸಿರಿಯಾಗಳಲ್ಲಿ ಶಿಯಾ ಪೌರಸೈನ್ಯ ಮತ್ತು ಲೆಬನಾನಿನಲ್ಲಿ ಹಿಜಬೊಲ್ಲಾ ಗಳ ಮೂಲಕ ಇರಾನ್ ಸ್ಥಾಪಿಸಿರುವ "ಪ್ರತಿರೋಧದ ಅಕ್ಷ", ಇರಾನಿನ ಮೇಲೆ ಭವಿಷ್ಯದ ಯಾವುದೇ ಅಮೆರಿಕನ್ ದಾಳಿ ಇಡೀ ಪ್ರದೇಶದಲ್ಲಿ ತೀವ್ರ ಸಂಘರ್ಷ ಹಬ್ಬಲಿದೆ.

ಈ ಪ್ರದೇಶದಲ್ಲಿ ಮುಂಬರುವ ಸಂಘರ್ಷದ ಸಾಧ್ಯತೆಗಳಿಂದಾಗಿ ತೈಲ ಬೆಲೆಗಳೂ ಏರಿ ಬ್ಯಾರಲ್ಲಿಗೆ 70 ಡಾಲರು ಮುಟ್ಟಿದೆ. ಈಗಾಗಲೇ ಆರ್ಥಿಕ ಮಂದಗತಿ ಎದುರಿಸುತ್ತಿರುವ ಭಾರತದಂತಹ ದೇಶಗಳಿಗೆ ಇದು ತೀರಾ ಕೆಟ್ಟ ಸುದ್ದಿ.

ಸೊಲೆಮಾನಿ ಹತ್ಯೆಗೆ ಮೋದಿ ಸರಕಾರದ ಪ್ರತಿಕ್ರಿಯೆ ನೋಡಿದರೆ ಯು.ಎಸ್ ಗೆ ಮುಜುಗರವನ್ನು ಉಂಟುಮಾಡಬಹುದಾದ ಯಾವುದೇ ರೀತಿಯ ಕ್ರಮ ಕೈಗೊಳ್ಳದಿರಲು ಅದು ನಿರ್ಧರಿಸಿದಂತಿದೆ. ಯು.ಎಸ್ ಇರಾನಿ ಜನರಲ್ ಒಬ್ಬರ ಹತ್ಯೆಗೈದಿದೆ ಅಂತ ಬಿಟ್ಟರೆ, ಅದನ್ನು ಖಂಡಿಸಲು ಅಥವಾ ಆ ಕುರಿತು ಅಸಮ್ಮತಿ ವ್ಯಕ್ತ ಪಡಿಸಲು ಸಹ ನಿರಾಕರಿಸಿದೆ. ಕಳೆದ ವರ್ಷ ಇರಾನಿ ತೈಲವನ್ನು ಖರೀದಿಯನ್ನು ಪೂರ್ಣವಾಗಿ ನಿಲ್ಲಿಸುವ ಮೂಲಕ, ಯು.ಎಸ್ ದಿಗ್ಬಂಧನದ ಕ್ರಮಗಳಲ್ಲಿ ಸಹಕರಿಸಿದೆ. ಅಮೆರಿಕದ ಧೋರಣೆಗೆ ಅನುಸಾರವಾಗಿ, ಇಸ್ರೇಲ್ ಮತ್ತು ಸೌದಿ ಅರೇಬಿಯಾಕ್ಕೆ ನಿಕಟ ಸಂಬಂಧ ಬೆಳೆಸಿದೆ. ಇದನ್ನು ಮಾಡುವ ಮೂಲಕ ಭಾರತದ ಹಿತಾಸಕ್ತಿಗೆ ಮಾರಕವಾಗಿದೆ.

ಮೋದಿ ಸರಕಾರಕ್ಕೆ ಭಾರತದ ಹಿತಾಸಕ್ತಿಗಳನ್ನು ರಕ್ಷಿಸುವುದು ಆದ್ಯತೆಯ ವಿಷಯವಾಗಬೇಕು. ಅದು ಯು.ಎಸ್ ಸರಕಾರಕ್ಕೆ ನೇರವಾಗಿ ಮತ್ತು ಅಸಂಧಿಗ್ದ ಮಾತುಗಳಲ್ಲಿ ಇರಾನಿನ ವಿರುದ್ಧ ಅದ ಆಕ್ರಾಮಕ ನೀತಿ ಮಾರಕವಾಗಿದೆ ಮತ್ತು ಭಾರತ ಅದರಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವ ಧೈರ್ಯ ತೋರಬೇಕು.

(ಜನವರಿ 8, 2020)**ಅನು: ನಾ. ನಂಜುಂಡಯ್ಯ**

ಇರಾನಿನ ಬಗ್ಗೆ ಅಮೆರಿಕಕ್ಕೆ ಏಕಿಷ್ಟು ಭಯ?

ಹಿರಿಯ ಇರಾನಿ ಮಿಲಿಟರಿ ಜನರಲ್ ಒಬ್ಬರನ್ನು ಇರಾಕಿನಲ್ಲಿ ಹತ್ಯೆ ಮಾಡುವ ಟ್ರಂಪ್ ಕ್ರಮಕ್ಕೆ ಕಾರಣ ಏನು? ಹತಾಶೆಯೇ, ಇರಾನಿನ ಭಯವೇ? ಪಶ್ಚಿಮ ಏಶ್ಯಾದಲ್ಲಿ ಅಮೆರಿಕದ ಮಧ್ಯಪ್ರವೇಶದ ಅವಕಾಶಗಳ ಮೇಲೆ, ಇಡೀ ಪ್ರದೇಶದ ಜಗತ್ತಿನ ಮೇಲೆ ಇದರ ಪರಿಣಾಮ ಏನು?

ವಸಂತರಾಜ ಎನ್.ಕೆ.

ಹಿರಿಯ ಇರಾನಿ ಮಿಲಿಟರಿ ಜನರಲ್ ಒಬ್ಬರನ್ನು ಇರಾಕಿನಲ್ಲಿ ಹತ್ಯೆ ಮಾಡುವ ಟ್ರಂಪ್ ಕ್ರಮಕ್ಕೆ ಕಾರಣ ಏನು? ಹತಾಶೆಯೇ, ಇರಾನಿನ ಭಯವೇ? ಪಶ್ಚಿಮ ಏಶ್ಯಾದಲ್ಲಿ ಅಮೆರಿಕದ ಭವಿಷ್ಯದ ಮಧ್ಯಪ್ರವೇಶದ ಅವಕಾಶಗಳ ಮೇಲೆ ಇದರ ಪರಿಣಾಮ ಏನು? ಇದು ಹೀಗೆ ಎಂದು ಹೇಳುವುದು ಕಷ್ಟ. ಇದಕ್ಕೆ ಈ ಪ್ರದೇಶದಲ್ಲಿ ದಶಕಗಳ ಕಾಲದಿಂದ ಅಮೆರಿಕನ್ ನೀತಿಯ ಒಂದು ಸ್ಥೂಲ ಹಿನ್ನೋಟವಾದರೂ ಬೇಕು.

ಪಶ್ಚಿಮ ಏಶ್ಯದಲ್ಲಿ 1950ರ ದಶಕದಿಂದೀಚೆಗೆ ಅಮೆರಿಕ ತನ್ನ ತೈಲ ಸಂಪನ್ಮೂಲ ಮತ್ತಿತರ ಸಾಮ್ರಾಜ್ಯಶಾಹಿ ಹಿತಾಸಕ್ತಿ ಕಾಪಾಡಲು ಮಧ್ಯಪ್ರವೇಶ ಮಾಡುತ್ತಾ ಬಂದಿದೆ. 1950ರ ದಶಕದಲ್ಲಿ ಈ ಪ್ರದೇಶದಲ್ಲಿ ವ್ಯಾಪಕವಾಗಿ ಕಾಣಿಸಿಕೊಂಡಿದ್ದ ಸಾಮ್ರಾಜ್ಯಶಾಹಿ–ವಿರೋಧಿ ಅರಬ್ ಕಡು ರಾಷ್ಟ್ರೀಯವಾದಿ ಸರಕಾರಗಳನ್ನು, ಪಕ್ಷಗಳನ್ನು ಎಡ–ಪ್ರಗತಿಪರ ಪಕ್ಷ/ಚಳುವಳಿ/ಶಕ್ತಿಗಳನ್ನು ಮಟ್ಟ ಹಾಕುವುದು ಅದರ ಪ್ರಮುಖ ಗುರಿಯಾಗಿತ್ತು. ತೈಲ ರಾಷ್ಟ್ರೀಕರಣ ಮಾಡಿದ್ದ ಇರಾನಿನ ಆಗಿನ ರಾಷ್ಟ್ರೀಯವಾದಿ ಅಧ್ಯಕ್ಷರ ಹತ್ಯೆಗೂ ಅದು ಹೇಸಿರಲಿಲ್ಲ. ಆ ಮೂಲಕ ಚಕ್ರವರ್ತಿ ಶಾ ನ ಹಲವು ದಶಕಗಳ ಸರ್ವಾಧಿಕಾರ ಸ್ಥಾಪಿಸಲು ನಾಂದಿ ಹಾಡಿತ್ತು. ಬಹುಶಃ ಆಗಿನ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷ ನಿಷೇಧಕ್ಕೊಳಗಾದ ಒಂದೇ ದೇಶವಾಗಿತ್ತು. ಮಾತ್ರವಲ್ಲ, ಈಗ ವ್ಯಾಪಕವಾಗಿರುವ ಅಮೆರಿಕನ್ ಸಾಮ್ರಾಜ್ಯಶಾಹಿಯ ಮೂಗಿನ ನೇರಕ್ಕೆ ಇಲ್ಲದ 'ಸರಕಾರ ಬದಲಾವಣೆಯ' ಮಿಲಿಟರಿ–ವಿದೇಶ ನೀತಿಗೂ ಆಗಲೇ ನಾಂದಿ ಹಾಡಿತ್ತು.



ಆದರೆ ಆಗಿನ ಸ್ಥಿತಿಯಲ್ಲಿ ಇತರ ಸರಕಾರಗಳನ್ನು ಉರುಳಿಸಲು ಸಾಧ್ಯವಾಗಿರಲಿಲ್ಲ. ಇದಕ್ಕೆ ಕಾರಣ ಸೋವಿಯೆಟ್ ಸರಕಾರದ ಇಂತಹ ಸರಕಾರಗಳಿಗೆ ಹಲವು ರೀತಿಯ ಬೆಂಬಲ ಕೊಟ್ಟಿದ್ದೂ ಆಗಿತ್ತು. ಆದರೆ ಈ ಪ್ರದೇಶದ ಪ್ರಗತಿಪರ ರಾಷ್ಟ್ರೀಯವಾದಿಗಳಿಗೆ ಎಡಪಂಥೀಯರಿಗೆ ವಿರುದ್ಧವಾಗಿ ಸಾಂಪ್ರದಾಯಿಕ ಧಾರ್ಮಿಕ ಶಕ್ತಿಗಳಿಗೆ ಕುಮ್ಮಕ್ಕು ಕೊಡುವ ನೀತಿ ಅನುಸರಿಸಿತು. ಇಂತಹ ಶಕ್ತಿಗಳ ಸರಕಾರಗಳು ಸಹ ರಾಷ್ಟ್ರೀಯವಾದಿ ಸರಕಾರಗಳಿಗೆ ಈ ಪ್ರದೇಶದಲ್ಲಿ ಪ್ರತಿಶಕ್ತಿಯಾಗಿ ಬೆಳೆಯುವಂತೆ ನೋಡಿಕೊಂಡಿತ್ತು. ಸೌದಿ ಅರೇಬಿಯ ಹಾಗೂ ಒಮನ್, ಕುವೈಟ್ ಮತ್ತು ಇತರ ಸಣ್ಣ ಕೊಲ್ಲಿ ದೇಶಗಳಲ್ಲಿ ಭ್ರಷ್ಟ ರಾಜರುಗಳ ಸರಕಾರ ಇರುವಂತೆ ನೋಡಿಕೊಂಡಿತ್ತು. ಈ ದೇಶಗಳು (ಪ್ರಮುಖವಾಗಿ ಸೌದಿ ಅರೇಬಿಯಾದಲ್ಲಿ) ಕಟು ಧಾರ್ಮಿಕ ನೀತಿಗಳನ್ನು ಅನುಸರಿಸಿತ್ತು. ಇದರ ಉದ್ದೇಶ ಈ ಪ್ರದೇಶದ ಜನತೆ ಪ್ರಜಾಪ್ರಭುತ್ವ, ಸ್ವತಂತ್ರ ಆರ್ಥಿಕ ಬೆಳವಣಿಗೆ, ಸಮಾನತೆ, ಸಮಾಜವಾದದ ಮೌಲ್ಯಗಳಿಗೆ ತೆರೆದುಕೊಳ್ಳದಂತೆ ಮಾಡುವುದೇ ಆಗಿತ್ತು. ಜತೆಗೆ ಉಗ್ರ

ಪುಟ 15 ಕ್ಕೆ



ಜೆಎನ್‌ಯುವನ್ನು ಮುಚ್ಚಿಬಿಡಲು ನಡೆಸಿದ ಆಟ ಭಾನುವಾರದ ಹಿಂಸಾಚಾರದ ಹಿಂದಿರುವ ಶಕ್ತಿಗಳು ಯಾರು ಎಂಬುದು ಬಯಲಿಗೆ ಬಂದಿರುವುದರಿಂದಾಗಿ ಮತ್ತು ದೇಶಾದ್ಯಂತ ಪ್ರತಿಭಟನೆಗಳು ಭುಗಿಲೆದ್ದಿರುವುದರಿಂದಾಗಿ ವಿಫಲವಾಗಿದೆ. ಜೆಎನ್‌ಯು ವನ್ನು ಬುಡಮೇಲು ಮಾಡುವಲ್ಲಿ ಮತ್ತು ಅಸ್ಥಿರಗೊಳಿಸುವಲ್ಲಿ ಪ್ರಧಾನ ಉಪಕರಣವಾಗಿರುವ ಉಪಕುಲಪತಿ ಈಗ ವಿದ್ಯಾರ್ಥಿಗಳಿಗೆ ಒಂದು ಹೊಸ ಆರಂಭವನ್ನು ಮಾಡೋಣ ಎಂದಿದ್ದಾರೆ. ಇದು ಆತ ಉಪಕುಲಪತಿ ಸ್ಥಾನದಿಂದ ಕೆಳಗಿಳಿದಾಗ ಮಾತ್ರವೇ ಸಾಧ್ಯ.

ಪ್ರಕಾಶ ಕಾರಟ್



ಹಿಂದುತ್ವ ಶಕ್ತಿಗಳ ಧ್ವಂಸಕಾರ್ಯದ ವಿರುದ್ಧ ಮತ್ತೊಂದು ಹೋರಾಟದ ಅಲೆ

ಟೆಲಿವಿಶನ್ ವಾಹಿನಿಗಳಲ್ಲಿ ಮುಸುಕುಧಾರೀ ಪುಂಡರು ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ಕ್ಯಾಂಪಸ್ ಮತ್ತು ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳ ಮೇಲೆ ಹಲ್ಲೆ ಮಾಡುವ ದೃಶ್ಯಗಳನ್ನು ನೋಡಿದ ಮೇಲೆ ಹಲವು ಮಂದಿಗೆ ಮೋದಿ ಆಳ್ವಿಕೆ ಸಾರ್ವಜನಿಕ ನಿಧಿಯಿಂದ ನಡೆಯುತ್ತಿರುವ ಶೈಕ್ಷಣಿಕ ಸಂಸ್ಥೆಗಳ ಮೇಲೆ, ನಿರ್ದಿಷ್ಟವಾಗಿ ಕೇಂದ್ರೀಯ ವಿಶ್ವವಿದ್ಯಾಲಯಗಳ ಮೇಲೆ ಪ್ರಹಾರ ನಡೆಸುವಲ್ಲಿ ತೊಡಗಿದೆ ಎಂಬ ಆಶ್ಚರ್ಯಜನಕ ಸಂಗತಿ ಮನವರಿಕೆಯಾಗಿದೆ.

ಜೆಎನ್‌ಯು ಹಿಂದುತ್ವ ಪಡೆಗಳ ಒಂದು ಪ್ರಧಾನ ಗುರಿಯಾಗಿದೆ. ಇದು ಮುಕ್ತ ಅಭಿಪ್ರಾಯ, ಅನ್ವೇಷಣೆ ಮತ್ತು ತರ್ಕದ ಒಂದು ಜನವಾದಿ ವಾತಾವರಣ ಇರುವ ಅಧ್ಯಯನ ಕೇಂದ್ರ ಎಂಬ ಪ್ರತಿಷ್ಠೆಯನ್ನು ಗಳಿಸಿಕೊಂಡಿರುವ ಒಂದು ಸಂಸ್ಥೆಯಾಗಿದೆ.

ಇವೆಲ್ಲವೂ ಒಂದು ವಿಶ್ವವಿದ್ಯಾಲಯದ ಇಂತಹ ಪರಿಕಲ್ಪನೆಯನ್ನೇ ಧ್ವಂಸ ಮಾಡಲು ಹೊರಟಿರುವ ಹಿಂದುತ್ವ ಶಕ್ತಿಗಳಿಗೆ ಅನಿಷ್ಟಗಳು. ಉಪಕುಲಪತಿಯಾಗಿ ಎಂ ಜಗದೀಶ ಕುಮಾರ್ ನೇಮಕ ಜೆಎನ್‌ಯುನ ಜಾತ್ಯತೀತ–ಜನವಾದೀ ಬುನಾದಿಯನ್ನು ಧ್ವಂಸ ಮಾಡುವ ಒಂದು ವ್ಯವಸ್ಥಿತ ಪ್ರಯತ್ನದ ಮುನ್ಸೂಚನೆಯಾಗಿತ್ತು. ಪ್ರಗತಿಶೀಲ ಮತ್ತು ಎಲ್ಲರನ್ನೂ ಒಳಗೊಳ್ಳುವ ಪ್ರವೇಶ ಧೋರಣೆಯನ್ನು ರದ್ದು ಮಾಡಲಾಗಿದೆ; ಅಧ್ಯಾಪಕರ ನೇಮಕಗಳಲ್ಲಿ ಆರೆಸ್ಸೆಸ್ ಬೆಂಬಲಿಗರಿಗೆ ಸ್ಥಾನ ಕಲ್ಪಿಸಿಕೊಳ್ಳುವುದಕ್ಕಾಗಿ ಕೈಚಳಕ ನಡೆಸಲಾಗುತ್ತಿದೆ; ಕಳೆದ ನಾಲ್ಕು ವರ್ಷಗಳಿಂದ ಚುನಾಯಿತ ವಿದ್ಯಾರ್ಥಿ ಸಂಘದ ಮೇಲೆ ದಾಳಿ ನಡೆಸಲಾಗುತ್ತಿದೆ, ಅದರ ಚುನಾಯಿತ ಪ್ರತಿನಿಧಿಗಳನ್ನು ಆಂತರಿಕ ಶಿಸ್ತು ಕ್ರಮಗಳು ಮತ್ತು ಅವರ ವಿರುದ್ಧ ಪೋಲೀಸ್ ಕೇಸುಗಳನ್ನು ಹಾಕುವ ಮೂಲಕ ಬಲಿ ಹಾಕಲಾಗುತ್ತಿದೆ; ಅಧ್ಯಾಪಕರಿಗೂ ಶೋಕಾಸ್ ನೋಟೀಸುಗಳನ್ನು ಕೊಡಲಾಗುತ್ತಿದೆ, ಶಿಸ್ತುಕ್ರಮಗಳಿಗೆ ಒಳಪಡಿಸಲಾಗುತ್ತಿದೆ. ಅಂತಿಮವಾಗಿ, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಾಸ್ಟೆಲ್, ಮೆಸ್ ಮತ್ತು ಇತರ ಸೇವಾ ಶುಲ್ಕಗಳಲ್ಲಿ ಘೋರ ಏರಿಕೆಯನ್ನು ಮಾಡಲಾಗಿದೆ.





ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಈ ಸ್ವೇಚ್ಛಾಚಾರೀ ಮತ್ತು ಪ್ರಜಾಪ್ರಭುತ್ವ–ವಿರೋಧಿ ಕ್ರಮಗಳನ್ನು ಎದುರಿಸಿ ಹೋರಾಡುತ್ತಿದ್ದಾರೆ. ಶುಲ್ಕ ಏರಿಕೆಯ ವಿರುದ್ಧ ಚಳುವಳಿ ಎಲ್ಲ ವಿದ್ಯಾರ್ಥಿ ವಿಭಾಗಗಳ ಮತ್ತು ವಿಶ್ವವಿದ್ಯಾಲಯದ ಹೊರಗೂ ಎಲ್ಲ ಜನವಾದೀ ಸಾರ್ವಜನಿಕ ಅಭಿಪ್ರಾಯದ ಬೆಂಬಲವನ್ನು ಗಳಿಸಿದೆ.

ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಈ ಐಕ್ಯ ವಿರೋಧವನ್ನು ಹೆದರಿಸಿ–ಬೆದರಿಸಿ ದಮನ ಮಾಡಲು ಸಾಧ್ಯವಾಗದೇ ಇರುವುದೇ ಇತ್ತೀಚಿನ ಈ ದಾಳಿಗೆ, ದೈಹಿಕ ಹಿಂಸಾಚಾರಕ್ಕೆ ಕಾರಣವಾಗಿದೆ. ಇದು ಜೆಎನ್‌ಯು ಇತಿಹಾಸದಲ್ಲೇ ಹಿಂದೆಂದೂ ಕಂಡಿರದ ಸಂಗತಿ. ಎಬಿವಿಪಿ–ಆರೆಸ್ಸೆಸ್ ಗೂಂಡಾಗಳ ಈ ಹಲ್ಲೆ ಜೆಎನ್‌ಯು ಮತ್ತು ಪೋಲೀಸರ ಶಾಮೀಲಿನಿಂದ ನಡೆದಿರುವ ಒಂದು ಪ್ರಾಯೋಜಿತ ಮತ್ತು ಯೋಜಿತ ಕೃತ್ಯ ಎಂಬುದನ್ನು ಸ್ಪಷ್ಟವಾಗಿಯೇ ಕಾಣಬಹುದು. ಟೆಲಿವಿಷನ್ ಮತ್ತು ಮುದ್ರಣ ಮಾಧ್ಯಮಗಳ ಕೆಲವು ವಿಭಾಗಗಳು ಹಲ್ಲೆಕೋರರು (ಎಬಿವಿಪಿ ಮತ್ತು ಆರೆಸ್ಸೆಸ್‌ನವರು) ಯಾರು ಎಂಬುದಕ್ಕೆ ಮತ್ತು ಪೋಲೀಸಿನ ನಾಚಿಕೆಗೇಡೀ ಪಾತ್ರಕ್ಕೆ ಪುರಾವೆಗಳನ್ನು ನೀಡಿವೆ.

ಅಪರಾಧಿಗಳನ್ನು ಹಿಡಿಯುವ ಬದಲು ಪೋಲೀಸರು ಜೆಎನ್‌ಯು ಆಡಳಿತ ಹೇಳಿದಂತೆ ತೀವ್ರವಾಗಿ ಗಾಯಗೊಂಡಿರುವ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಮತ್ತು ಇತರ ಕಾರ್ಯಕರ್ತರ ಮೇಲೆಯೇ ಕೇಸುಗಳನ್ನು ಹಾಕಿರುವುದರ ವಿರುದ್ಧ ಸಾರ್ವಜನಿಕ ಆಕ್ರೋಶ ಹೆಚ್ಚಿದೆ.

ಜೆಎನ್‌ಯು ವನ್ನು ಬುಡಮೇಲು ಮಾಡುವಲ್ಲಿ ಮತ್ತು ಅಸ್ಥಿರಗೊಳಿಸುವಲ್ಲಿ ಉಪಕುಲಪತಿಯೇ ಪ್ರಧಾನ ಉಪಕರಣ. ಜೆಎನ್‌ಯು ಆಡಳಿತ ಭಾನುವಾರದ ಹಿಂಸಾಚಾರದ ನಂತರ ವಿಶ್ವವಿದ್ಯಾಲಯವನ್ನು ಮುಚ್ಚಿಬಿಡಲು ಬಯಸಿತ್ತು ಎಂಬುದೀಗ ಗೊತ್ತಾಗಿದೆ. ಸಶಸ್ತ್ರ ಗೂಂಡಾಗಳು ರಂಪಾಟ ನಡೆಸುವಂತೆ ಏರ್ಪಾಟು ಮಾಡುವುದು, "ಗುಂಪು ತಿಕ್ಕಾಟ"ಗಳಿಂದಾಗಿ ಹಿಂಸಾಚಾರ ಭುಗಿಲೆದ್ದಿದೆ ಎಂದು ಹೇಳುವುದು ಮತ್ತು ವಿಶ್ವವಿದ್ಯಾಲಯವನ್ನು ಮುಚ್ಚುವುದು–ಇದು ಅವರ ಒಟ್ಟಾರೆ ಗುರಿಯಾಗಿತ್ತು.

ಈ ಆಟ ಜೆಎನ್‌ಯು ಅತಿರೇಕದ ವಿರುದ್ಧ ಪ್ರತಿಭಟನೆಗಳು ಭುಗಿಲೆದ್ದಿರುವುದರಿಂದಾಗಿ ಮತ್ತು ಇದರ ಹಿಂದಿರುವ ಶಕ್ತಿಗಳು ಬಯಲಿಗೆ ಬಂದಿರುವುದರಿಂದಾಗಿ ವಿಫಲವಾಗಿದೆ. ದೇಶಾದ್ಯಂತ ವಿದ್ಯಾರ್ಥಿಗಳು ಜೆಎನ್‌ಯು ಮೇಲೆ ದಾಳಿಯ ವಿರುದ್ಧ ಪ್ರತಿಭಟನೆಗೆ ಇಳಿದಿದ್ದಾರೆ, ಈಗಾಗಲೇ ಸಿಎಎ–ಎನ್‌ಆರ್‌ಸಿ ವಿರುದ್ಧ ಆರಂಭವಾಗಿರುವ ಚಳುವಳಿಯ ಬೆನ್ನಲ್ಲಿ ಇನ್ನೊಂದು ಅಲೆ ಎದ್ದು ಬರುತ್ತಿದೆ.

ಉಪಕುಲಪತಿ ವಿದ್ಯಾರ್ಥಿಗಳಿಗೆ ಒಂದು ಹೊಸ ಆರಂಭವನ್ನು ಮಾಡೋಣ ಎಂದಿದ್ದಾರೆ. ಇದು ಆತ ಉಪಕುಲಪತಿ ಸ್ಥಾನದಿಂದ ಕೆಳಗಿಳಿದಾಗ ಮಾತ್ರವೇ ಸಾಧ್ಯ. ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೊಂದಿಗೆ ಮಾತುಕತೆಗಳನ್ನು ನಡೆಸಿ ಶುಲ್ಕ ಏರಿಕೆಯ ಪ್ರಶ್ನೆಯನ್ನು ಕುರಿತಂತೆ ಒಂದು ನ್ಯಾಯಯುತ ಇತ್ಯರ್ಥಕ್ಕೆ ಬರಬೇಕು. ಇದರೊಂದಿಗೆ ಭಾನುವಾರದ ಹಿಂಸಾಚಾರದ ಅಪರಾಧಿಗಳನ್ನು ಶಿಕ್ಷೆಗೆ ಗುರಿಪಡಿಸಿದರೆ, ಆಗ ಜೆಎನ್‌ಯುನಲ್ಲಿ ಮತ್ತೆ ಆತ್ಮವಿಶ್ವಾಸ ನೆಲೆಗೊಳ್ಳಲು ಸಹಾಯಕವಾಗುತ್ತದೆ, ಸಾರ್ವಜನಿಕ ನಿಧಿಯಿಂದ ನಡೆಯುವ ಉತ್ಕೃಷ್ಟತೆಯ ವಿಶ್ವವಿದ್ಯಾಲಯವಾಗಿ ಜೆಎನ್‌ಯು ತನ್ನ ಪಾತ್ರವನ್ನು ಮುಂದುವರೆಸಲು ಸಾಧ್ಯವಾಗುತ್ತದೆ.





ವ್ಯಂಗ್ಯಚಿತ್ರ:
ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್





ಬಿಹಾರ

ಅಭೂತಪೂರ್ವ ಸಾರ್ವತ್ರಿಕ ಮುಷ್ಕರ ಮತ್ತು ಗ್ರಾಮೀಣ ಬಂದ್

ಜನತೆಯ ಆಕ್ರೋಶದ ಸ್ಪಷ್ಟ ಅಭಿವ್ಯಕ್ತಿ, ಬಿಜೆಪಿ ಸರಕಾರಕ್ಕೆ ಸ್ಪಷ್ಟ ಸಂದೇಶ–ಎಐಕೆಎಸ್

ಅಖಿಲ ಭಾರತ ಕಿಸಾನ್ ಸಭಾ ಕೂಡ ದೇಶದ ದುಡಿಯುವ ಜನಗಳ ಈ ಬೃಹತ್ ಕಾರ್ಯಾಚರಣೆಯ ಯಶಸ್ಸಿಗೆ ಶ್ರಮಿಸಿದ ಎಲ್ಲರಿಗೂ ನಮನ ಸಲ್ಲಿಸಿದೆ. ಮುಷ್ಕರವನ್ನು ಮತ್ತು ಗ್ರಾಮೀಣ ಹರತಾಳವನ್ನು ಬೃಹತ್ ಪ್ರಮಾಣದಲ್ಲಿ ಯಶಸ್ವಿಗೊಳಿಸಿದ ಶ್ರಮಜೀವಿಗಳನ್ನು ಅಭಿನಂದಿಸುತ್ತ, ಇದು ಬಿಜೆಪಿಗೆ ಒಂದು ಸ್ಪಷ್ಟ ಸಂದೇಶ ಹಾಗೂ ತನ್ನ ವಿನಾಶಕಾರೀ ಧೋರಣೆಗಳನ್ನು ಮುಂದುವರೆಸುವುದರ ವಿರುದ್ಧ ಅದಕ್ಕೆ ನೀಡಿರುವ ಎಚ್ಚರಿಕೆಯಾಗಿದೆ ಎಂದು ಅದು ಹೇಳಿದೆ.

ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಸಾರ್ವತ್ರಿಕ ಮುಷ್ಕರದ ಕರೆಗೆ, ಅಖಿಲ ಭಾರತ ಕಿಸಾನ್ ಸಭಾ ಮತ್ತು ಅಖಿಲ ಭಾರತ ಕಿಸಾನ್ ಸಂಘರ್ಷ ಸಂಯೋಜನಾ ಸಮಿತಿ ಕರೆ ನೀಡಿದ ಗ್ರಾಮಿಣ ಹರತಾಳ ಮತ್ತು ವಿದ್ಯಾರ್ಥಿಗಳ ಮುಷ್ಕರದ ಕರೆಗೆ ಅಪಾರ ಸ್ಪಂದನೆ ದೊರೆತಿದೆ. ರೈತರು ಮತ್ತು ಕೃಷಿ ಕೂಲಿಕಾರರು ತಮ್ಮ ಜ್ವಲಂತ ಪ್ರಶ್ನೆಗಳೊಂದಿಗೆ, ಕಾರ್ಮಿಕ ವರ್ಗಕ್ಕೆ ಸೌಹಾರ್ದತೆಯನ್ನು ಗ್ರಾಮಿಣ ಭಾರತ ಬಂದ್ ಮೂಲಕ ಎತ್ತಿ ತೋರಿದ್ದಾರೆ. ಕೆಲವೆಡೆ ಮಳೆ, ಇನ್ನು ಕೆಲವೆಡೆಗಳಲ್ಲಿ ಹಿಮಪಾತವನ್ನೂ ಲೆಕ್ಕಿಸದೆ ಮತಪ್ರದರ್ಶನಗಳಲ್ಲಿ, ರೈಲು–ರಾಸ್ತಾರೋಕೋಗಳಲ್ಲಿ ಭಾಗವಹಿಸಿದ್ದಾರೆ. ಇದು ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ವಿರುದ್ಧ ಜನತೆಯ ಆಕ್ರೋಶದ ಒಂದು ಸ್ಪಷ್ಟ ಅಭಿವ್ಯಕ್ತಿ ಎಂದು ಎಐಕೆಎಸ್ ಹೇಳಿದೆ.

ಕಾರ್ಮಿಕರು ಮತ್ತು ರೈತರು ಹಾಗೂ ಬಿಜೆಪಿಯ ನವ–ಉದಾರವಾದಿ ಆರ್ಥಿಕ ಧೋರಣೆಗಳು ಮತ್ತು ಕೋಮುವಾದಿ ಧೋರಣೆಗಳ ಅಡಿಯಲ್ಲಿ ನರಳುತ್ತಿರುವ ಸಮಾಜದ ವಿವಿಧ ಜನವಿಭಾಗಗಳ ಅಭೂತಪೂರ್ವ ಸೌಹಾರ್ದತೆ ಮುಂಬರುವ ದಿನಗಳಲ್ಲಿ ಇನ್ನೂ ದೊಡ್ಡ ಐಕ್ಯ ಹೋರಾಟಗಳತ್ತ ಬೊಟ್ಟು ಮಾಡಿ ತೋರಿಸುತ್ತಿದೆ. ಇದು ವಿಭಜನಕಾರೀ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಮತ್ತು ಭಾರತೀಯ ಸಂವಿಧಾನದ ರಕ್ಷಣೆಗೆ ಭಾರತೀಯ ಜನತೆಯ ದೃಢನಿರ್ಧಾರ ಕೂಡ ಆಗಿದೆ ಎಂದು ಎಐಕೆಎಸ್ ಹೇಳಿದೆ.

ಶ್ರಮಜೀವಿಗಳು ಜಾಗೃತರಾಗುತ್ತಿದ್ದಾರೆ, ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ವರೆಗೆ ವಿಶ್ರಮಿಸುವುದಿಲ್ಲ–ಸಿಐಟಿಯು

ಜನವರಿ 8 ರಂದು ಅಭೂತಪೂರ್ವ ಸಾರ್ವತ್ರಿಕ ಮುಷ್ಕರ ಮತ್ತು ಗ್ರಾಮೀಣ ಬಂದ್ ಮೂಲಕ ಭಾರತದ ದುಡಿಯುವ ಜನಗಳು ಮೋದಿ ಸರಕಾರದ ಕಾರ್ಮಿಕ–ವಿರೋದಿ, ಜನ–ವಿರೋಧಿ ಮತ್ತು ರಾಷ್ಟ್ರ–ವಿರೋಧಿ ಧೋರಣೆಗಳ ವಿರುದ್ಧ ಒಂದಾಗಿ ಎದ್ದು ನಿಂತಿದ್ದಾರೆ ಎಂದು ಸಿಐಟಿಯು ದೇಶದ ದುಡಿಮೆಗಾರರಿಗೆ ವೀರ ನಮನ ಸಲ್ಲಿಸಿದೆ.

ಎಲ್ಲ ವಲಯಗಳಲ್ಲೂ ಕೈಗಾರಿಕಾ ಕಾರ್ಮಿಕರು ಮುಷ್ಕರ ನಡೆಸಿದರೆ, ರೈತರು ಮತ್ತು ಕೃಷಿಕೂಲಿಕಾರರು 'ಗ್ರಾಮೀಣ ಬಂದ್' ಕರೆಗೆ ಅಧ್ಭುತವಾಗಿ ಸ್ಪಂದಿಸಿದ್ದಾರೆ, ರಾಸ್ತಾರೋಕೋ, ರೈಲ್ ರೋಕೋಗಳನ್ನು ನಡೆಸಿದ್ದಾರೆ.

ಒಟ್ಟಾರೆಯಾಗಿ ಜನಸಾಮಾನ್ಯರ ಬೃಹತ್ ಬೆಂಬಲವನ್ನು ಪಡೆದಿರುವ ಮುಷ್ಕರ ಮೋದಿ ಸರಕಾರದ ವಿನಾಶಕಾರಿ ಧೋರಣೆಗಳ ವಿರುದ್ಧ ಜನಗಳ ಭಾರೀ ಆಕ್ರೋಶಕ್ಕೆ ದನಿ ನೀಡಿದೆ. ಕಾರ್ಮಿಕ ಸಂಘಗಳು ತಮ್ಮ 12 ಬೇಡಿಕೆಗಳಲ್ಲದೆ, ಸಿಎಎ, ಎನ್‌ಆರ್‌ಸಿ ಮತ್ತು ಎನ್‌ಪಿಆರ್ ಇತ್ಯಾದಿಗಳ ಮೂಲಕ ಪ್ರಜಾಪ್ರಭುತ್ವ ಹಕ್ಕುಗಳು ಮತ್ತು ಸಂವಿಧಾನದ ಮೂಲ ಆಶಯಗಳ ಮೇಲೆ ಆಕ್ರೋಶಕಾರೀ ದಾಳಿಗಳನ್ನೂ ವಿರೋಧವನ್ನೂ ವ್ಯಕ್ತಪಡಿಸಿದ್ದಾರೆ ಎಂದಿರುವ ಸಿಐಟಿಯು ಮುಷ್ಕರವನ್ನು ಬೆಂಬಲಿಸಿದ ಮತ್ತು ಸೌಹಾರ್ದತೆಯಿಂದ ಕಾರ್ಮಿಕ ವರ್ಗದೊಂದಿಗೆ ನಿಂತಿರುವ ಎಲ್ಲರಿಗೂ, ನಿರ್ದಿಷ್ಟವಾಗಿ ರೈತರು, ಕೃಷಿ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು ಮತ್ತು ಮಹಿಳೆಯರ ಸಂಘಟನೆಗಳಿಗೆ ಕೃತಜ್ಞತೆ ವ್ಯಕ್ತಪಡಿಸಿದೆ.

ಮೋದಿ ಸರಕಾರ ಜನಗಳ ಮತ್ತು ದೇಶದ ಹಿತಗಳನ್ನು ದೇಶಿ–ವಿದೇಶಿ ಕಾರ್ಪೊರೇಟ್‌ಗಳಿಗೆ ಮಾರುವ ಧೋರಣೆಗಳ ವಿರುದ್ಧ ಜನರ ಅಪಾರ ಆಕ್ರೋಶವನ್ನು ನಿರ್ಲಕ್ಷಿಸಿದರೆ ಅದಕ್ಕೆ ಕೇಡು ಕಾದಿದೆ, ಶ್ರಮಜೀವಿಗಳು ಜಾಗೃತರಾಗುತ್ತಿದ್ದಾರೆ, ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ವರೆಗೆ ಅವರು ವಿಶ್ರಮಿಸುವದಿಲ್ಲ ಎಂದು ಮೋದಿ ಸರಕಾರವನ್ನು ಸಿಐಟಿಯು ಎಚ್ಚರಿಸಿದೆ.


ಝಾರ್ಖಂಡ್



ತಮಿಳುನಾಡು



ಎಐಕೆಎಸ್ ಸೌಹಾರ್ದ, ಬಿಹಾರ



ಹರ್ಯಾಣ

ಬಲಾಢ್ಯ ಗ್ರಾಮೀಣ ಆಂದೋಲನ ಕಟ್ಟಲು ನಿರ್ಧರಿಸಿದ ಕೂಲಿಕಾರರ 9ನೇ ಅಖಿಲ ಭಾರತ ಸಮ್ಮೇಳನ



ಹೆಚ್ಚುತ್ತಿರುವ ಆರ್ಥಿಕ ಅಸಮಾನತೆ ಮತ್ತು ಸಾಮಾಜಿಕ ಧರ್ಮದವನ್ನು ಹಿಮ್ಮೆಟ್ಟಿಸುಲು ಒಂದು ಬಲಾಢ್ಯವಾದ ಗ್ರಾಮೀಣ ಶ್ರಮಿಕರ ಆಂದೋಲನವನ್ನು ಕಟ್ಟಲು ನಿರ್ಧರಿಸಿವುದರೊಂದಿಗೆ ಕೇರಳದ ಕಣ್ಣೂರ್‌ನಲ್ಲಿ 2020 ಜನವರಿ 1 ರಿಂದ ಆರಂಭವಾದ ಅಖಿಲ ಭಾರತ ಕೃಷಿ ಕೂಲಿಕಾರರ 9ನೇ ಸಮ್ಮೇಳನವು ಜನವರಿ 3 ರಂದು ಸಂಜೆ ನಡೆದ ಬೃಹತ್ ಬಹಿರಂಗ ಸಭೆಯೊಂದಿಗೆ ಯಶಸ್ವಿಯಾಗಿ ಮುಕ್ತಾಯವಾಯಿತು.

ಬೃಹತ್ ಬಹಿರಂಗ ಸಭೆ:

ಅಂದು ಶುಕ್ರವಾರ ಮಧ್ಯಾಹ್ನ ಒಂದು ಗಂಟೆಯಿಂದಲೇ ಜನ ಮೆರವಣಿಗೆಗಳ ಮೂಲಕ ಸಭೆಸೇರ ತೊಡಗಿದ್ದರು. ಬೃಹತ್ ವೇದಿಕೆಯೊಂದು ಸಜ್ಜಾಗಿತ್ತು. ಉರಿಯುವ ಬಿಸಿಲನ್ನು ಲೆಕ್ಕಿಸದೆ, ಸ್ತ್ರೀ ಪುರುಷರೆಂಬ ಭೇಧವಿಲ್ಲದೆ, ಒಂದು ಲಕ್ಷಕ್ಕೂ ಹೆಚ್ಚು ಜನ ತಮ್ಮ ನೆಚ್ಚಿನ ನಾಯಕ, ಕೇರಳದ ಮುಖ್ಯಮಂತ್ರಿ ಸಂಗಾತಿ ಪಿಣರಾಯ್ ವಿಜಯನ್‌ಗಾಗಿ ಕಾಯುತ್ತಿದ್ದರು. ಸಾಂಸ್ಕೃತಿಕ ತಂಡವೊಂದು ಸೇರಿದ ಜನಸ್ತೋಮವನ್ನು ತಮ್ಮ ಹಾಡು ಹಾಗೂ ನೃತ್ಯಗಳ ಮೂಲಕ ಮನರಂಜಿಸುತ್ತಿತ್ತತು. ಆತ್ತ ಸಾಗರ ! ಇತ್ತ ಜನ ಸಾಗರ !!

ಆರಂಭದಲ್ಲಿ ಕೇರಳ ಕೃಷಿ ಕಾರ್ಮಿಕರ ಸಂಘದ ಅಧ್ಯಕ್ಷರಾದ ಸಂಗಾತಿ ಎಂ.ವಿ. ಗೋವಿಂದನ್ ಮಾಸ್ತರ್ ಮಾತನಾಡಿ ಕೇರಳದ ಗ್ರಾಮೀಣ ಶ್ರಮಜೀವಿಗಳ ತ್ಯಾಗಬಲಿದಾನಗಳ ಹೋರಾಟದ ಚರಿತ್ರೆಯನ್ನು ಕಣ್ಣೆದುರಿಗೆ ತರುವ ಮೂಲಕ ಆ ಸಮರಶೀಲ ಹೋರಾಟದ ಪರಂಪರೆಯನ್ನು ದೇಶದ ಉದ್ದಗಲಕ್ಕೂ ವಿಸ್ತರಿಸಬೇಕಾದ ಅಗತ್ಯತೆಯನ್ನು ಅಲ್ಲಿ ನೆರೆದವರೆಲ್ಲರು ಮನಗಾಣುವಂತೆ ಮಾಡಿದರು.

ಮುಖ್ಯಮಂತ್ರಿ ಸಿಪಿಐ(ಎಂ) ನ ಸಂಗಾತಿ ಪಿಣರಾಯ್ ವಿಜಯನ್ ಆಗಮಿಸುತ್ತಿದ್ದಂತೆ ಅವರನ್ನು ಹೃದಯ ಸಂಭ್ರಮದಿಂದ ಬರಮಾಡಿಕೊಳ್ಳಲಾಯಿತು. ಸುಮಾರು ಒಂದು ಗಂಟೆ ಕಾಲ ಮಾತನಾಡಿದ ಅವರು ಕೇರಳ ರಾಜ್ಯದಲ್ಲಿ 1957ರಲ್ಲಿ ಅಧಿಕಾರಕ್ಕೆ ಬಂದ ಪ್ರಥಮ ಕಮ್ಯೂನಿಸ್ಟ್ ಪಕ್ಷದ ನೇತೃತ್ವದ ಸಂಗಾತಿ ಇಎಂಎಸ್ ನಂಬೂದರಿಪಾದ್ ರವರ ಸರ್ಕಾರದಿಂದ ಇಲ್ಲಿಯ ವರೆಗೆ ಅಧಿಕಾರಕ್ಕೆ ಬಂದ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರಗಳು ಕೃಷಿ ಕಾರ್ಮಿಕರ ಬದುಕಿನಲ್ಲಿ ಬದಲಾವಣೆ ತರುವಲ್ಲಿ ಮಾಡಿದ ಸಾಧನೆಗಳನ್ನು ವಿವರಿಸಿದರು. ಇದರ ಪರಿಣಾಮವಾಗಿ ಬಹುತೇಕ ದಲಿತ ಸಮುದಾಯಗಳಿಗೆ ಸೇರಿದ ಕೃಷಿ ಕಾರ್ಮಿಕರು ಗೌರವಯುತವಾದ ಜೀವನವನ್ನು ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗಿದ್ದು ಇನ್ನು ಹೆಚ್ಚಿನ ಅಭಿವೃದ್ಧಿಗೆ ಕೇಂದ್ರ ಬಿಜೆಪಿ ಸರ್ಕಾರದ ಅಸಹಕಾರವೊಂದೇ ಅಡೆತಡೆಯಾಗಿ ಪರಿಣಮಿಸಿದೆ ಎಂದು ವಿಷಾಧಿಸಿದರು. ಕಾರ್ಪೋರೇಟ್ ಕಂಪನಿಗಳ ಅಣತಿಯಂತೆ ಆಡಳಿತ ನಡೆಸುತ್ತಿರುವ ಮೋದಿ ನೇತೃತ್ವದ ಸರ್ಕಾರವು ವೊಡ್ಡುತ್ತಿರುವ ಸವಾಲನ್ನು ಎದುರಿಸಿ ಹಿಮ್ಮೆಟ್ಟಿಸಲು ಕೇರಳದ ಸಮರಶೀಲ ಶ್ರಮಿಕ ವರ್ಗ ಎಲ್ಲ ರೀತಿಯ ತ್ಯಾಗ ಬಲಿದಾನಗಳಿಗೆ ಸಿದ್ಧವಾಗಿದೆ ಎಂದು ಹೇಳಿದಾಗ ಅಲ್ಲಿ ಸೇರಿದ್ದ ಜನರು ಹರ್ಷೋದ್ಗಾರಗಳೊಂದಿಗೆ ತಮ್ಮ ಸಹಮತವನ್ನು ವ್ಯಕ್ತಪಡಿಸಿದರು. ಕೇರಳದ ಜನತೆಯನ್ನು ಮತಧರ್ಮಗಳ ಹೆಸರಿನಲ್ಲಿ ಒಡೆದು ಆಳುವ ಕೋಮುವಾದಿ ಶಕ್ತಿಗಳು ನಡೆಸಿರುವ ಪ್ರಯತ್ನವನ್ನು ಯಾವುದೇ ಬೆಲೆತ್ತೆತ್ತಾದರೂ ವಿಫಲಗೊಳಿಸಲಾಗುವುದು ಎಂದು ಸಂಗಾತಿ ಪಿಣರಾಯ್ ವಿಜಯನ್ ಗುಡುಗಿದರು.

ಅನಂತರ ಮಾತನಾಡಿದ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ನೂತನ ಅಧ್ಯಕ್ಷರಾದ ಸಂಗಾತಿ ಎ. ವಿಜಯರಾಘವನ್ ಮತ್ತು ಪ್ರಧಾನ ಕಾರ್ಯದರ್ಶಿ ಬಿ. ವೆಂಕಟ್‌ರವರು ಸಮ್ಮೇಳನದಲ್ಲಿ ಚರ್ಚಿಸಲಾದ ದೇಶದ ಕೃಷಿ ಕಾರ್ಮಿಕರ ಪರಿಸ್ಥಿತಿಯ ಕುರಿತು ಹಾಗೂ ಸಮ್ಮೇಳನದಲ್ಲಿ ಕೈಗೊಳ್ಳಲಾದ ಪ್ರಮುಖ ನಿರ್ಣಯಗಳ ಕುರಿತು ವಿವರವಾದ ಮಾಹಿತಿ ನೀಡಿದರು. ಸಮಯ ರಾತ್ರಿ 8 ಗಂಟೆಯಾದರೂ ಸಭೆ ಮುಗಿದಿರಲಿಲ್ಲ, ಜನ ಚದುರಿರಲಿಲ್ಲ.

ಸಂಗಾತಿ ಎಸ್.ಆರ್. ಪಿಳ್ಳೈರವರಿಂದ ಉದ್ಘಾಟನೆ :

ಕೃಷಿ ಕೂಲಿಕಾರರ 9ನೇ ಅಖಿಲ ಭಾರತ ಸಮ್ಮೇಳನಕ್ಕೆ 2019 ಡಿಸೆಂಬರ್ 31 ರಂದೇ ಚಾಲನೆ ನೀಡಲಾಯಿತು. ಅಂದು ಸಂಜೆ 6 ಗಂಟೆಗೆ ಸಮ್ಮೇಳನದ ಸ್ವಾಗತ ಸಮಿತಿ ವತಿಯಿಂದ ಮೆರವಣಿಗೆ ಹಾಗೂ ಪೊಲೀಸ್ ಮೈದಾನದಲ್ಲಿ ಧ್ವಜಾರೋಹಣ ಕಾರ್ಯಕ್ರಮ ವಿಶಿಷ್ಟವಾಗಿ ನೆರವೇರಿಸಲಾಯಿತು. ಧ್ವಜವನ್ನು ಮತ್ತು ಧ್ವಜ ಸ್ತಂಭವನ್ನು ವೀರ ಹುತಾತ್ಮರ ನಾಡು ಕೈಯೂರಿನಿಂದ ತರಲಾಗಿತ್ತು. ವಿವಿಧ ರಾಜ್ಯಗಳಿಂದ ಅಷ್ಟರಲ್ಲಿ ಸಮ್ಮೇಳನದ ಸ್ಥಳ, "ಸಂಗಾತಿ ಕುಂಜಚ್ಚನ್ ನಗರ" ಕ್ಕೆ ಬಂದು ತಲುಪಿದ್ದ ಸಮ್ಮೇಳನದ ಪ್ರತಿನಿಧಿ ಸಂಗಾತಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸ್ಫೂರ್ತಿ ಪಡೆದರು.


ಮರುದಿನ ಅಂದರೆ 2020 ಜನವರಿ 1 ರಂದು ಬೆಳಿಗ್ಗೆ 9 ಗಂಟೆಯಿಂದಲೇ ಪ್ರತಿನಿಧಿಗಳ ನೋಂದಣಿ ಆರಂಭವಾಗಿತ್ತು. ಸಂಘಟನೆಯ ಅಖಿಲ ಭಾರತ ಅಧ್ಯಕ್ಷರು ಸಂಗಾತಿ ತಿರುನಾವಕ್ಕರಸು ಸಂಘದ ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನದ ಕಲಾಪಗಳಿಗೆ ಚಾಲನೆ ದೊರಕಿತು. ಹುತಾತ್ಮರ ಸಂಭ್ತಕ್ಕೆ ಪುಷ್ಪ ನಮನ ಸಲ್ಲಿಸಿ ಪ್ರತಿನಿಧಿಗಳು ವಿಶಾಲ ಸಭಾಂಗಣದಲ್ಲಿ ತಮ್ಮ ತಮ್ಮ ಆಸನಗಳನ್ನು ಅಲಂಕರಿಸಿದರು.

ಆರಂಭದಲ್ಲಿ ಸಮ್ಮೇಳನದ ಕಲಾಪಗಳನ್ನು ನಿರ್ವಹಿಸಲು ಅಗತ್ಯವಾದ ಅಧ್ಯಕ್ಷೀಯ ಮಂಡಳಿ ಹಾಗೂ ಇತರ ಸಮಿತಿಗಳನ್ನು ಆಯ್ಕೆ ಮಾಡಲಾಯಿತು. ಅಗಲಿದ ಸಂಗಾತಿಗಳಿಗೆ ಶ್ರದ್ಧಾಂಜಲಿ ಸಲ್ಲಿಸುವ ನಿರ್ಣಯವನ್ನು ಅಂಗೀಕರಿಸಿ 2 ನಿಮಿಷಗಳ ಮೌನ ಆಚರಿಸಲಾಯಿತು. ಅಖಿಲ ಭಾರತ ಕಿಸಾನ್ ಸಭಾದ ನಾಯಕರೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಹಿರಿಯ ಸಂಗಾತಿ ಎಸ್. ರಾಮಚಂದ್ರನ್ ಪಿಳ್ಳೈ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

"ನವ ಉದಾರವಾದಿ ಧೋರಣೆಗಳನ್ನು ಅನುಸರಿಸುತ್ತಾ ಬಂದಿರುವ ವಿಶ್ವದ ಎಲ್ಲ ಬಂಡವಾಳಶಾಹಿ ದೇಶಗಳಲ್ಲಿ ಇಂದು ಆರ್ಥಿಕ ಬಿಕ್ಕಟ್ಟು ಆಳವಾಗುತ್ತಿದೆ. ಆಳುವ ವರ್ಗಗಳು ತಮ್ಮ ವೈಫಲ್ಯವನ್ನು ಮರೆಮಾಚಲು ಮತ್ತು ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಫ್ಯಾಸಿಸ್ಟ್ ತಂತ್ರಗಳನ್ನು ಅನುಸರಿಸುತ್ತಿವೆ. ಜನರನ್ನು ಧರ್ಮ, ಜಾತಿ, ಜನಾಂಗ, ಭಾಷೆ, ಬಣ್ಣದ ಆಧಾರದಲ್ಲಿ ವಿಭಜಿಸುವ, ಅವರ ಹೋರಾಟಗಳನ್ನು ಹತ್ತಿಕ್ಕುವ ಪ್ರವೃತ್ತಿಗಳು ಹೆಚ್ಚುತ್ತಿವೆ. ಆದಾಗ್ಯೂ ಹೋರಾಟಗಳು ಬೆಳೆಯುತ್ತಿವೆ. ಮಹಿಳೆಯರು, ವಿದ್ಯಾರ್ಥಿಗಳು, ಮಕ್ಕಳು ಸಹ ಹೋರಾಟಕ್ಕೆ ಇಳಿಯುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಇಂದು ಕೃಷಿ ಕೂಲಿಕಾರರ 9ನೇ ಅಖಿಲ ಭಾರತ ಸಮ್ಮೇಳನ ನಡೆಯುತ್ತಿದೆ" ಎಂದು ಸಂಗಾತಿ ಎಸ್.ಆರ್.ಪಿ. ಹೇಳಿದರು.

"ಭಾರತ ದೇಶದಲ್ಲಿಯೂ ಇಂದು ಇದೇ ಆತಂಕಕಾರಿ ಪರಿಸ್ಥಿತಿ ಬೆಳೆಯುತ್ತಿದೆ. ದೇಶದ ಕೃಷಿ ಹಾಗೂ ಕೈಗಾರಿಕಾ ರಂಗದಲ್ಲಿ ಬಿಕ್ಕಟ್ಟು ಆಳವಾಗುತ್ತಿದೆ. ಉತ್ಪಾದನೆ ಕುಸಿದಿದೆ. ರಫ್ತು ಕ್ಷೀಣಿಸಿದೆ. ನಿರುದ್ಯೋಗ ಹೆಚ್ಚುತ್ತಿದೆ. ಜನರ ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ರೈತರು ದಿವಾಳಿಯಾಗುತ್ತಿದ್ದಾರೆ. ದಿನಕ್ಕೆ ಸರಾಸರಿ 31 ಮಂದಿ ಸಾಲದ ಬಾಧೆಗೆ ತುತ್ತಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕೃಷಿ ಕಾರ್ಮಿಕರ ಆದಾಯ ಕುಸಿದಿದೆ. ಗ್ರಾಮೀಣ ನಿರಿದ್ಯೋಗ ಬೆಳೆಯುತ್ತಿದೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಕೇಂದ್ರ ಸರ್ಕಾರದ ನಿರ್ಲಕ್ಷಕ್ಕೆ ಒಳಗಾಗಿದೆ. ಭೂಮಿಯ ಪ್ರಶ್ನೆ ಇತ್ಯರ್ಥ ಆಗುತ್ತಿಲ್ಲ. ಜಾಗತಿಕ ತಾಪಮಾನ ಏರುತ್ತಿದೆ. ಸರ್ಕಾರ ಗಮನ ನೀಡುತ್ತಿಲ್ಲ. ಅಮಾನವೀಯವಾದ ವಲಸೆ ಹೆಚ್ಚುತ್ತಿದೆ. ಸಮಾಜ ಘಾತಕ ಶಕ್ತಿಗಳು ಬಲಗೊಳ್ಳುತ್ತಿವೆ. ಮಹಿಳೆಯರ ಮೇಲೆ, ಯುವತಿಯರ ಮೇಲೆ, ಚಿಕ್ಕ ಹೆಣ್ಣು ಮಕ್ಕಳ ಮೇಲೂ ಅತ್ಯಾಚಾರ ಪ್ರಕರಣಗಳು ಹೆಚ್ಚಾಗುತ್ತಿವೆ. ಅನ್ಯಾಯಕ್ಕೆ

ಪುಟ 10 ಕ್ಕೆ



ಎ. ವಿಜಯರಾಘವನನ್
ಅಧ್ಯಕ್ಷರು



ಬಿ. ವೆಂಕಟ್
ಪ್ರಧಾನ ಕಾರ್ಯದರ್ಶಿ



ಬಲಾಢ್ಯ ಗ್ರಾಮೀಣ ಅಂದೋಲನ ಕಟ್ಟಲು ನಿರ್ಧರಿಸಿದ ಕೂಲಿಕಾರರ 9ನೇ ಅಖಿಲ ಭಾರತ ಸಮ್ಮೇಳನ

ಪುಟ 9 ರಿಂದ

ಒಳಗಾದವರು, ಅವಕಾಶ ವಂಚಿತರು ಪ್ರತಿಭಟಸಲು ಮುಂದಾಗುತ್ತಿದ್ದಾರೆ. ಅಂತಹ ಹೊರಾಟಗಳನ್ನು ನಿರ್ಧಯವಾಗಿ ತುಳಿಯಲಾಗುತ್ತದೆ. ಅವರ ನಡುವೆ ದ್ವೇಷದ ಬೀಜ ಬಿತ್ತಲಾಗುತ್ತದೆ. ಅಲ್ಪಸಂಖ್ಯೆಆತರ ಮೇಲೆ ವ್ಯವಸ್ಥಿತ ದಾಳಿ ಮಾಡಲಾಗುತ್ತದೆ. ಭಾರೀ ಬಹುಮತದ ಹೆಸರಿನಲ್ಲಿ ಸಂವಿಧಾನ ವಿರೋಧಿ ಕಾನೂನುಗಳನ್ನು ಸಂಸತ್ತಿನಲ್ಲಿ ಯಾವುದೇ ಚರ್ಚೆ ಇಲ್ಲದೆ ಪಾಸ್ ಮಾಡಲಾಗುತ್ತದೆ.

ಆದ್ದರಿಂದ ಕೃಷಿ ಕಾರ್ಮಿಕರಿಗೆ, ರೈತರಿಗೆ, ಕಾರ್ಮಿಕರಿಗೆ 'ಒಳ್ಳೆಯ ದಿನಗಳಲ್ಲ,' ಭಯಾನಕ ದಿನಗಳು ಕಾಯುತ್ತಿವೆ. ಇದರಿಂದ ಅಧೈರ್ಯಗೊಳ್ಳುವುದಲ್ಲ. ಇಂದಿನ ಕೇಂದ್ರ ಸರ್ಕಾರದ ನಿಜ ಸ್ವರೂಪವನ್ನು, ಅದರ ಆಡಳಿತ ನೀತಿಯ ಉದ್ದೇಶವನ್ನು ಅರ್ಥಮಾಡಿಕೊಂಡು ಅದರ ವಿರುದ್ಧ ಹೋರಾಡಲು ಮುಂದಾಗಬೇಕಾಗಿದೆ. ಈ ದಿಕ್ಕಿನಲ್ಲಿ ಜನವರಿ 8 ರಂದು ನಡೆಯಲಿರುವ ದೇಶವ್ಯಾಪಿ ಕೈಗಾರಿಕಾ ಮುಷ್ಕರವನ್ನು ಮತ್ತು ಗ್ರಾಮೀಣ ಹರತಾಳವನ್ನು ಯಶಸ್ವಿಗೊಳಿಸಬೇಕೆಂದು ಸಂಗಾತಿ ಎಸ್‌ಆರ್‌ಪಿ ಕರೆನೀಡಿದರು.

ಪ್ರತಿನಿಧಿಗಳ ಅಧಿವೇಶನದ ಉದ್ಘಾಟನಾ ಸಮಾವೇಶದ ಆರಂಭದಲ್ಲಿ ಸ್ವಾಗತಾ ಸಮಿತಿಯ ಅಧ್ಯಕ್ಷರೂ, ಕೇರಳ ಸರ್ಕಾರದ ಕೈಗಾರಿಕಾ ಹಾಗೂ ಯುವಜನ ಇಲಾಖೆಯ ಸಚಿವರೂ ಆಗಿರುವ ಸಂಗಾತಿ ಇ.ಪಿ. ಜಯರಾಜನ್ ಸ್ವಾಗತ ಭಾಷಣ ಮಾಡಿದರು. ಅವರು ತಮ್ಮ ಭಾಷಣದಲ್ಲಿ ಕಣ್ಣೂರಿನ ಕ್ರಾಂತಿಕಾರಿ ಚರಿತ್ರೆಯನ್ನು ವಿವರಿಸಿದರು.

ಭಾರತೀಯ ಕಿಸಾನ್ ಮಜ್ದೂರ್ ಯೂನಿಯನ್ (ಬಿ.ಕೆ.ಎಂ.ಯು.) ಎಸ್.ಎಫ್.ಐ., ಜನವಾದಿ ಮಹಿಳಾ ಸಂಘ, ಸಿ.ಐ.ಟಿ.ಯು. ಮೊದಲಾದ ಸಂಘಟನೆಗಳ ಪ್ರಮುಖರು ಶುಭಕೋರಿ ಮಾತನಾಡಿದರು. ಕೆಲವು ಹೊರದೇಶಗಳ ಕೃಷಿ ಕಾರ್ಮಿಕ ಸಂಘಟನೆಗಳಿಂದ ಬಂದಿದ್ದ ಶುಭಾಶಯದ ಸಂದೇಶಗಳನ್ನು ಓದಲಾಯಿತು. ಕೊನೆಯಲ್ಲಿ ಸಂಘದ ಅಖಿಲ ಭಾರತ ಅಧ್ಯಕ್ಷರಾದ ಸಂಗಾತಿ ತಿರುನಾವಕ್ಕರಸು ಅಧ್ಯಕ್ಷಿಯ ಭಾಷಣ ಮಾಡಿ ದೇಶದ ಇಂದಿನ ಗಂಭೀರ ಪರಿಸ್ಥಿತಿಗೆ ಕಾರಣವಾದ ಬಿಜೆಪಿ ಸರ್ಕಾರದದ ಧೋರಣೆಗಳನ್ನು ಬದಲಾಯಿಸಲು ಸಾಧ್ಯವಾಗುವಂತೆ ನಾವು ಸಂಘಟನೆಯನ್ನು ದೇಶದ ಎಲ್ಲಾ ರಾಜ್ಯಗಳಿಗೂ ವಿಸ್ತರಿಸಿ ಬಲಪಡಿಸಬೇಕು ಎಂದು ಹೇಳಿದರು.

ವರದಿ ಮಂಡನೆ ಮತ್ತು ಚರ್ಚೆ

ಮಧ್ಯಾಹ್ನ 3 ಗಂಟೆಗೆ ಪ್ರತಿನಿಧಿಗಳ ಅಧಿವೇಶನ ಪುನರಾರಂಭಗೊಂಡಾಗ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಸಂಗಾತಿ ಎ. ವಿಜಯ ರಾಘವನ್‌ರವರು ಕರಡು ವರದಿಯನ್ನು ಮಂಡಿಸಿದರು. ವರದಿಯಲ್ಲಿ 4 ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಜಾಗತಿಕ ಮಟ್ಟದ ರಾಜಕೀಯ ವಿದ್ಯಮಾನಗಳನ್ನು ಹಾಗೂ ಭಾರತದ ರಾಜಕೀಯ ಪರಿಸ್ಥಿಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಎರಡನೇಯ ಭಾಗದಲ್ಲಿ ದೇಶದ ಕೃಷಿ ಕೂಲಿಕಾರರ ಇಂದಿನ ಪರಿಸ್ಥಿತಿಯನ್ನು, ಕಳೆದ ಐದು ವರ್ಷಗಳಲ್ಲಿ ಆಗಿರುವ ಆರ್ಥಿಕ, ಸಾಮಾಜಿಕ ಬದಲವಣೆಗಳನ್ನು ವಿವರಿಸಲಾಗಿದೆ. ಈ ಭಾಗದಲ್ಲಿ ದೇಶದಲ್ಲಿ ಆಳವಾಗುತ್ತಿರುವ ಕಾರ್ಷಿಕ ಬಿಕ್ಕಟ್ಟಿನಿಂದಾಗಿ ಹೆಚ್ಚುತ್ತಿರುವ ಗ್ರಾಮೀಣ ನಿರುದ್ಯೋಗ, ವ್ಯಾಪಕಗೊಳ್ಳುತ್ತಿರುವ ವಲಸೆ, ಉದ್ಯೋಗ ಖಾತ್ರಿ ಯೋಜನೆಯ ಜಾರಿಯಲ್ಲಿ ಹೆಚ್ಚುತ್ತಿರುವ ಸರ್ಕಾರದ ನಿರಾಸಕ್ತಿ, ಯೋಜನೆಗೆ ಬಜೆಟ್ ಅನುದಾನದ ಕಡಿತ, ಅಸಮರ್ಪಕ ವೇತನ ನಿರ್ವಹಣೆ, ಕೃಷಿ ಕೂಲಿಕಾರ ಮಹಿಳೆಯರ ಕಳವಳಕಾರಿ ಪರಿಸ್ಥಿತಿ, ಮೂಲೆಗುಂಪು ಮಾಡಲಾದ ಭೂಮಿಯ ಪ್ರಶ್ನೆ, ಕರಾಳ ಭೂ ಸ್ವಾಧೀನ ಕಾಯ್ದೆ, ಅರಣ್ಯ ಹಕ್ಕುಗಳ ಮೇಲಿನ ದಾಳಿ, ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ಆತಂಕ, ಮನೆ ನಿವೇಶನಗಳ ಪ್ರಶ್ನೆ, ದಲಿತರ, ಹಿಂದುಳಿದ ವರ್ಗಗಳ ಬಡವರ ಮತ್ತು ಅಲ್ಪಸಂಖ್ಯಾತರ ಯಾತನಾಮಯ ಪರಿಸ್ಥಿತಿ, ಮಹಿಳೆಯರ ಮೇಲಿನ ದೌರ್ಜನ್ಯ, ಬಾಲ ಕಾರ್ಮಿಕರ ಶೋಷಣೆ, ಆಹಾರ ಭದ್ರತೆಯ ಮತ್ತು ರೇಷನ್ ವಿತರಣೆಯ ಸಮಸ್ಯೆಗಳು, ಸಾಮಾಜಿಕ ಸುರಕ್ಷಾ ಮಾಶಾಸನಗಳ ಪ್ರಶ್ನೆ, ಕೃಷಿಕೂಲಿಕಾರರ ಸಮಗ್ರ ಕೇಂದ್ರೀಯ ಶಾಸನ ಮೊದಲಾದ ವಿಷಯಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಕಾರ್ಯದರ್ಶಿ ವರದಿಯ ಮೂರನೇ ಭಾಗದಲ್ಲಿ 8ನೇ ಅಖಿಲ ಭಾರತ ಸಮ್ಮೇಳನದ ನಂತರದ ಅವಧಿಯಲ್ಲಿ ನಮ್ಮ ಪ್ರಮುಖ ಹೋರಾಟಗಳ ಮತ್ತು ಅನುಭವಗಳ ವಿಮರ್ಶಾತ್ಮಕ ವಿವರಣೆಯನ್ನು ನೀಡಲಾಗಿದೆ. ಕೇರಳದಲ್ಲಿ ಕೃಷಿಕೂಲಿಕಾರರಿಗಾಗಿ ಸಮಗ್ರ ಕಾಯ್ದೆಯೊಂದು ಜಾರಿಯಲ್ಲಿದೆ. 60ವರ್ಷ ದಾಟಿದ ಕೃಷಿಕೂಲಿಕಾರರ ಗಾಗಿ ಮಾಸಿಕ ಪಿಂಚಣಿ ಸಿಗುತ್ತದೆ. ಈಗ ಅವರನ್ನು ಪಂಚಾಯತ್ ಮಟ್ಟದ ಕೃಷಿ ಕಾರ್ಮಿಕ ಸೇನೆಗಳಲ್ಲಿ ಭರ್ತಿ ಮಾಡಿ ಸರಕಾರದ ನಿಯಂತ್ರಣದಲ್ಲಿ ಸರ್ಕಾರ ನಿಗದಿತ ವೇತನದೊಂದಿಗೆ ಕೆಲಸ ಒದಗಿಸಲಾಗುತ್ತದೆ. (ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು) ವರದಿಯ ನಾಲ್ಕನೆಯ ಭಾಗ ಸಂಘಟನೆಯ ಕುರಿತಾಗಿದೆ.

ಈ ನಡುವೆ ಅಖಿಲ ಭಾರತ ಕಿಸಾನ್ ಸಭಾದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಸಂಗಾತಿ ಹನ್ನನ್ ಮುಲ್ಲಾ ಸಮ್ಮೇಳನಕ್ಕೆ ಶುಭಕೋರಿ ಮಾತನಾಡುತ್ತಾ ದೇಶವನ್ನು ಉಳಿಸಲು, ದೇಶವನ್ನು ಬದಲಾಯಿಸಲು ದೊಡ್ಡ ಆಂದೋಲನ ನಡೆಯಬೇಕಾಗಿದ್ದು ನಾವು ರೈತರು ಮತ್ತು ಕೃಷಿ ಕೂಲಿಕಾರರು ದೇಶದ ಕಾರ್ಮಿಕ ವರ್ಗದ ಜೊತೆಯಲ್ಲಿ ಕೈಜೋಡಿಸಿ ಬೃಹತ್ ಹೋರಾಟಕ್ಕೆ ಸಜ್ಜಾಗಬೇಕಾಗಿದೆ ಎಂದರು.

ವರದಿಯ ಮೇಲಿನ ಚರ್ಚೆಯಲ್ಲಿ 35 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಅವರಲ್ಲಿ 8 ಮಂದಿ ಮಹಿಳೆಯರು. ಚರ್ಚೆಯ ಗುಣಮಟ್ಟ ಉತ್ತಮವಾಗಿತ್ತು ಎಂದು ಚರ್ಚೆಗೆ ಉತ್ತರ ನೀಡುತ್ತಾ ಸಂಗಾತಿ ವಿಜಯರಾಘವನ್ ಹೇಳಿದರು. ತಕ್ಷಣದಲ್ಲಿ ಎತ್ತಿ ಕೊಳ್ಳಬೇಕಾದ ಪ್ರಮುಖ ಪ್ರಶ್ನೆಗಳ ಕುರಿತು ಅವರು ಪ್ರತಿನಿಧಿಗಳ ಗಮನ ಸೆಳೆದರು. ಸಂಘಟನೆಯನ್ನು ಬಲಪಡಿಸಲು ಗ್ರಾಮ ಘಟಕಗಳ ರಚನೆ ಮತ್ತು ಅವುಗಳನ್ನು ಕ್ರಿಯಾಶೀಲಗೊಳಿಸುವುದಕ್ಕೆ ವಿಶೇಷ ಆದ್ಯತೆ ನೀಡಬೇಕೆಂದು ಅವರು ಹೇಳಿದರು. ಸಂಸತ್ತಿನ ಒಳಗೆ ನಮ್ಮ ಕೂಲಿಕಾರರ ಪರವಾಗಿರುವ ಎಡಶಕ್ತಿಗಳ ಹೋರಾಟ ದುರ್ಬಲಗೊಂಡಿದೆ. ಆದ್ದರಿಂದ ಸಂಸತ್ತಿನ ಹೊರಗೆ ನಮ್ಮ ಹೋರಾಟ ಹಲವು ಪಟ್ಟು ತೀವ್ರವಾಗಬೇಕಾಗಿದೆ ಎಂದರು. ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನೂತನ ನಾಯಕತ್ವದ ಆಯ್ಕೆ :

ಸಮ್ಮೇಳನವು 145 ಸದಸ್ಯರುಳ್ಳ ಜನರಲ್ ಕೌನ್ಸಿಲ್ ಅನ್ನು ಸರ್ವಾನುಮತದಿಂದ ಆಯ್ಕೆ ಮಾಡಿತು. ಅವರ ಪೈಕಿ 65 ಸದಸ್ಯರುಳ್ಳ ಕೇಂದ್ರ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಲಾಯಿತು. ಕೇಂದ್ರ ಕಾರ್ಯಕಾರಿ ಸಮಿತಿಗೆ ಆಯ್ಕೆಯಾದವರ ಪೈಕಿ ಸಂಗಾತಿ ಎ. ವಿಜಯರಾಘವನನ್ ಅವರನ್ನು ಅಖಿಲ ಭಾರತ ಅಧ್ಯಕ್ಷರಾಗಿಯೂ ಸಂಗಾತಿ ಬಿ. ವೆಂಕಟ್ ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು.ಉಳಿದಂತೆ 13 ಮಂದಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಕರ್ನಾಟಕದಿಂದ ಸಂಗಾತಿಗಳಾದ ನಿತ್ಯಾನಂದ ಸ್ವಾಮಿ, ಚಂದ್ರಪ್ಪ ಹೊಸ್ಕೇರಾ, ಎಂ. ಪುಟ್ಟಮಾದು, ಎಚ್. ಗಂಗಾಧರಯ್ಯ, ಭೀಮಶೆಟ್ಟಿ ಯಂಪಳ್ಳಿ, ವೆಂಕಟೇಶ್ ಕೋಣಿ ಮತ್ತು ಸರೋಜಮ್ಮ ಜನರಲ್ ಕೌನ್ಸಿಲ್ ಸದಸ್ಯರಾಗಿಯೂ, ಸಂಗಾತಿಗಳಾದ ನಿತ್ಯಾನಂದಸ್ವಾಮಿ, ಚಂದ್ರಪ್ಪ ಹೊಸ್ಕೇರಾ ಮತ್ತು ಎಂ ಪುಟ್ಟಮಾದು ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಸಂಗಾತಿ ನಿತ್ಯಾನಂದ ಸ್ವಾಮಿ ಅವರನ್ನು ಪದಾಧಿಕಾರಿಗಳಲ್ಲಿ ಒಬ್ಬರಾಗಿ ಅಖಿಲ ಭಾರತ ಜಂಟಿ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ಆಯ್ಕೆ ಮಾಡಲಾಯಿತು. ಕರ್ನಾಟಕದಿಂದ ಒಟ್ಟು 41 ಮಂದಿ ಪ್ರತಿನಿಧಿಗಳಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಜನವರಿ 8ರ ಮುಷ್ಕರ ಮತ್ತು ಗ್ರಾಮೀಣ ಹರತಾಳ, ಉದ್ಯೋಗ ಖಾತ್ರಿ ಕಾಯ್ಕೆ ಸಮರ್ಪಕ ಜಾರಿ, ಆಹಾರ ಭದ್ರತೆ ಮತ್ತು ಸಮರ್ಪಕ ರೇಷನ್ ಜಾರಿ, ಸಮಗ್ರ ಕೇಂದ್ರೀಯ ಕಾಯ್ದೆ, ಅರಣ್ಯ ಹಕ್ಕುಗಳ ಕಾಯ್ಕೆ ಸಮರ್ಪಕ ಜಾರಿ. ಮನೆ ನಿವೇಶನ ರಹಿತರ ಪ್ರಶ್ನೆ, ದಲಿತರ ಮೇಲೆ ದೌರ್ಜನ್ಯಕ್ಕೆ ಸಮರ್ಪಕ ತಡೆ, ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸೆಗೆ ತಡೆ, ಸ್ಕೀಮ್ ವರ್ಕರ್ ಬೇಡಿಕೆಗಳಿಗೆ ಮಾನ್ಯತೆ, ಪೌರತ್ವ ತಿದ್ದುಪಡಿ ಕಾಯ್ದೆ ಹಿಂಪಡೆತ, ಕೇರಳದ ಎಡ ಪ್ರಜಾಸತಾತ್ಮಕ ರಂಗದ ಸರ್ಕಾರವನ್ನು ಅಸ್ಥಿರಗೊಳಿಸುವ ಬಲಪಂತೀಯ ಪ್ರಯತ್ನಗಳ ವಿರುದ್ಧ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಒಟ್ಟು ಸುಮಾರು 1000 ಪ್ರತಿನಿಧಿಗಳು (15 ರಾಜ್ಯಗಳಿಂದ) ಭಾಗವಹಿಸಿದ್ದರು. ಪ್ರತಿಯೊಂದು ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಕೊನೆಯದಾಗಿ ಸಮ್ಮೇಳನವನ್ನು ಉತ್ತಮವಾಗಿ ನಡೆಸಿಕೊಟ್ಟ ಸ್ವಾಗತ ಸಮಿತಿಯನ್ನು ಅಭಿನಂದಿಸಲಾಯಿತು.

–ಚಂದ್ರಪ್ಪ ಹೊಸ್ಕೇರಾ

ಮನುಷ್ಯತ್ವಕ್ಕೆ ಬೇಕೆ ಪುರಾವೆ?

ಕವನ

ಪುರಾವೆ ಬೇಕಂತೆ
ಪುರಾವೆ!
ಪೌರತ್ವವ ಸಾಬೀತು ಮಾಡಲು
ಪುರಾವೆ ಬೇಕಂತೆ
ಪುರಾವೆ!

ಆದರೆ....
ಮನುಷ್ಯತ್ವಕ್ಕೆ
ಎಲ್ಲಿಂದ ತರಲಿ ಪುರಾವೆ?
ಮಾನವೀಯತೆಗೆ
ಹೇಗೆ ನೀಡಲಿ ಪುರಾವೆ.?

ಆಗ ನಾ ಸಣ್ಣವಾ
ಜ್ವರದ ತಾಪದಿಂದ
ಬಳಲಿ ಬೆಂಡಾದಾಗ
ಬಳೆಯ ಚೂರ ದೀಪಕೆ
ಹಿಡಿದು ಕಾದ ನನ್ನಣೆಗೆ
ಚುಟುಕಿ ಹಾಕಿ
ಜ್ವರದ ತಾಪ ಇಳಿಸಿ
ನನ್ನ ಉಳಿಸಿದಾಕೆ...
ನನ್ನತ್ತೆ ಮಾಜೀನಾಬೀ

ಪುರಾವೆ ಬೇಕೆ
ಪುರಾವೆ?
ಮನುಷ್ಯತ್ವಕ್ಕೆ
ಎಲ್ಲಿಂದ ತರಲಿ
ಪುರಾವೆ!?

ಜಾತಿ ಜಾತಿಗಳ ನಡುವೆ
ಹಂಚಿ ಹೋದ ಕೇರಿಲಿ..
ಅನಾಥವಾಗಿದ್ದ ಮನೆ ನಮ್ದು !

ಚಳಿ ಇರಲಿ ಮಳೆ ಬರಲಿ
ಕರಿದ ಒಣ ಮೀನು,
ರೊಟ್ಟಿ ಜೊತೆ ಸೀಗಡಿ ಪುಡಿ ನೀಡಿ
ತನ್ನದೆ ಮನೆಯ ಮಡಿಲಲಿ
ಚೆಚ್ಚನೆಯ ಆಶ್ರಯ ನೀಡಿ
ನಮ್ಮನ್ನೆಲ್ಲ ಸಲಹಿದವಳೇ
ನಮ್ಮ ಕಾಶಿಂಅಜ್ಜಿ.

ಪುರಾವೆ ಬೇಕೆ ನಿಮಗೆ
ಪುರಾವೆ?
ಮನುಷ್ಯತ್ವಕ್ಕೆ
ಎಲ್ಲಿಂದ ತರಲಿ
ಪುರಾವೆ!?

ಅಂದು ಹೊಟ್ಟೆ ತುಂಬಿದ
ದಿನವೇ ಹಬ್ಬವಾಗಿತ್ತು
ನಮ್ಮಯ ಬದುಕು.
ಹಸಿವು ಬಡತನಗಳು
ಸದಾ ಜೊತೆಗಿದ್ದ ದಿನಗಳವು

ಬಕ್ರೀದ್ ಬಂದ್ರೆ ಚೋಂಗೀ
ಪೀರನ ಜಾತ್ರೇಲಿ ಸಕ್ಕರೆ
ರಂಜಾನ್ ನಲ್ಲಿ ಪಾಯಸ ▷▷▷

▷▷▷ ತರತರದ ಹಬ್ಬದೂಟವ
ಉಣಿಸುತ್ತಿದ್ದ ಅಕ್ಕನೇ
ನಮ್ಮ ಮುಮ್ತಾಜ್ ಬೇಗಂ

ಪುರಾವೆ ಬೇಕೆ
ಪುರಾವೆ?
ಮನುಷ್ಯತ್ವಕ್ಕೆ
ಎಲ್ಲಿಂದ ತರಲಿ
ಪುರಾವೆ!?

ಬೇಸಿಗೆ ಬಂದ್ರೆ
ಬಣ್ಣ ಬಣ್ಣದ ಐಸು.
ಮಳೆಗಾಲದಲ್ಲಿ ಖಾಲಿ ಬಾಟ್ಲೀ
ಹಳೇ ಕಬ್ಣ...
ಚಳಿಗಾದಲ್ಲಿ ಕೆರೆಯ ಮೀನು
ಸಂಜಿಮುಂದ ಹೆಂಡ್ದಂಗ್ಡಿ ಮುಂದ ಹಾಮ್ಲೇಟ್ ಗಾಡಿ
ಊರಾಗೊಂದು
ಪಂಕ್ಚರ್ ಅಂಗ್ಡೀ...

ಹೀಂಗೆ ನಾನಾ ವೇಷದ
ಬದುಕ ಬಂಡಿ ಸಾಗಿಸಿದ...
ಸಾಬೀ ಇಮಾಂಮಣ್ಣನೇ
ನಮ್ಮೂರಿನ ಎಲ್ರಿಗೂ
ನೈಜ ಸಾಹೇಬಣ್ಣ
ಅವನಿಲ್ಲದೆ ನಮ್ಮೂರಿನ
ಕೊಳಿ ಕೂಗಿದ್ದೆ ಇಲ್ಲ.!

ಪುರಾವೆ ಬೇಕೆ
ಪುರಾವೆ?
ಮನುಷ್ಯತ್ವಕ್ಕೆ
ಎಲ್ಲಿಂದ ತರಲಿ
ಪುರಾವೆ!?

ದೇಶ ಕೋಶ ಓದ್ದೋರಲ್ಲ
ತಾರ–ತಿಗಡಿ ಬಲ್ಲೋರಲ್ಲ
ದೇಶ ಬಿಟ್ಟು ದೇಶಕ್ಕೆ
ಬಂದೋರಂತೂ ಅಲ್ಲವೇ
ಅಲ್ಲ!

ನಮ್ಮೂರಲ್ಲೇ ಹುಟ್ಟಿ ಬಾಳಿ ಬೆಳೆದು
ನಮ್ಮೂರಲ್ಲೇ ಮಣ್ಣಾದ ಇವ್ರೆಲ್ಲ...
ನಮ್ ಸಂಬಂಧಿಗಳೇ
ಇದೇ ಪುರಾವೆ!

ನಮ್ಮಂತ ಜನರ ಮೇಲೆ ತೋರ್ಸಿದಾ
ಅನುಕಂಪ
ಅಕ್ಕರೆಯ ಪ್ರೀತಿಗಿಂತ
ನಿಮಗೆ
ಇನ್ನಾವ್ದು ಬೇಕು ಪುರಾವೆ!

ಪುರಾವೆ ಬೇಕಾ
ಪುರಾವೆ?
ನಾ ಮನುಷ್ಯತ್ವಕ್ಕೆ
ಎಲ್ಲಿಂದ ತರಲಿ
ಪುರಾವೆ?

– ಕೆ. ಮಹಾಂತೇಶ



ಒಬ್ಬ ಕಮ್ಯುನಿಸ್ಟ್ ಪಥ ಪ್ರದರ್ಶಕ
ಕಾಕಾ ಬಾಬು ಅಥವ ಮುಜಾಫರ್ ಅಹಮದ್

ಒಂದು ಶತಮಾನದ ಹಿಂದೆ, ರಾಷ್ಟ್ರೀಯ ಚಳುವಳಿಯ ಮಹತ್ವಾಕಾಂಕ್ಷೆಯು ಹಿಂದೂ ಪುನುರುಜ್ಜೀವನದ ರೂಪದಲ್ಲಿ ವ್ಯಕ್ತವಾಗುತ್ತಿದ್ದ ಅಂಶವು ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಂ ಯುವಕರು ಚಳುವಳಿಯ ಭಾಗವಾಗುವುದಕ್ಕೆ ದೊಡ್ಡ ಅಡಚಣೆಯಾಗಿದ್ದ ಪರಿಸ್ಥಿತಿಯಲ್ಲಿ ಧರ್ಮನಿರಪೇಕ್ಷತೆಯ ಮಾತು ನಿಷಿದ್ಧವಷ್ಟೇ ಅಲ್ಲ, ವಾಸ್ತವಿಕವಾಗಿ ಧರ್ಮನಿಂದನೆಯೆಂದೇ ಬಗೆಯುತ್ತಿದ್ದ ಸನ್ನಿವೇಶದಲ್ಲಿ, ಚಾರಿತ್ರಿಕ ಭೌತವಾದ ಮತ್ತು ಕಮ್ಯುನಿಸಂನತ್ತ ಮುನ್ನಡೆಯುವುದು, ಮತ್ತು, ಬದುಕಿನ ಕೊನೆಯವರೆಗೂ ಅದಕ್ಕೆ ವಿಧೇಯರಾಗಿರುವುದು ಒಂದು ಮಹತ್ಸಾಧನೆಯೇ ಸರಿ. ಮುಜಾಫರ್ ಅಹಮದ್‌ರಿಂದ ಮಾತ್ರವೇ ಅದು ಸಾಧ್ಯ. ಮುಜಾಫರ್ ಅಹಮದ್ ಇತಿಹಾಸ ಎಂದರೇನು ಎಂದು ಅರಿತಿದ್ದರು. ಇತಿಹಾಸ ನಿರ್ಮಿಸುವುರಲ್ಲಿ ನೆರವಾದರು.


ಕನ್ನಡಕ್ಕೆ: ಟಿ. ಸುರೇಂದ್ರ ರಾವ್



ಸಂಗಾತಿ ಮುಜಾಫರ್ ಅಹಮದ್ ಆಗಸ್ಟ್ 5, 1889 ರಂದು ಬಾಂಗ್ಲಾದೇಶದ ನೌಖಾಲಿ ಜಿಲ್ಲೆಯ ಸಂದ್ವೀಪ್‌ನಲ್ಲಿ ತಂದೆ–ತಾಯಿಯ ಕಿರಿಯ ಮಗನಾಗಿ ಹುಟ್ಟಿದರು. ಅವರ ಶಾಲಾ ಶಿಕ್ಷಣ ಮೊದಲು ಮದ್ರಸಾದಲ್ಲಿ ಮತ್ತು ನಂತರ 1906 ರಲ್ಲಿ ಸಂದ್ವೀಪ್‌ನ ಕಾರ್ಗಿಲ್ ಪ್ರೌಢಶಾಲೆಯಲ್ಲಿ ನಡೆಯಿತು. 1910 ರಲ್ಲಿ ಮುಜಾಫರ್ ಅಹಮದ್ ಕಾರ್ಗಿಲ್ ಪ್ರೌಢಶಾಲೆಯನ್ನು ಬಿಟ್ಟು ನೌಖಾಲಿ ಜಿಲ್ಲಾ ಶಾಲೆಗೆ ಸೇರಿದರು. 1913 ರಲ್ಲಿ ಮ್ಯಾಟ್ರಿಕ್ಯುಲೇಷನ್ ಮುಗಿಸಿದ ಅವರು ಕಲ್ಕತ್ತಾದಲ್ಲಿ ಹೂಗ್ಲಿಯ ಮೊಹ್ಸಿನ್ ಕಾಲೇಜ್ ಸೇರಿಕೊಂಡರು.

ಮುಜಾಫರ್ ಅವರ ಮುಸ್ಲಿಂ, ಕಾರ್ಮಿಕ ವರ್ಗದ ಹಿನ್ನೆಲೆ ಅವರ ರಾಜಕೀಯ ಚಿಂತನೆಗಳನ್ನು ರೂಪಿಸಿದ ಒಂದು ಪ್ರಧಾನ ಅಂಶವಾಗಿತ್ತು. 1910 ರ ದಶಕದ ಕೊನೆಯ ಭಾಗ ಮತ್ತು 1920 ರ ದಶಕದ ಆರಂಭದಲ್ಲಿ ಅವರು ಪಟ್ಟಣ ಪ್ರದೇಶದ ಬಡವರ ನಡುವಿನಲ್ಲಿ ನಡೆಸಿದ ಕೆಲಸಕಾರ್ಯಗಳು ಮುಜಾಫರ್ ಅವರ ರಾಜಕೀಯ ಬದಲಾವಣೆಗೆ ಕಾರಣವಾಯಿತು. ಅವರ ಬೌದ್ಧಿಕ ಸಾಮಾಜಿಕ ಪರಿಸರ ಮತ್ತು ಜನಸಾಮಾನ್ಯರ ವಿಪ್ಲವಗಳ ನಡುವಿನ ಮುಖಾಮುಖಿಯು ಅವರನ್ನು ಎಡ ರಾಜಕೀಯದತ್ತ ನೂಕಿತು. ಅವರು ಕಲ್ಕತ್ತಾಕ್ಕೆ ಬಂದು ಬರಹಗಾರನಾಗಬೇಕೆಂದು ಆರಂಭದಲ್ಲಿ ಬಯಸಿದರೂ ನಗರದ ವಿಶಾಲವಾದ ಸಂದರ್ಭ ಹಾಗೂ ಅವರದ್ದೇ ಆದ ಹೋರಾಟಗಳು ಅವರನ್ನು ಒಬ್ಬ ರಾಜಕೀಯ ಕಾರ್ಯಕರ್ತನನ್ನಾಗಿ ಪರಿವರ್ತಿಸಿತು. ಯುದ್ಧಾನಂತರದ 1917ರ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿ, ಖಿಲಾಫತ್ ಮತ್ತು ಅಸಹಕಾರ ಚಳುವಳಿಗಳು, ಈ ಪರಿವರ್ತನೆಯಲ್ಲಿ ಪ್ರಮುಖ ಪಾತ್ರ ವಹಿಸಿದವು.

ಮುಜಾಫರ್ ಅಹಮದ್ ಅವರು ನಜ್ರುಲ್ ಇಸ್ಲಾಂ ಅವರ ಜತೆಗೂಡಿ ಜಂಟಿಯಾಗಿ **ನವ್‌ಯುಗ್** ಬಂಗಾಳಿ ಪತ್ರಿಕೆಯನ್ನು ಸಂಪಾದಿಸಿದರು. ಈ ಅವಧಿಯಲ್ಲಿ, ಅವರ ಗಮನ ಕಾರ್ಮಿಕರ ಸಮಸ್ಯೆಗಳತ್ತ ಮತ್ತು ಅದೇ ಸಮಯದಲ್ಲಿ ಏಕಕಾಲದಲ್ಲಿ ಮಾರ್ಕ್ಸ್‌ವಾದಿ ಸಾಹಿತ್ಯದತ್ತ ಹರಿಯಿತು. ಅವರು ಭಾರತದ ಶ್ರಮಿಕರ ಬದುಕಿನ ಬಗ್ಗೆ ವಿಶೇಷವಾಗಿ ನಾವಿಕರ ಬದುಕಿನ ಬಗ್ಗೆ ಮತ್ತು ಕಾರ್ಮಿಕ ವರ್ಗದ ರಾಜಕೀಯ ಹಾಗೂ ಆರ್ಥಿಕ ಬೇಡಿಕೆಗಳ ಬಗ್ಗೆ ಅನೇಕ ಲೇಖನಗಳನ್ನು ಬರೆದರು. 1922 ರಲ್ಲಿ, ನಜ್ರುಲ್ ಇಸ್ಲಾಂ ಅವರು **ಧೂಮಕೇತು** ಎಂಬ ಎರಡು ತಿಂಗಳಿಗೊಮ್ಮೆ ಪ್ರಕಟವಾಗುವ ನಿಯತಕಾಲಿಕವನ್ನು ಆರಂಭಿಸಿದರು.. ಅದರಲ್ಲಿ ಮುಜಾಫರ್ ಭಾರತದ ಹಲವಾರು ರಾಜಕೀಯ ಸಮಸ್ಯೆಗಳ ಕುರಿತು ಲೇಖನಗಳನ್ನು ಬರೆದರು. ತಮ್ಮ ರಾಜಕೀಯ ಜೀವನದ ಆರಂಭದಿಂದಲೂ, ಅವರು ಕಾರ್ಮಿಕರನ್ನು ಸಂಘಟಿಸುವ ಮತ್ತು ಕಮ್ಯುನಿಸ್ಟ್ ಚಿಂತನೆಗಳನ್ನು ಪ್ರಸಾರ ಮಾಡುವ ಕಾರ್ಯಕ್ಕೆ ಹೆಚ್ಚು ಒತ್ತುಕೊಟ್ಟರು.



ನಜ್ರುಲ್ ಇಸ್ಲಾಂ

ಮುಜಾಫರ್ ಅಹಮದ್ ಅವರು 1918 ರಲ್ಲೇ ಪೂರ್ಣಾವಧಿ ಕಾರ್ಯಕರ್ತರಾದರು ಮತ್ತು ತಮ್ಮ ಕೊನೆಯ ಉಸಿರಿರುವ ತನಕ, ಡಿಸೆಂಬರ್ 18, 1973 ರವರೆಗೆ ಅದೇ ಸ್ಥಾನದಲ್ಲಿ ಉಳಿದುಕೊಂಡಿದ್ದರು. ಪೂರ್ಣಾವಧಿ ಕಾರ್ಯಕರ್ತರಾಗಿ ಅವರು ಮೊದಲು ಕೆಲಸ ಮಾಡಿದ್ದು **ಬಂಗಾಳ ಮುಸ್ಲಿಂ ಸಾಹಿತ್ಯ ಸಂಘ**ಕ್ಕಾಗಿ. ರಾಜಕೀಯದತ್ತ ಮುಖಮಾಡಲು ನಿರ್ಧರಿಸಿದ ಒಂದೂವರೆ ವರ್ಷದೊಳಗೆ, ನವಂಬರ್ 1921 ರಲ್ಲಿ ಅವರು ಮಾರ್ಕ್ಸ್‌ವಾದಿ ಸಾಹಿತ್ಯದ ಸಂಪರ್ಕಕ್ಕೆ ಬಂದರು. ಅವರಿಗೆ ಕಾನೂನುಬಾಹಿರವಾಗಿ ಕೊಂಡುಕೊಳ್ಳ ಸಾಧ್ಯವಾದ ಮೊದಲ ಮಾರ್ಕ್ಸ್‌ವಾದಿ ಪುಸ್ತಕಗಳೆಂದರೆ 'ಬೋಲ್ಶೆವಿಕ್‌ರು ರಾಜ್ಯಾಧಿಕಾರವನ್ನು ಉಳಿಸಿಕೊಂಡಾರೆಯೇ'; 'ಎಡ ಪಂಥೀಯ ಕಮ್ಯುನಿಸಂ, ಒಂದು ಶೈಶವಾವಸ್ಥೆಯ ವ್ಯಾಧಿ'; 'ಜನತೆಯ ಮಾರ್ಕ್ಸ್' ಮತ್ತು 'ಬಂಡವಾಳದ ಸಂಕ್ಷಿಪ್ತ ಕೃತಿ' ಗಳಾಗಿದ್ದವು. ಮುಜಾಫರ್ ಅವರು ಮಾರ್ಕ್ಸ್‌ವಾದ– ಲೆನಿನ್‌ವಾದಕ್ಕೆ ಹೀಗೆ ತೆರೆದುಕೊಂಡರು. ರಾಷ್ಟ್ರೀಯ ಚಳುವಳಿಯ ಮಹತ್ವಾಕಾಂಕ್ಷೆಯು ಹಿಂದೂ ಪುನುರುಜ್ಜೀವನದ ರೂಪದಲ್ಲಿ ವ್ಯಕ್ತವಾಗುತ್ತಿದ್ದ ಅಂಶವು ದೊಡ್ಡ ಸಂಖ್ಯೆಯಲ್ಲಿ ಮುಸ್ಲಿಂ ಯುವಕರು ಚಳುವಳಿಯ ಭಾಗವಾಗುವುದಕ್ಕೆ ದೊಡ್ಡ ಅಡಚಣೆಯಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಧರ್ಮನಿರಪೇಕ್ಷತೆಯ ಮಾತು ನಿಷಿದ್ಧವಷ್ಟೇ ಅಲ್ಲ, ಅದು ವಾಸ್ತವಿಕವಾಗಿ ಧರ್ಮನಿಂದನೆಯಾಗುತ್ತಿತ್ತು. ಈ ಸನ್ನಿವೇಶದಲ್ಲಿ, ಚಾರಿತ್ರಿಕ ಭೌತವಾದ ಮತ್ತು ಕಮ್ಯುನಿಸಂನತ್ತ ಮುನ್ನಡೆಯುವುದು, ಮತ್ತು , ಬದುಕಿನ ಕೊನೆಯವರೆಗೂ ಅದಕ್ಕೆ ವಿಧೇಯರಾಗಿರುವುದು ಮುಜಾಫರ್ ಅಹಮದ್ ಮಾತ್ರವೇ ಸಾಧಿಸಬಹುದಾದ ಮಹಾಸಾಧನೆ.

ಭಾರತದ ವಿಸ್ತಾರವಾದ ವಸಾಹತುಶಾಹಿ–ಪಾಳೇಗಾರಿ ಪ್ರದೇಶದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸಂಘಟಿಸಲು ಮುಜಾಫರ್ ಅಹಮದ್ ಅವರು ಓಡಾಡಿದರು. ಅದು ಎದೆಗುಂದಿಸುವ ಸವಾಲಾಗಿತ್ತು ಎಂದರಷ್ಟೇ ಸಾಲದು. ತೊಡಕುಗಳು ಮುಜಾಫರ್ ಅಹಮದ್ ಅವರ ನಿರಂತರ ಒಡನಾಡಿಯಾಗಿದ್ದವು. ಅವರು ತಮ್ಮ ಜೀವಿತಾವಧಿಯಲ್ಲಿ 20 ವರ್ಷಗಳಿಗಿಂತಲೂ ಹೆಚ್ಚು ಕಾಲ ಬ್ರಿಟಿಷ್ ಹಾಗೂ ಸ್ವತಂತ್ರ ಭಾರತದ ಜೈಲುಗಳಲ್ಲಿ ಕಳೆದರು ಮತ್ತು 8 ವರ್ಷಗಳ ಕಾಲ ತೀರ ಕಷ್ಟದ ಸಂದರ್ಭಗಳಲ್ಲಿ ಅವರು ಭೂಗತರಾಗಿದ್ದರು. ಅವರನ್ನು ಮೊದಲು ಬಂಧಿಸಿದ್ದು 1818 ರ ನಿಯಂತ್ರಣ ಕಾಯಿದೆ 3 ರ ಅಡಿಯಲ್ಲಿ ಮತ್ತು ತದನಂತರ ಕಾನ್ಪುರ್ ಬೋಲ್ಶೆವಿಕ್ ಪಿತೂರಿ ಪ್ರಕರಣದಲ್ಲಿ. ತೀವ್ರ ಅನಾರೋಗ್ಯದ ಕಾರಣ ಬಿಡುಗಡೆಯಾದ ಕೂಡಲೇ ಕಾನ್ಪುರ್ ಕಮ್ಯುನಿಸ್ಟ್ ಸಮ್ಮೇಳನದಲ್ಲಿ ಭಾಗವಹಿಸಿದ್ದರು; ಕಾನ್ಪುರದಿಂದ ಹಿಂತಿರುಗಿದ ಕೂಡಲೇ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟುವ ಹೊಣೆಯನ್ನು ಮುಜಾಫರ್ ವಹಿಸಿಕೊಂಡರು. **ಲಂಗಾಲ್ ಪತ್ರಿಕೆ**(ನಂತರ ಅದು **ಗಣಬಾಣಿ** ಹೆಸರಿಗೆ ಬದಲಾಯಿತು)ಯ ಸಂಪಾದಕತ್ವವನ್ನೂ ವಹಿಸಿಕೊಂಡರು; ಅದರಲ್ಲಿ ಮಾರ್ಕ್ಸ್‌ವಾದಿ ತತ್ವದ ಸಮಸ್ಯೆಗಳು, ಅಂತರ್ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿ ಮತ್ತು ಕ್ರಾಂತಿಕಾರಿ ಕಾರ್ಮಿಕ ವರ್ಗದ ಚಳುವಳಿಯ ಬಗ್ಗೆ ಚರ್ಚೆ ಮಾಡಲು ಹೆಚ್ಚಿನ ಮಹತ್ವ ನೀಡಿದರು.

ಮೇ 1927 ರಲ್ಲಿ ಬೊಂಬಾಯಿಯಲ್ಲಿ ನಡೆದ ಕಮ್ಯುನಿಸ್ಟರ ಸಭೆಯಲ್ಲಿ ಮುಜಾಫರ್ ಅಹಮದ್ ಭಾಗವಹಿಸಿದರು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಯ್ಕೆಯಾದರು. ಅವರು ಕಾನ್ಪುರದಲ್ಲಿ ಮಾರ್ಚ್ 1927 ರಲ್ಲಿ ನಡೆದ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎಐಟಿಯುಸಿ) ಸಮ್ಮೇಳನದಲ್ಲಿಯೂ ಭಾಗವಹಿಸಿದರು ಮತ್ತು ಎಐಟಿಯುಸಿಯ ಉಪಾಧ್ಯಕ್ಷರಾಗಿ ಚುನಾಯಿತರಾದರು. ಬಂಗಾಳ ಕಾರ್ಮಿಕರ ಮತ್ತು ರೈತರ ಪಕ್ಷ(1928)ದ ಮೂರನೇ ಸಮ್ಮೇಳನದಲ್ಲಿ ಅವರು ಅದರ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟರು. ಜನವರಿ 1929 ರಲ್ಲಿ ಕಮ್ಯುನಿಸ್ಟರ ಗುಪ್ತ ಸಭೆಯೊಂದು ಕಲ್ಕತ್ತಾದಲ್ಲಿ ನಡೆದು ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಆರನೇ ಮಹಾಧಿವೇಶನದ ನಿರ್ಣಯಗಳು ಮತ್ತು ತೀರ್ಮಾನಗಳ ಕುರಿತು ಚರ್ಚಿಸಿತು. ಆ ಸಭೆಯ ಮುಂದಾಳತ್ವ ವಹಿಸಿದವರಲ್ಲಿ ಮುಜಾಫರ್ ಅಹಮದ್ ಅವರೂ ಒಬ್ಬರು.

ಮೀರತ್ ಪಿತೂರಿ ಪ್ರಕರಣದಲ್ಲಿ ಮುಜಾಫರ್ ಅಹಮದ್ ಅವರು ಪ್ರಮುಖ ಆರೋಪಿಯಾಗಿದ್ದರು. ಅವರು ತಮ್ಮ ಜೈಲುವಾಸವನ್ನು ಉತ್ತರಪ್ರದೇಶದ ನೈನಿ ಸೆಂಟ್ರಲ್ ಜೈಲಿನಲ್ಲಿ ಮತ್ತು ನಂತರ ಡಾರ್ಜಿಲಿಂಗ್, ಬರ್ದ್ವಾನ್ ಮತ್ತು ಫರೀದ್‌ಪುರ್ ಜೇಲುಗಳಲ್ಲಿ ಏಕಾಂತ ಜೈಲುವಾಸ ಅನುಭವಿಸಿದರು. ಜೈಲಿನೊಳಗಡೆ ಅವರು ಎರಡು ಬಾರಿ ಉಪವಾಸ ಮುಷ್ಕರ ಮಾಡಿ ಎಲ್ಲಾ ರಾಜಕೀಯ ಖೈದಿಗಳಿಗೆ ದೊರೆಯುವ ಸುದ್ದಿಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಪತ್ರ ಬರೆಯುವ ಹಕ್ಕುಗಳನ್ನು ಪಡೆದರು. ಜೈಲು ಶಿಕ್ಷೆ ಮುಗಿದಮೇಲೆ ಫರೀದ್‌ಪುರ ಜೈಲಿನಿಂದ ಅವರು ಬಿಡುಗಡೆ ಪಡೆದರು. ಜೈಲಿನಿಂದ ಬಿಡುಗಡೆಯಾದ ಮೇಲೆ ತಮ್ಮ ಹುಟ್ಟೂರಾದ ಸಂದ್ವೀಪ್‌ನಲ್ಲಿ ಸ್ಥಾನಬದ್ಧತೆಗೆ ಒಳಗಾಗಿ ಬಂಧಿಸಲ್ಪಟ್ಟರು. ಆನಂತರ, ಮಿಡ್ನಾಪುರ್ ಜಿಲ್ಲೆಯಲ್ಲಿ ಸ್ಥಾನಬದ್ಧತೆಯಲ್ಲಿದ್ದು ಅಂತಿಮವಾಗಿ ಜೂನ್ 24, 1936 ರಲ್ಲಿ ಬಿಡುಗಡೆ ಪಡೆದರು.

ಬಿಡುಗಡೆಯಾದ ನಂತರ ಅವರು ಕಿಸಾನ್ ಸಭಾ ಬೆಳೆಸುವತ್ತ ವಿಶೇಷ ಗಮನ ನೀಡಿದರು. ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕಟ್ಟಿಬೆಳೆಸಲು ಮುತುವರ್ಜಿ ವಹಿಸಿದರು. ಎಐಕೆಎಸ್ ಮೊದಲ ಸಮ್ಮೇಳನದಲ್ಲಿ ಅವರು ಅದರ ಉಪಾಧ್ಯಕ್ಷರಾಗಿ ಆಯ್ಕೆಯಾದರು. 1936 ರಲ್ಲಿ ನೂರಾರು ಸಂಗಾತಿಗಳು ಬಂಗಾಳದ ಜೈಲಿನಿಂದ ಹೊರ ಬಂದಮೇಲೆ ಅವರೆಲ್ಲರ ಜತೆ ಸಂಪರ್ಕ ಬೆಳೆಸಿ ಜಿಲ್ಲೆಗಳಲ್ಲಿ ಪಕ್ಷ ಕಟ್ಟುವ ನಿರ್ದಿಷ್ಟ ಕೆಲಸವನ್ನು ಅವರಿಗೆ ನೀಡಿದರು. 1937 ರಲ್ಲಿ, ರಾಜಕೀಯ ಖೈದಿಗಳ ಬಿಡುಗಡೆಗಾಗಿ ಮತ್ತು ಅಂಡಮಾನಿನಲ್ಲಿ ಬಂಧಿತರಾಗಿದ್ದ ರಾಷ್ಟ್ರೀಯ ಕ್ರಾಂತಿಕಾರಿಗಳನ್ನು ತಾಯ್ನಾಡಿಗೆ ಕರೆತರುವ ಚಳುವಳಿಯಲ್ಲಿ ಮುಜಾಫರ್ ಪಾಲ್ಗೊಂಡಿದ್ದರು. 1937 ರಿಂದ 1943 ರವರೆಗೆ ದೇಶಾದ್ಯಂತ ಪಕ್ಷ ಕಟ್ಟಲು ಶ್ರಮಿಸಿದರು. ಭಾರತದಲ್ಲಿ ಮಾತ್ರವೇ ಅಲ್ಲ, ನೆರೆಹೊರೆಯ ದೇಶಗಳಾದ ನೇಪಾಳ ಮತ್ತು ಬರ್ಮಾಗಳಲ್ಲಿಯೂ ಕಮ್ಯುನಿಸ್ಟ್ ಪಕ್ಷ ಕಟ್ಟಿಬೆಳೆಸಲು ಅವರು ವಿಶೇಷ ಪ್ರಯತ್ನಗಳನ್ನು ಮಾಡಿದರು.

ಸ್ವಾತಂತ್ರ್ಯಾ ನಂತರ, ಕಮ್ಯುನಿಸ್ಟ್ ಪಕ್ಷವನ್ನು ಕಾನೂನುಬಾಹಿರವೆಂದು 1948 ರಲ್ಲಿ ಘೋಷಿಸಲಾಯಿತು ಮತ್ತು ಮುಜಾಫರ್ ಅಹಮದ್ ಅವರನ್ನು ಭಾರತದ ರಕ್ಷಣಾ ಕಾಯಿದೆಯಡಿಯಲ್ಲಿ ಬಂಧಿಸಲಾಯಿತು. 6 ತಿಂಗಳ ನಂತರ ಬಿಡುಗಡೆಯಾದ ಕೂಡಲೇ ಮತ್ತೆ ಪ್ರತಿಬಂಧಕ ಕಾಯಿದೆ ಅಡಿ ಅವರನ್ನು ಬಂಧಿಸಿದರು. ಅಲಿಪುರ್ ಜೈಲಿನಿಂದ ಬಿಡುಗಡೆಯಾದಾಗ ಅವರನ್ನು ಕಲ್ಕತ್ತಾದಿಂದ ಗಡೀಪಾರು ಮಾಡಲಾಯಿತು. ಆಗ ಅವರು ನಬಾದ್ವೀಪದಲ್ಲಿ ಉಳಿದುಕೊಂಡು ಅಲ್ಲಿ ಭೂಗತರಾಗಿಯೇ ಕೆಲಸ ಮಾಡಿದರು. 1940 ರಲ್ಲಿ, ಪಕ್ಷದ ಭೂಗತ ಕಛೇರಿಯಲ್ಲಿ ಕೆಲಸ ಮಾಡುವಾಗ ಅವರ ಸೋದರ ಸಂಬಂಧಿಗಳು ಕರೆಯುವಂತೆ ಕಾಕಾ ಬಾಬು ಎಂದು ಚಿರಪರಿಚಿತರಾದರು. ವಾತ್ಸಲ್ಯದಿಂದ ಮತ್ತು ಗೌರವದಿಂದ ಪಕ್ಷದ ಒಳಗಡೆ ಹಾಗೂ ಹೊರಗಡೆಯೂ ಅವರನ್ನು ಕಾಕಾ ಬಾಬು ಎಂದೇ ಎಲ್ಲರೂ ಕರೆಯುತ್ತಿದ್ದರು.

ಮುಜಾಫರ್ ಅಹಮದ್ ಅವರು ಹೆಚ್ಚು ಆದ್ಯತೆ ನೀಡುತ್ತಿದ್ದ ಎರಡು ಮುಖ್ಯ ಕೆಲಸಗಳು ಯಾವುವು ಎಂದರೆ: ಪುಸ್ತಕಗಳು, ವರ್ತಮಾನ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಸುದ್ದಿಪತ್ರಿಕೆಗಳ ಮೂಲಕ ಮಾರ್ಕ್ಸ್‌ವಾದಿ ಚಿಂತನೆಗಳನ್ನು ಹಾಗೂ ಸಿದ್ಧಾಂತವನ್ನು ಹರಡುವುದು ಮತ್ತು ಜನಸಮುದಾಯದ ಜತೆಯಲ್ಲಿ ಸಾಧ್ಯವಾದಷ್ಟೂ ಅತ್ಯಂತ ಹತ್ತಿರದ ಸಂಪರ್ಕವನ್ನು ಇಟ್ಟುಕೊಳ್ಳುವುದು ಹಾಗೂ ಬಹು ವ್ಯಾಪಕವಾದ ಜನವಿಭಾಗಗಳೊಂದಿಗೆ ಕೆಲಸ ಮಾಡುವುದು. **ಗಣಬಾಣಿ**ಯಲ್ಲಿ ಬರೆಯುತ್ತಾ(1935) ಅವರು ಯುವಜನರಿಗೆ "ಸಂಪತ್ತು, ಜ್ಞಾನ, ಭೂಒಡೆತನಮತ್ತು ಜಾತಿಯ ಕುಲೀನತೆಯನ್ನು ತೊರೆದು ಯುವಜನರು ತಾವು ಬಯಸುವ ಸ್ವಾತಂತ್ರ್ಯ ಸಿಗಬೇಕೆಂದರೆ, ರೈತರು ಮತ್ತು ಕಾರ್ಮಿಕರ ನಡುವೆ ಅವರಲ್ಲಿ ಒಬ್ಬರಾಗಿ ಕೆಲಸ ಮಾಡಬೇಕು"ೆಂದು ಹೀಗೆ ಒತ್ತಾಯ ಮಾಡುತ್ತಿದ್ದರು: "ಕ್ರಾಂತಿಯನ್ನು ಸಾಧ್ಯಗೊಳಿಸುವ ಸಾಮರ್ಥ್ಯ ಹೊಂದಿರುವ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಬೇಕೆಂದರೆ ಅದಕ್ಕೆ ಅಗತ್ಯವಾದ ಮೊದಲ ಷರತ್ತು: ಕಾರ್ಮಿಕರು ಅದರಲ್ಲೂ ಯುವಜನರು ಜನಸಮುದಾಯದ ನಡುವೆ ಸದಾ ಕೆಲಸ ಮಾಡುತ್ತಿರಬೇಕು" ಎಂದು ನಿರಂತರವಾಗಿ ಕಾರ್ಮಿಕರ ಬಳಿ ಹೇಳುತ್ತಿದ್ದರು.

ಪಕ್ಷ ಪ್ರಾರಂಭ ಆದಾಗಿನಿಂದ ನಡೆದ ಪಕ್ಷದ ಮಹಾಧಿವೇಶನಗಳಲ್ಲಿ ಎರಡನ್ನು ಬಿಟ್ಟು ಮುಜಾಫರ್ ಅಹಮದ್ ಅವರು ಎಲ್ಲದರಲ್ಲಿಯೂ ಭಾಗವಹಿಸಿದ್ದರು.

ಪುಟ 14 ನೋಡಿ

ಸರ್ವ ಶ್ರೇಷ್ಠ ಪ್ರಥಮ ಶಿಕ್ಷಕಿ: ಸಾವಿತ್ರಿ ಬಾಯಿ ಫುಲೆ 189 ನೆಯ ಜನ್ಮ ದಿನಾಚರಣೆ

ನಾಗರಾಜ ನಂಜುಂಡಯ್ಯ –
ಗೌಡಗೆರೆ ಮಾಯುಶ್ರೀ



ಜನವರಿ 3, 1831ರಲ್ಲಿ, ಮಹಾರಾಷ್ಟ್ರದ ಒಂದು ಪುಟ್ಟ ಹಳ್ಳಿ ನಯಿಗಾಂವ್, ಇದು ಸತಾರ ಜಿಲ್ಲೆಯ ಖಂಡಾಲ ತಾಲೂಕಿನಲ್ಲಿ ಇದೆ. ಈ ಹಳ್ಳಿಯ ಪ್ರಮುಖರಾದ ಖಾಂಡೋಜಿ ನೇವಸೆ ಪಾಟೀಲರು ವೃತ್ತಿಯಲ್ಲಿ ಇವರು ಕೃಷಿಕರು, ಇವರ ಪತ್ನಿ ಲಕ್ಷ್ಮಿ ಬಾಯಿ, ಈ ದಂಪತಿಗಳ ಮಗಳಾಗಿ ಸಾವಿತ್ರಿ ಬಾಯಿ ಅಂದು ಜನ್ಮ ತಾಳಿದಳು. ಬ್ರಿಟಿಷ್ ಆಳ್ವಕೆಯ ಭಾರತದಲ್ಲಿ ಮಹಿಳೆಯರ ಹಕ್ಕುಗಳಿಗಾಗಿ, ಹೋರಾಡಿದ ಪ್ರಥಮ ಮಹಿಳೆ, ದಲಿತ ಹೆಣ್ಣು ಮಕ್ಕಳಿಗೆ ಶಾಲೆಗಳನ್ನು ತೆರೆದು, ಮೊದಲ ಅಧ್ಯಾಪಕಿಯಾಗಿ ದುಡಿದವರು. ಬಾಲ ವಿಧವೆಯ ರಿಗೆ ಇದ್ದ ಎರಡು ಮಾರ್ಗಗಳಲ್ಲಿ, ಒಂದು ಸತಿಯಾಗಬೇಕು ಇಲ್ಲವೇ ತಲೆ ಬೋಳಿಸಬೇಕು. ಇಂತಹ ಹೆಣ್ಣು ಮಕ್ಕಳಿಗೆ ಮರು ಮದುವೆ ಮಾಡಿಸಿ, ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರುದ್ ಹೊಸ ಕ್ರಾಂತಿಗೆ ಕಿಡಿ ಹಚ್ಚಿದವರು. ಪುರುಷರ ದೌರ್ಜನ್ಯಕ್ಕೆ ಬಲಿಯಾಗಿ ಗರ್ಭವತಿಯರಾದ ಬಾಲಕಿಯರಿಗೆ ಅಂದು, ಆತ್ಮಹತ್ಯೆ ಒಂದೆ ಉಳಿದಿದ್ದ ಮಾರ್ಗ. ಆದರೆ, ಅಂತಹ ಹೆಣ್ಣು ಬಾಲಕಿಯರಿಗೆ, ಸುಸೂತ್ರ ಹೆರಿಗೆ ಮಾಡಿಸಿ, ಆಶ್ರಯ ನೀಡಿ; ಪುರುಷ ಪ್ರಧಾನ ಸಮಾಜಕ್ಕೆ ಸವಾಲು ಹಾಕಿದ ಪ್ರಥಮ ಮಹಿಳೆ ಸಾವಿತ್ರಿ ಬಾಯಿ ಫುಲೆ. ಭಾರತ ಕಂಡ ಅಪ್ರತಿಮೆ ಮಹಿಳೆ ಸಾವಿತ್ರಿ ಬಾಯಿ ಫುಲೆ. ಇಂತಹ ಮಹಿಳೆಯ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುವ ಮೂಲಕ ಅವರ ಆದರ್ಶಮಯ ಜೀವನ ಚರಿತ್ರೆಯನ್ನು ನಮ್ಮ ಇಂದಿನ ಸಮಾಜಕ್ಕೆ ತಿಳಿಸಬೇಕಾಗಿದೆ.

ಅದು ಹತ್ತೊಂಬತ್ತನೆಯ ಶತಮಾನದ ಆರಂಭದ ಕಾಲ ಘಟ್ಟ. ಬ್ರಿಟಿಷ್ ಸಾಮ್ರಾಜ್ಯ ಶಾಹಿ ಅಧಿಪತ್ಯದಲ್ಲಿದ್ದ ನಮ್ಮ ಭಾರತ ದೇಶದ ಸಾಮಾಜಿಕ ಸ್ಥಿತಿಗತಿ ಶೋಚನೀಯವಾಗಿತ್ತು. ವಿವಿಧ ಮೂಢನಂಬಿಕೆಗಳು, ಕಂದಾಚಾರಗಳು ಜನಜೀವನದ ಜೊತೆ ಹಾಸುಹೊಕ್ಕಾಗಿದ್ದವು. ಜಾತಿ ತಾರತಮ್ಯ, ಅಸ್ಪ್ರಶ್ಯತಾ ಆಚರಣೆಗಳು, ಲಿಂಗ ತಾರತಮ್ಯ ಮತ್ತು ದಮನ ಮತ್ತು ಶೋಷಣೆಗಳು ಆಳವಾಗಿ ಬೇರುಬಿಟ್ಟಿದ್ದವು. ಇದರಿಂದ ಕೆಳವರ್ಗದ ಜನರು, ಪ್ರಮುಖವಾಗಿ, ದಲಿತರು ವಿಪರೀತ ಅವಮಾನಕ್ಕೆ ತುತ್ತಾಗುತ್ತಿದ್ದರು.

ಮೂಢನಂಬಿಕೆಯ ಹೆಸರಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯವನ್ನೇ ಕಿತ್ತುಕೊಳ್ಳಲಾಗಿತ್ತು. ಅಪ್ರಾಪ್ತ ವಯಸ್ಸಿನಲ್ಲಿಯೇ ಮದುವೆ ಮಾಡುತ್ತಿದರು. ಶಿಕ್ಷಣವೆಂಬುದು ಹೆಣ್ಣು ಮಕ್ಕಳಿಗೆ ಮರೀಚಿಕೆಯಾಗಿತ್ತು. ಹೀಗಾಗಿ ಬಹುಪಾಲು ಹೆಣ್ಣು ಮಕ್ಕಳು ತಮ್ಮ ಸುತ್ತ ಮುತ್ತ ನಡೆಯುವ ವಿದ್ಯಮಾನಗಳ ಕುರಿತು ತಿಳುವಳಿಕೆ ಹೊಂದುವುದು ಸಾಧ್ಯವಾಗುತ್ತಿರಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಜಾತಿ ಆಧಾರಿತ ಮತ್ತು ಲಿಂಗಾಧರಿತ ಸಂಸ್ಕೃತಿಯನ್ನು ವಿರೋಧಿಸುವ ಜನಪರ ಹೋರಾಟವನ್ನು ಪ್ರಾರಂಭಿಸಿದವರೇ ಸಾವಿತ್ರಿ ಬಾಯಿ ಫುಲೆ ಮತ್ತು ಅವರ ಪತಿ ಜ್ಯೋತಿಬಾ ಫುಲೆ. ಬಾಲ್ಯದಿಂದಲೂ ಸಾವಿತ್ರಿ ಬಹಳ ಚೂಟಿ ಹುಡುಗಿ, ಮಹಾ ಧೈರ್ಯವಂತೆ, ಯಾರಾದರೂ ತಪ್ಪು ಕೆಲಸ ಮಾಡುತ್ತಿದರೆ ತಕ್ಷಣ ಅವರನ್ನು ತಡೆಯುವ ಸ್ವಭಾವ.



ಬೆಂಗಳೂರು ಪೂರ್ವ ವಲಯದಲ್ಲಿ, ಸಾವಿತ್ರಿ ಬಾಯಿ ಪುಲೆ ಯವರ ಜನ್ಮ ದಿನಾಚರಣೆ ಅಂಗವಾಗಿ, ಡಿಎಚ್ಎಸ್ ನ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳಹಳ್ಳಿ ಉದ್ಘಾಟಿಸಿದರು, ನಾಗರಾಜ ನಂಜುಂಡಯ್ಯ, ಎನ್. ರಾಜಣ್ಣ, ಶರಣಪ್ಪ ಟಿ ವಾಲಿ, ಶಿಕ್ಷಕಿ ಶಾಂತಮ್ಮ ಭಾಗವಹಿಸಿ, ಕಾರ್ಯಕ್ರಮ ವನ್ನು ಉದ್ದೇಶಿಸಿ ಮಾತನಾಡಿದರು.

ಒಮ್ಮೆ ಬಡ ಹುಡುಗನ ಕೈಯಲ್ಲಿದ್ದ ಹೂ ಅನ್ನು, ಪುಂಡನ್ನೊಬ್ಬ ಕಿತ್ತುಕೊಂಡಾಗ, ಅದನ್ನು ನೋಡಿದ ಸಾವಿತ್ರಿ ಸಮ್ಮನೆ ಇರಲಾಗದೆ, ಹೂ ಕಿತ್ತುಕೊಂಡ ಪುಂಡನನ್ನು ಹಿಡಿದು, ದಬಾಯಿಸಿ, ಹೂ ವನ್ನು ಮತ್ತೆ ಆ ಹುಡಗನಿಗೆ ವಾಪಸ್ಸು ಕೊಡಿಸಿದ್ದಳು. ಮತ್ತೊಮ್ಮೆ ಒಂದು ದಿನ ತೋಟದಲ್ಲಿ ಹಾವೊಂದು ಮರವನ್ನು ಹತ್ತಿ ಅಲ್ಲಿರುವ ಗೂಡಿನಲ್ಲಿದ್ದ ಹಕ್ಕಿಯ ಮೊಟ್ಟೆಗಳನ್ನು ತಿನ್ನಲು ಮೆಲ್ಲಗೆ ತೆವಳಿಕೊಂಡು ಸಾಗುತ್ತಿತ್ತು, ಎಳೆ ಮನಸ್ಸಿನ ಸಾವಿತ್ರಿಗೆ ದುಃಖ ಉಂಟಾಗಿ, ಪಾಪ ಹಕ್ಕಿಗಳು ತಮ್ಮ ಮೊಟ್ಟೆಗಳನ್ನು ಕಳೆದುಕೊಂಡರೆ, ಅವುಗಳು ಎಷ್ಟು ದುಃಖ ಪಡುತ್ತವೆ ಎಂಬ ಕರುಣೆ ತುಂಬಿದ ಸಾವಿತ್ರಿ, ತಕ್ಷಣ ಕೋಲು ಹಿಡಿದು ಆ ಹಾವನ್ನು ಓಡಿಸಿದಳು.

ಹೀಗೆ ಅವಳು ಚುರಾಕಾಗಿ ಮಾತ್ರವಿರದೆ, ಕರುಣೆ, ನೋವನ್ನು ಗ್ರಹಿಸಬಲ್ಲ ಒಬ್ಬ ಮಾನವತೆಯುಳ್ಳ ಹುಡುಗಿಯಾಗಿ ಬೆಳೆದಳು. ಪರಿಸ್ಥಿತಿಯನ್ನು ಅರಿತಳು, ಬಡತನದ ಬೇಗೆಯಿಂದ ಬಳಲುತ್ತಿರುವ ಮಕ್ಕಳ ಕಷ್ಟಗಳನ್ನು ಹಾಗೂ ಶ್ರೀಮಂತ ಮಕ್ಕಳು ಅನುಭವಿಸುವ ಸುಖವನ್ನು ಅದರ ವ್ಯತ್ಯಾಸಗಳನ್ನು ನೋಡಿದಳು. ಶ್ರೀಮಂತ ಮಕ್ಕಳು ಮಾತ್ರ ಓದಲು ಪಾಠ ಶಾಲೆಗಳಿಗೆ ಹೋಗುತ್ತಾರೆ, ಆದರೆ, ಬಡವರ ಮಕ್ಕಳು ಶಾಲೆಗಳಿಗೆ ಹೋಗುವುದಿಲ್ಲ, ಹೆಣ್ಣು ಮಕ್ಕಳಂತು ಮನೆಬಿಟ್ಟು ಆಚೆಯ ಬರುವಂತಿಲ್ಲ, ಅಂತಹ ಕಟ್ಟು ಪಾಡುಗಳು, ಹೆಣ್ಣು ಮಕ್ಕಳಲ್ಲವೇ ಇವರಿಗೆ ವಿದ್ಯೆ ಏಕೆ? ಗೃಹ ಕೆಲಸಗಳನ್ನು ಮಾಡಿಕೊಂಡು ತೆಪ್ಪಗೆ ಮನೆಯಲ್ಲಿ ಇದ್ದರೆ ಸಾಕು ಎನ್ನುವ ಕಾಲ ಅದಾಗಿತ್ತು. ಹೆಣ್ಣು ಮಕ್ಕಳು ಹೇಗಿದ್ದರೂ ಮುಂದೆ ಮದುವೆಯಾಗಿ ಮನೆ, ಸಂಸಾರ, ಮಕ್ಕಳುಗಳನ್ನು ಹೆರುವುದು, ಅವರನ್ನು ಸಾಕುವುದು. ಇಷ್ಟಕ್ಕೆ ಹೆಣ್ಣು ಮಕ್ಕಳು ಸೀಮಿತವಾಗಿದ್ದರು.

ಹೀಗಾಗಿ, ಆ ಕಾಲದ ರೂಢಿಯಂತೆ, ಸಾವಿತ್ರಿಗೆ ಒಂಭತ್ತನೆಯ ವರ್ಷಕ್ಕೆ, ಹದಿಮೂರು ವರ್ಷದ ಜ್ಯೋತಿ ಬಾ ಫುಲೆ ಯವರಿಗೆ ವಿವಾಹವನ್ನು 1840 ರಲ್ಲಿ ಮಾಡಿದರು. ಮದುವೆಯಾದ ಸಾವಿತ್ರಿ ಬಾಯಿ ತನಗೆ ಮಿಶನರಿ ಒಬ್ಬರು ನೀಡಿದ್ದ ಪುಸ್ತಕವನ್ನು ಹಿಡಿದು ಗಂಡನ ಮನೆಗೆ ಬಂದಳು. ಆ ಪುಸ್ತಕವೇ ಅವಳನ್ನು ವಿದ್ಯಾಜ್ಯೋತಿ ಮಾಡಲು ಸಹಕರಿಸಿತು. ಗಂಡನ ಮನೆಗೆ ಬಂದಾಗ, ಜ್ಯೋತಿ ಬಾಫುಲೆ ಸಾವಿತ್ರಿಯ ಓದಬೇಕೆಂಬ ಆಕಾಂಕ್ಷೆಗಳನ್ನು ಪೂರೈಸಲು ಸಹಕರಿಸಿದರು. ಸಾವಿತ್ರಿ ಯ ಎಲ್ಲಾ ಹೋರಾಟಗಳಿಗೆ, ಜ್ಯೋತಿ ಬಾ ಫುಲೆಯವರ ಸಂಪೂರ್ಣ ಬೆಂಬಲವಿತ್ತು. ಸಾವಿತ್ರಿ ಯವರ ಅತ್ತೆ–ಮಾವನವರ ಸಹಕಾರವು ಇತ್ತು. ಇಡೀ ಕುಟುಂಬ ದೀನ ದಲಿತ ಬಡವರ ಅಭ್ಯುದಯಕ್ಕಾಗಿ ಬದ್ದತೆ ಮತ್ತು ಅಪಾರ ನಿಷ್ಟೆ ಹೊಂದಿದ್ದರು.

ತನ್ನ ಸುತ್ತ ಮುತ್ತಲಿನ ಪರಿಸರದಲ್ಲಿ ವಿವಿಧ ಸಾಮಾಜಿಕ ಪದ್ದತಿಗಳು, ಮೂಢನಂಬಿಕೆಗಳು, ರೂಢಿಯಲ್ಲಿದ್ದ ಕಾಲವದು. ದಲಿತರು, ಬಡವರು ಮತ್ತು ಮಹಿಳೆಯರು ಅಪಾರ ತೊಂದರೆಗಳನ್ನು ಅನುಭವಿಸುತ್ತಿರುವುದು ಅವರ ಗಮನವನ್ನು ಸೆಳೆಯಿತು. ಈ ಹಿನ್ನೆಲೆಯಲ್ಲಿ ದೀನ ದಲಿತರ ಸೇವೆ ಮಾಡುವ ಕೆಲಸದಲ್ಲಿ ತೊಡಗಿಸಿ ಕೊಂಡರು.

ಸಾವಿತ್ರಿ ಬಾಯಿ ಶಿಕ್ಷಣ ಪಡೆಯುತ್ತಿದ್ದಾಗ, ದಲಿತ ಹುಡುಗರಿಗೆ ಅಥವಾ ಹುಡುಗಿಯರಿಗೆ ಶಾಲೆಯಲ್ಲಿ ಪ್ರವೇಶ ನೀಡುತ್ತಿರಲಿಲ್ಲ. ಅಸ್ಪ್ರಶ್ಯತೆ ತಾಂಡವವಾಡುತ್ತಿದ್ದ ಕಾಲವದು. ದಲಿತ ಮಕ್ಕಳು ಶಾಲೆಗೆ ಬಂದರೆ; ಮೇಲ್ಜಾತಿಯ ಮಕ್ಕಳು ಶಾಲೆಯನ್ನೇ ಬಹಿಷ್ಕರಿಸುತ್ತಿದ್ದರು. ಈಗಲೂ ಬಿಸಿಯೂಟ ಕೊಡುವ ಶಾಲೆಗಳಲ್ಲಿ, ದಲಿತ ಮಹಿಳೆಯರು ಮಾಡಿದ ಅಡುಗೆಯನ್ನು ಮೇಲ್ಜಾತಿಯ ಮಕ್ಕಳು ತಿನ್ನದೆ, ತಿರಸ್ಕಾರ ಮಾಡುವುದನ್ನು ನೋಡುತ್ತಿದ್ದೇವೆ. ಸ್ವಾತಂತ್ರ್ಯ ಬಂದು 72 ವರ್ಷ ಕಳೆದರು, ದಲಿತರ ಸ್ಥಿತಿಗತಿಗಳಲ್ಲಿ ಅವರು ಅನುಭವಿಸುವ ಅಸ್ಪ್ರಶ್ಯತೆ ನೋವುಗಳಿಗೆ ವ್ಯತ್ಯಾಸವೇನು ಆಗಿಲ್ಲದಿರುವುದು ಈ ದೇಶದ ವಿಪರ್ಯಾಸವೆಂದರೆ ತಪ್ಪಾಗಲಾರದು..

1948 ರಲ್ಲಿ ದಲಿತ ಮಕ್ಕಳಿಗಾಗಿ ಶಾಲೆಯನ್ನು ತೆರದು, ಅವರಿಗೆ ಶಿಕ್ಷಣವನ್ನು ನೀಡಿದ ಪ್ರಥಮ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆ ಎಂಬ ಹೆಗ್ಗಳಿಕೆಗೆ ಇಂದಿಗೂ ಪಾತ್ರ ವಾಗಿದ್ದಾರೆ. ವಿಧವೆಯರ ಸೇವೆ, ಅಸ್ಪ್ರಶ್ಯತೆ ನಿರ್ಮೂಲನೆ ಕಾರ್ಯದಲ್ಲಿ ತೊಡಗಿಸಿ ಕೊಂಡ, ಸರ್ವ ಶ್ರೇಷ್ಠ ಮಹಿಳಾ ಶಿಕ್ಷಕಿಯಾಗಿ, ಸಮಾಜ ಸೇವಕಿಯಾಗಿ ಭಾರತ ದೇಶದಲ್ಲಿ ಬದುಕಿ ಬಾಳಿದ, ಅಪ್ರತಿಮ ತಾಯಿ ಈ ಸಾವಿತ್ರಿ ಬಾಯಿ ಫುಲೆ.

ಇದರ ಅಂಗವಾಗಿ, ದಲಿತ ಹಕ್ಕು ಗಳ ಸಮಿತಿ, ಇಂದಿನ ಶಾಲಾ ಬಾಲಕಿಯರಿಗೆ, ವಿದ್ಯಾರ್ಥಿಗಳಿಗೆ ಮತ್ತು ಜನಸಾಮಾನ್ಯರಿಗೆ, ಸಾವಿತ್ರಿ ಬಾಯಿ ಫುಲೆಯವರ ಕುರಿತು ಜಾಗೃತಿ ಮೂಡಿಸುವ ಭಾಗವಾಗಿ, ರಾಜ್ಯದ ಹಲವು ಜಿಲ್ಲೆಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಅವುಗಳ ಸಂಕ್ಷಿಪ್ತ ವಿವರಣೆಯನ್ನು ಇಲ್ಲಿ ನೀಡಲಾಗಿದೆ.



ಮದ್ದೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ, ಗೋಪಾಲಕೃಷ್ಣ ಹರಳಹಳ್ಳಿ ಮತ್ತು ಮಂಡ್ಯದ ಕೃಷ್ಣರವರು ಭಾಗವಹಿಸಿದ್ದರು.

ಪ್ರಜಾಪ್ರಭುತ್ವವಾದೀ ಹೋರಾಟದ ಮುಂಚೂಣಿಯಲ್ಲಿ ವಿದ್ಯಾರ್ಥಿಗಳು



ಅವೈಚಾರಿಕತೆ ಮತ್ತು ಕಾರ್ಪೋರೇಟ್-ಹಣಕಾಸು ಕುಳಗಳ ನಡುವೆ ಏರ್ಪಟ್ಟಿರುವ ಮೈತ್ರಿ ಕೂಟವು ಬಿಜೆಪಿ ಸರ್ಕಾರಕ್ಕೆ ಬಲ ಒದಗಿಸುತ್ತಿರುವುದನ್ನು ನಾವು ಕಾಣುತ್ತೇವೆ. ವಾಸ್ತವವಾಗಿ, ಇಂತಹ ಮೈತ್ರಿ ಕೂಟಗಳೇ ಎಲ್ಲ ಫ್ಯಾಸಿಸ್ಟ್ ತೆರನ ಸರ್ಕಾರಗಳಿಗೂ ಬಲ ತುಂಬುವ ಶಕ್ತಿಗಳು. ಇಂತಹ ಒಂದು ಸರ್ಕಾರವನ್ನು ವರ್ಗ ಹೋರಾಟದ ಮೂಲಕ ಪ್ರತಿರೋಧಿಸುವ ಕಾರ್ಯಭಾರವು ಕಾರ್ಮಿಕರು, ರೈತರು, ಸಣ್ಣ ಉತ್ಪಾದಕರು, ಕೃಷಿ ಕಾರ್ಮಿಕರ ಹೆಗಲ ಮೇಲಿದ್ದರೂ ಸಹ, ವೈಚಾರಿಕ ಸಮುದಾಯವೂ ಒಟ್ಟಾಗಿ ನಿಂತು ಈ ಅವೈಚಾರಿಕತೆಯನ್ನು ಎದುರಿಸಬೇಕಿದೆ. ಯೌವನದ ಹೊಸ್ತಿಲಲ್ಲಿರುವ ವಿದ್ಯಾರ್ಥಿಗಳು ಅತಿ ಹೆಚ್ಚು ಹುರುಪುಳ್ಳವರೂ, ಉತ್ಸಾಹಿಗಳೂ ಮತ್ತು ಶಕ್ತಿಯುತ ಕ್ರಿಯಾಶೀಲರೂ ಆಗಿರುವುದರಿಂದ, ಹಿಂದುತ್ವದ ಅವೈಚಾರಿಕತೆಯ ವಿರುದ್ಧ ಶಕ್ತಿಶಾಲಿಯಾಗಿ ಹೋರಾಡಬಲ್ಲರು. ಇಂತಹ ಶಕ್ತಿಶಾಲಿ ಎದುರಾಳಿಯನ್ನು ನಿರಾಯಧರನ್ನಾಗಿಸುವುದೇ ಭಾಜಪದ ಗುರಿ. ಅದರ ಪಾಶವೀ ಹಲ್ಲೆಗೂ ಅಂಜದೆ,ಅಳುಕದೆ ವಿದ್ಯಾರ್ಥಿಗಳು, ಹೋರಾಡುತ್ತಿರುವುದು ಮನಸ್ಸನ್ನು ಉಲ್ಲಸಿತಗೊಳಿಸಿರುವ ಸಂಗತಿ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್



ವಿದ್ಯಾರ್ಥಿಗಳ ಉದ್ದೇಶ-ಕರ್ತವ್ಯ-ಪಾತ್ರಗಳ ಕುರಿತಂತೆ ಒಬ್ಬ 'ವಿದ್ಯಾರ್ಥಿ'ಯ ಪರಿಕಲ್ಪನೆ, ಮತ್ತು, ಅದೇ ರೀತಿಯಲ್ಲಿ, ವಿಶ್ವವಿದ್ಯಾಲಯಗಳ ಉದ್ದೇಶ-ಕರ್ತವ್ಯ-ಪಾತ್ರಗಳ ಕುರಿತಂತೆ ಒಂದು 'ವಿಶ್ವವಿದ್ಯಾಲಯ'ದ ಪರಿಕಲ್ಪನೆ, ಈ ಪರಿಕಲ್ಪನೆಗಳ ಬಗ್ಗೆ ದೇಶದ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳಲ್ಲಿ ಈಗ ಒಂದು ವೈಚಾರಿಕ ಸಂಘರ್ಷ ನಡೆಯುತ್ತಿದೆ. ಭಾಜಪ ಸರ್ಕಾರವು, ವಿದ್ಯಾರ್ಥಿಗಳು ಶಿಕ್ಷಣವನ್ನು ಕೊಳ್ಳುವವರಾಗಿ, ಸದಾ ಸ್ವಹಿತದಲ್ಲೇ ಮುಳುಗಿ ಸ್ವಾರ್ಥಿಗಳಾಗಿಯೇ ಉಳಿದು, ಉದ್ಯೋಗ ಮಾರುಕಟ್ಟೆಯಲ್ಲಿ ತಮ್ಮ ಶ್ರಮಶಕ್ತಿಯನ್ನು ಮಾರುವವರಾಗಿ ಇರಬೇಕೆಂದು ಬಯಸುತ್ತದೆ. ಭಾಜಪದ ಈ ಪರಿಕಲ್ಪನೆಗೆ ಪರ್ಯಾಯವಾಗಿ ಇನ್ನೊಂದು ಪರಿಕಲ್ಪನೆಯೂ ಇದೆ. ಈ ಪರಿಕಲ್ಪನೆಯು, ವಿದ್ಯಾರ್ಥಿಯು ಒಬ್ಬ ಸಾಮಾಜಿಕ ಸಂವೇದನೆಯುಳ್ಳ ವ್ಯಕ್ತಿಯಾಗಿ ಮತ್ತು ನಮ್ಮ ಸಂವಿಧಾನದ ಪ್ರಜಾಸತ್ತಾತ್ಮಕ, ಧರ್ಮನಿರಪೇಕ್ಷ ಮತ್ತು ಮನುಷ್ಯ ಮನುಷ್ಯರ ನಡುವೆ ಸಮಾನತೆಯ ಮೌಲ್ಯಗಳ ಭಾರತವನ್ನು ಕಟ್ಟುವ ಕೈಂಕರ್ಯಕ್ಕಾಗಿ ಶಿಕ್ಷಣವನ್ನು ಬಳಸಿಕೊಳ್ಳುವ ವ್ಯಕ್ತಿಯಾಗಿ; ಮತ್ತು ಅದರ ಜೊತೆಯಲ್ಲಿ ಸರ್ಕಾರದ ನೀತಿಗಳೂ ಸೇರಿದಂತೆ ಎಲ್ಲ ಸಾಮಾಜಿಕ ವಿಷಯಗಳನ್ನೂ ವಿಮರ್ಶಾತ್ಮಕವಾಗಿ ಪರಿಶೀಲನೆಗೊಳಪಡಿಸುವ ವ್ಯಕ್ತಿಯಾಗಿ ಹೊರ ಹೊಮ್ಮಬೇಕು, ಎಂದು ಬಯಸುತ್ತದೆ. ಅದೇ ರೀತಿಯಲ್ಲಿ, 'ವಿಶ್ವವಿದ್ಯಾಲಯ'ದ ಬಗ್ಗೆಯೂ ಬೇರೆ ಬೇರೆ ಪರಿಕಲ್ಪನೆಗಳಿವೆ: ವಿಶ್ವವಿದ್ಯಾಲಯವು ಕೌಶಲ್ಯಗಳನ್ನು (ಶಿಕ್ಷಣ ಮತ್ತು ಕೌಶಲ್ಯಗಳು ಒಂದೇ ಅಲ್ಲ, ಶಿಕ್ಷಣವೇ ಬೇರೆ; ಕೌಶಲ್ಯವೇ ಬೇರೆ) ಮಾರುವ ಒಂದು ತಾಣವಾಗಿ ನೋಡುವ; ಅಥವಾ, ಪರ್ಯಾಯವಾಗಿ, ವಿಶ್ವವಿದ್ಯಾಲಯವು, ಕಲಿಕೆಯ ಜೊತೆಗೆ ನಮ್ಮ ಕಾಲದ ಜ್ವಲಂತ ಸಮಸ್ಯೆಗಳೊಂದಿಗೆ ವಿಮರ್ಶಾತ್ಮಕವಾಗಿ ಸಂವಾದಗಳಲ್ಲಿ ತೊಡಗುವ ತಾಣವಾಗಿ ನೋಡುವ ಪರಿಕಲ್ಪನೆಯೂ ಇದೆ. ವಿದ್ಯಾರ್ಥಿಗಳು, ಅದರಲ್ಲೂ ವಿಶೇಷವಾಗಿ, ನಮ್ಮ ದೇಶದ ಅಗ್ರ ಮಾನ್ಯ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಈ ಎರಡನೆಯ ಪರಿಕಲ್ಪನೆಗೆ ಸೇರುತ್ತಾರೆ – ನಮ್ಮ ಕಾಲದ ಜ್ವಲಂತ ಸಮಸ್ಯೆಗಳ ಬಗ್ಗೆ ಅವರು ತಮ್ಮ ಸಂವೇದನೆಯನ್ನು ವ್ಯಕ್ತಪಡಿಸಿದ್ದಾರೆ.

ಪೌರತ್ವ ಕಾಯ್ದೆಯ ತಿದ್ದುಪಡಿಯ ಬಗ್ಗೆ ಇತ್ತೀಚೆಗೆ ಭುಗಿಲೆದ್ದಿರುವ ಪ್ರತಿಭಟನೆಗಳಲ್ಲಿ ವಿದ್ಯಾರ್ಥಿಗಳು ಬಲು ದೊಡ್ಡ ಪಾತ್ರ ವಹಿಸಿದ್ದಾರೆ. ಅದಕ್ಕೂ ಹಿಂದೆ, ಕಳೆದ ಕೆಲವು ವರ್ಷಗಳಲ್ಲಿ, ಅನೇಕ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ವೈಚಾರಿಕ ಸಂಘರ್ಷ ವ್ಯಕ್ತಗೊಂಡಿದೆ: ಜೆಎನ್‌ಯು, ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ, ಪುಣೆಯ ಫಿಲಂ & ಟಿ ವಿ ಟೆಕ್ನಾಲಜಿ ಇನ್‌ಸ್ಟಿಟೂಟ್; ಬರೋಡಾದ ಸಯ್ಯಾಜಿ ರಾವ್ ವಿಶ್ವವಿದ್ಯಾಲಯದ ಲಲಿತಕಲಾ ವಿಭಾಗ; ಇಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಸಂವಿಧಾನದ ಮೌಲ್ಯಗಳನ್ನು ಆಳುವವರು ಪುರಸ್ಕರಿಸದ ಮತ್ತು ತಮ್ಮ ಹಕ್ಕುಗಳಿಗೆ ಚ್ಯುತಿಯಾದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆಗಳಲ್ಲಿ ತೊಡಗಿದ್ದರು. ಅದರಲ್ಲಿ ಆಶ್ಚರ್ಯವೇನಿಲ್ಲ. ಆದರೆ, ವಿದ್ಯಾರ್ಥಿಗಳನ್ನು ಕೇವಲ ಕೌಶಲ್ಯಗಳನ್ನು ಕೊಳ್ಳುವ ಒಂದು ನಿಷ್ಕ್ರಿಯ ಸಮೂಹವಾಗಿ ಪರಿವರ್ತಿಸುವ ಪ್ರಯತ್ನದಲ್ಲಿ, ಭಾಜಪ ಸರ್ಕಾರವು ಯಾವ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಸಾಮಾಜಿಕವಾಗಿ ಸಂವೇದನಾಶೀಲತೆಗೆ ಹೆಸರಾಗಿದ್ದರೋ ಅಂತಹ ಈ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಮೇಲೆ ನಿಖರ ಗುರಿ ಇಟ್ಟು ದಾಳಿ ಮಾಡಿತು. ನಿಜವಾಗಿಯೂ, ಈ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಸಾಮಾಜಿಕ ಸಂವೇದನಾಶೀಲತೆಯ ಕೊಡುಗೆಯಿಂದಲೇ ಈ ವಿಶ್ವವಿದ್ಯಾಲಯಗಳು ಶ್ರೇಷ್ಠ ವಿದ್ಯಾ ಸಂಸ್ಥೆಗಳ ಎತ್ತರಕ್ಕೆ ಬೆಳೆದವು.

ಕ್ಯಾಂಪಸ್‌ಗಳು ರಾಜಕೀಯದಿಂದ ದೂರವಿರಬೇಕೆ?

ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳನ್ನು ರಾಜಕೀಯದಿಂದ ದೂರ ಇರುವಂತೆ ಮಾಡುವ ಸಲುವಾಗಿ ಸರ್ಕಾರವು ಅನೇಕ ವಿಧಾನಗಳನ್ನು ಅನುಸರಿಸಿದೆ. ಅವುಗಳಲ್ಲಿ ಬಹಳ ಮುಖ್ಯವಾದ ವಿಧಾನವೆಂದರೆ: ಶ್ರೀಮಂತ ಮತ್ತು ವೃತ್ತಿ-ಅಭಿಮುಖ ವಿದ್ಯಾರ್ಥಿಗಳು ಮಾತ್ರ ವಿಶ್ವವಿದ್ಯಾಲಯ ಪ್ರವೇಶಿಸಬೇಕು ಎಂಬ ಉದ್ದೇಶದಿಂದ ಶುಲ್ಕ ಹೆಚ್ಚಳ (ಜೆಎನ್‌ಯುನಲ್ಲಿ ಮಾಡಿದಂತೆ) ಮಾಡುವ ಮೂಲಕ ವಿದ್ಯಾರ್ಥಿಗಳ ಸಾಮಾಜಿಕ ಸಂಯೋಜನೆಯಲ್ಲಿ(ಅಂದರೆ, ಬೇರೆ ಬೇರೆಯ ಧರ್ಮ, ಜಾತಿ, ಲಿಂಗ, ಬಡ, ಪ್ರದೇಶ ಮುಂತಾದ ಹಿನ್ನೆಲೆಯಿಂದ ಬಂದವರು) ಬದಲಾವಣೆ, ವಿಶ್ವವಿದ್ಯಾಲಯಗಳಲ್ಲಿ ಮಾನವಿಕ ವಿಷಯಗಳು, ಸಮಾಜ ವಿಜ್ಞಾನ ಮತ್ತು ಮೂಲ ವಿಜ್ಞಾನಗಳು ಮುಂತಾದ ವಿಮರ್ಶಾತ್ಮಕ ಶಿಸ್ತುಗಳ ಮಹತ್ವವನ್ನು ಕುಗ್ಗಿಸುವ; ಹೊಸ ಶಾಖೆಗಳನ್ನು ಆರಂಭಿಸುವುದು; ಸಾಮಾಜಿಕವಾಗಿ ವಂಚಿತ ಸಮುದಾಯದ ವಿದ್ಯಾರ್ಥಿಗಳಿಗೆ ಮೀಸಲಾತಿ ಕಿತ್ತುಹಾಕಿ ಕ್ಯಾಂಪಸ್‌ಗಳ ಒಳಗೊಳ್ಳುವಿಕೆಯ ಸ್ವರೂಪವನ್ನು ಹಾಳುಗೆಡವಿರುವುದು. ಇನ್ನೊಂದು ವಿಧಾನವೆಂದರೆ, ವಿದ್ಯಾರ್ಥಿಗಳು ಪ್ರತಿಭಟನೆಗಳಲ್ಲಿ ಭಾಗವಹಿಸದಂತೆ ತಡೆಯುವುದು, ಮತ್ತು ಸಂಘ ಪರಿವಾರಕ್ಕೆ ಒಪ್ಪಿಗೆಯಾಗದ ವ್ಯಕ್ತಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಸದಂತೆ ವಿದ್ಯಾರ್ಥಿಗಳನ್ನು ತಡೆಯುವುದು. ಹೆಚ್ಚು ಹೆಚ್ಚಾಗಿ ಬಳಕೆಯಾಗುತ್ತಿರುವ ಮತ್ತೊಂದು ವಿಧಾನವೆಂದರೆ, ಪೋಲೀಸರನ್ನು ಕ್ಯಾಂಪಸ್‌ಗೆ ನುಗ್ಗಿಸಿ ವಿದ್ಯಾರ್ಥಿಗಳನ್ನು ಹಿಗ್ಗಾ ಮುಗ್ಗಾ ಥಳಿಸುವುದು ಮತ್ತು ಸರ್ಕಾರ ಅಥವಾ ಕುಲಪತಿಯನ್ನು ಫಜೀತಿಗೊಳಪಡಿಸುವ ಛಾತಿ ಇರುವ ವಿದ್ಯಾರ್ಥಿ ನಾಯಕರನ್ನು ಒಂದಲ್ಲಾ ಒಂದು ಉಗ್ರ ಕಾನೂನಿನಡಿಯಲ್ಲಿ 'ರಾಷ್ಟ್ರ-ವಿರೋಧಿ' ಅಥವಾ 'ರಾಜದ್ರೋಹ' ಅಥವಾ ಯಾವುದಾದರೂ ಸರಿಯೇ ಒಂದು ಕ್ರಿಮಿನಲ್ ಆಪಾದನೆಯ ಮೇಲೆ ಬಂಧಿಸಿ ಜೈಲಿನಲ್ಲಿ ಕೊಳೆಯುವಂತೆ ಮಾಡುವುದು.

ಈ ಎಲ್ಲ ವಿಧಾನಗಳನ್ನೂ ಸಂಘ ಪರಿವಾರ-ನಿಷ್ಠ ವ್ಯಕ್ತಿಗಳನ್ನು ಈ ಸಂಸ್ಥೆಗಳ ಮುಖ್ಯಸ್ತರಾಗಿ ನೇಮಿಸುವ ಮೂಲಕ ಜಾರಿ ಮಾಡಲಾಗುತ್ತಿದೆ. ಈ ವ್ಯಕ್ತಿಗಳಿಗೆ ವಿದ್ಯಾರ್ಥಿಗಳ ಬಗ್ಗೆ ಸ್ವಲ್ಪವೂ ಕರುಣೆ ಇಲ್ಲ, ತಾವು ಮುಖ್ಯಸ್ಥರಾಗಿರುವ ಸಂಸ್ಥೆಗಳ ಬಗ್ಗೆಯೇ ಗೌರವ, ಪ್ರೀತಿ, ಅಭಿಮಾನ, ಹೆಮ್ಮೆ, ಯಾವುದೂ ಇಲ್ಲ. ಅಷ್ಟೇ ಅಲ್ಲ, ಅವರು, ವಿಶ್ವವಿದ್ಯಾಲಯದ ಇಡೀ ಸಮುದಾಯದ ಯಾರೊಬ್ಬರಿಗೂ ಸಂಪರ್ಕಿಸಲು ಉದ್ದೇಶಪೂರ್ವಕವಾಗಿ ಒದಗದವರು. ಉದಾಹರಣೆಗೆ ಹೇಳುವುದಾದರೆ, ಜೆಎನ್‌ಯುನ ವಿದ್ಯಾರ್ಥಿ ಸಂಘಕ್ಕೆ ಮನ್ನಣೆ ನೀಡಬೇಕು ಮತ್ತು ಅದರ ನಾಯಕರೊಂದಿಗೆ ಮಾತುಕತೆ ನಡೆಸಬೇಕು ಎಂಬುದಾಗಿ ಸರ್ಕಾರವೇ ನೇಮಕ ಮಾಡಿದ ತಜ್ಞರ ಸಮಿತಿಯ ಶಿಫಾರಸನ್ನು ಜೆಎನ್‌ಯು ಕುಲಪತಿ ಕಡೆಗಣಿಸಿದ್ದಾರೆ. ವಿದ್ಯಾರ್ಥಿ ಸಮುದಾಯದ ಕಣ್ಣೋಟವನ್ನು ಅಭಿವ್ಯಕ್ತಿಸುವ ವೇದಿಕೆಯಾದ ವಿದ್ಯಾರ್ಥಿ ಸಂಘವನ್ನು ಮನ್ನಣೆ ಮಾಡುವುದು ಬಿಜೆಪಿಗೆ ಹಿಡಿಸದ ಅಂಶ. ಅದು, 'ವಿದ್ಯಾರ್ಥಿ' ಎಂದರೆ ಹೀಗೆಯೇ ಇರಬೇಕು ಎಂದು ಆದೇಶಿಸುವ ಭಾಜಪದ ಪರಿಕಲ್ಪನೆಗೆ ಹೊಂದುವುದಿಲ್ಲ.

ಒಂದು ಪ್ರಶ್ನೆ ಏಳುತ್ತದೆ: ನಮ್ಮ ವಿಶ್ವವಿದ್ಯಾಲಯಗಳಲ್ಲಿ ರಾಜಕೀಯದಿಂದ ದೂರ ಇರುವಂತೆ ಮತ್ತು ಹೇಳಿದಂತೆ ಕೇಳುವ ವಿದ್ಯಾರ್ಥಿಗಳಿಂದಲೇ ತುಂಬಿರುವಂತೆ ಮಾಡಲು ಸರ್ಕಾರವು ಅದೇಕೆ ಅಷ್ಟೊಂದು ಉತ್ಸುಕವಾಗಿದೆ? ಉತ್ತರ: ಏಕೆಂದರೆ, ಒಂದು ದಬ್ಬಾಳಿಕೆಯ ಸರ್ಕಾರಕ್ಕೆ ವಿಧೇಯತೆ ಇರಬೇಕೆಂದು ಬಯಸುವ ಸಮಾಜ ಮತ್ತು ರಾಜ್ಯಾಡಳಿತಗಳಿಗೆ ಅಂತಹ ವಿದ್ಯಾರ್ಥಿಗಳೇ ಅಗತ್ಯವಾಗಿ ಬೇಕಾಗುತ್ತಾರೆ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಮತ್ತು ಇತರ ಸಂಸ್ಥೆಗಳಲ್ಲಿ ಜಾರಿಯಾಗುತ್ತಿರುವ ಬದಲಾವಣೆಗಳ ಉದ್ದೇಶವೇ ಇಂತಹ ಸರ್ವಾಧಿಕಾರಶಾಹಿ ಆಳ್ವಿಕೆಗೆ

ಪುಟ 14 ನೋಡಿ



–ವ್ಯಂಗ್ಯಚಿತ್ರ: ಶೂನ್ಯ, ಬಿಬಿಸಿ ನ್ಯೂಸ್ ಹಿಂದಿ

ಪ್ರತಿಯೊಂದು ಕಬ್ಬಿಣದ ಸಲಾಕೆಯನ್ನು ವಾಗ್ವಾದ, ಚರ್ಚೆಯಿಂದ ಎದುರಿಸಿ



ಕೃಪೆ: ಕ್ರಿಯೇಟಿವ್ಸ್ ಅಗೆನ್ಸ್ಟ್ ಹೇಟ್

ಕೃಪೆ: ಸ್ಕ್ರಾಲ್.ಇನ್



ಪ್ರಜಾಪ್ರಭುತ್ವವಾದೀ ಹೋರಾಟದ ಮುಂಚೂಣಿಯಲ್ಲಿ ವಿದ್ಯಾರ್ಥಿಗಳು

ಪುಟ 13 ರಿಂದ



ಬದಲಾವಣೆ ಹೊಂದಲು ಸಹಾಯಕವಾಗುವುದು.

ಅವೈಚಾರಿಕತೆಗೆ ಸವಾಲು

ಪ್ರಸ್ತುತದಲ್ಲಂತೂ ಅವೈಚಾರಿಕತೆ ಕುಣಿದು ಕುಪ್ಪಳಿಸುತ್ತಿದೆ. ಭಾಜಪ ಸರ್ಕಾರವು ಎರಡು ಅಪರೂಪದ ಶಕ್ತಿಗಳ ಸಂಗಮವನ್ನು ಪ್ರತಿನಿಧಿಸುತ್ತದೆ – ಒಂದು ಕಡೆಯಲ್ಲಿ ಕಾರ್ಪೊರೇಟ್–ಹಣಕಾಸು ಕುಳಗಳು ಮತ್ತು ಇನ್ನೊಂದೆಡೆಯಲ್ಲಿ ನಮ್ಮ ಪ್ರಜಾಪ್ರಭುತ್ವವಾದೀ ಮತ್ತು ಧರ್ಮನಿರಪೇಕ್ಷ ಸಂವಿಧಾನವನ್ನು ಕಿತ್ತೆಸೆಯುವ ಮೂಲಕ ದೇಶವನ್ನು ಒಂದು 'ಹಿಂದೂ ರಾಷ್ಟ್ರ'ವಾಗಿ ಪರಿವರ್ತಿಸುವ ಗುರಿ ಹೊಂದಿದ ಹಿಂದುತ್ವ ಶಕ್ತಿಗಳು–ಇವೆರಡರ ಸಂಗಮ. ಹಿಂದೂರಾಷ್ಟ್ರದ ಸಮರ್ಥನೆಯಾಗಿ ಹಿಂದುತ್ವ ಶಕ್ತಿಗಳು ಬಳಸುತ್ತಿರುವ ಇಡೀ ಕಥನವು ಅವೈಚಾರಿಕತೆಯ ಮೇಲೆ ನಿಂತಿದೆ. ಯಾವ ಅರ್ಥದಲ್ಲಿ ಅದು ಅವೈಚಾರಿಕವಾಗಿದೆ ಎಂದರೆ, ಹಿಂದುತ್ವವು ತನ್ನ ಯಥಾರ್ಥತೆ/ಸತ್ಯತೆ–ಮೌಲ್ಯವನ್ನು ಅಂಗೀಕೃತವಾಗುವಂತೆ ಮಾಡುವಲ್ಲಿ ಪುರಾವೆಯ ಪಾತ್ರವನ್ನು ಒಪ್ಪಿಕೊಳ್ಳುವುದಿಲ್ಲ. ಈ ರೀತಿಯಲ್ಲಿ, ಅವೈಚಾರಿಕತೆ ಮತ್ತು ಕಾರ್ಪೊರೇಟ್–ಹಣಕಾಸು ಕುಳಗಳ ನಡುವೆ ಒಂದು ಮೈತ್ರಿ ಕೂಟ ಏರ್ಪಟ್ಟಿರುವುದನ್ನು ಮತ್ತು ಈ ಮೈತ್ರಿ ಕೂಟವು ಭಾಜಪ ಸರ್ಕಾರಕ್ಕೆ ಬಲ ಒದಗಿಸುತ್ತಿರುವುದನ್ನು ನಾವು ಕಾಣುತ್ತೇವೆ. ವಾಸ್ತವವಾಗಿ, ಇಂತಹ ಮೈತ್ರಿ ಕೂಟಗಳೇ ಎಲ್ಲ ಫ್ಯಾಸಿಸ್ಟ್ ತೆರನ ಸರ್ಕಾರಗಳಿಗೂ ಬಲ ತುಂಬುವ ಶಕ್ತಿಗಳು.

ಇಂತಹ ಒಂದು ಸರ್ಕಾರವನ್ನು ವರ್ಗ ಹೋರಾಟದ ಮೂಲಕ ಪ್ರತಿರೋಧಿಸುವ ಕಾರ್ಯಭಾರವು ಕಾರ್ಮಿಕರು, ರೈತರು, ಸಣ್ಣ ಉತ್ಪಾದಕರು, ಕೃಷಿ ಕಾರ್ಮಿಕರ ಹೆಗಲ ಮೇಲಿದ್ದರೂ ಸಹ, ವೈಚಾರಿಕ ಸಮುದಾಯವೂ ಒಟ್ಟಾಗಿ ನಿಂತು ಈ ಅವೈಚಾರಿಕತೆಯನ್ನು ಎದುರಿಸಬೇಕಿದೆ. ಚಾಲ್ತಿಯಲ್ಲಿರುವ ಈ ಅವೈಚಾರಿಕತೆಯು, ಚರಿತ್ರೆಯನ್ನು ಪುರಾಣದ ಮೂಲಕ ವ್ಯಾಖ್ಯಾನಿಸುತ್ತದೆ, ವಾಸ್ತವಾಂಶಗಳಿಗೆ ಬದಲಾಗಿ ನಂಬಿಕೆಗಳಿಗೆ ಜೋತುಬೀಳುತ್ತದೆ, ವೈಜ್ಞಾನಿಕ ಮನೋಭಾವದ ಬದಲಾಗಿ ಮೂಢ ನಂಬಿಕೆಗಳನ್ನು ಹರಡುತ್ತದೆ. ಈ ರೀತಿಯಲ್ಲಿ ವೈಚಾರಿಕತೆಯನ್ನು ನಾಶಪಡಿಸುವ ಭೂಮಿಕೆಯನ್ನು ಅದು ನಿರ್ಮಿಸುತ್ತಿದೆ. ಏಕೆಂದರೆ, ಕೋಮುವಾದಿ–ಸರ್ವಾಧಿಕಾರಶಾಹೀ ಯೋಜನೆಗೆ ಈ ಭೂಮಿಕೆಯೇ ಬೆನ್ನೆಲುಬು.

ಯೌವನದ ಹೊಸ್ತಿಲಲ್ಲಿರುವ ವಿದ್ಯಾರ್ಥಿಗಳು ಅತಿ ಹೆಚ್ಚು ಹುರುಪುಳ್ಳವರೂ, ಉತ್ಸಾಹಿಗಳೂ ಮತ್ತು ಶಕ್ತಿಯುತ ಕ್ರಿಯಾಶೀಲರೂ ಆಗಿರುವುದರಿಂದ, ಅವರು ಬುದ್ಧಿಜೀವಿ ವರ್ಗದ ಮೂಲಾಂಶಗಳೂ ಆಗಿರುತ್ತಾರೆ. ಆದ್ದರಿಂದ, ಅವರು ಹಿಂದುತ್ವದ ಅವೈಚಾರಿಕತೆಯ ವಿರುದ್ಧ ಶಕ್ತಿಶಾಲಿಯಾಗಿ ಹೋರಾಡಬಲ್ಲರು. ಇಂತಹ ಶಕ್ತಿಶಾಲಿ ಎದುರಾಳಿಯನ್ನು ನಿರಾಯಧರನ್ನಾಗಿಸುವುದೇ ಭಾಜಪದ ಗುರಿ. ವೃತ್ತಿ–ಭವಿಷ್ಯದ ಬೆನ್ನತ್ತಿ ಹೋಗುವ ವಿದ್ಯಾರ್ಥಿಗಳಿಂದ ಹಿಂದುತ್ವ ಯೋಜನೆಗೆ ಅಪಾಯವಿಲ್ಲ. ಅಪಾಯ ಒಡ್ಡುವವರು ಯಾರು ಎಂದರೆ, ಸಾಮಾಜಿಕ ಸಂವೇದನೆ ವ್ಯಕ್ತಪಡಿಸುವ ವಿದ್ಯಾರ್ಥಿಗಳು ಮತ್ತು ಧರ್ಮನಿರಪೇಕ್ಷತೆ ಹಾಗೂ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಬದ್ಧರಾಗಿರುವ ವಿದ್ಯಾರ್ಥಿಗಳು. ಏಕೆಂದರೆ, ಯೌವನದ ಹುರುಪು, ಉತ್ಸಾಹ ಮತ್ತು ಛಲಗಳ ಜೊತೆಗೆ ಶಿಕ್ಷಣದ ಮೂಲಕ ಜ್ಞಾನ ಸಂಪನ್ನರೂ ಆಗಿರುವ ಅವರು ಹಿಂದುತ್ವದ ವಿರುದ್ಧ ಒಂದು ಬಲವಾದ ತಡೆಯಂತೆ ನಿಲ್ಲುತ್ತಾರೆ.

ಖಾಸಗೀಕರಣ–ವ್ಯಾಪಾರೀಕರಣದ ಆಯುಧ

ಶಿಕ್ಷಣವನ್ನು ಖಾಸಗೀಕರಣಗೊಳಿಸುವ ಮತ್ತು ವ್ಯಾಪಾರೀಕರಣಗೊಳಿಸುವ ಬಯಕೆಯು, ವಿದ್ಯಾರ್ಥಿಗಳನ್ನು ನಿರಾಯುಧರನ್ನಾಗಿ ಮಾಡುವ ಯೋಜನೆಯ ಭಾಗವಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳು ವಸೂಲಿ ಮಾಡುವ ದುಬಾರಿ ಶುಲ್ಕದಿಂದಾಗಿ ದುಡ್ಡಿಲ್ಲದವರು ಶಿಕ್ಷಣದಿಂದ ಹೊರಗುಳಿಯುತ್ತಾರೆ ಮತ್ತು ಅಲ್ಲಿ ಸೇರಿಕೊಳ್ಳುವ ಶ್ರೀಮಂತರ ಮಕ್ಕಳಿಗೆ ಬಡವರ ಹೊಟ್ಟೆ ಬಟ್ಟೆಯ ಕಷ್ಟಗಳ ಬಗ್ಗೆ ಅರಿವಿಲ್ಲದಿರುವುದರಿಂದ ಅವರು ಸಾಮಾಜಿಕವಾಗಿ ಸಂವೇದನೆ ಇಲ್ಲದವರಾಗುತ್ತಾರೆ. ಹೊಟ್ಟೆ ಬಟ್ಟೆಯ ಕಷ್ಟಗಳನ್ನು ಅನುಭವಿಸಿದ ಮಕ್ಕಳಿಗೆ ಸಾಮಾಜಿಕ ಸಂವೇದನೆ ಮೂಡುವುದು ಸ್ವಾಭಾವಿಕ. ಒಂದು ವೇಳೆ, ಜೆಎನ್‌ಯು ರೀತಿಯಲ್ಲಿ, ಸಾರ್ವಜನಿಕ ಶಿಕ್ಷಣಗಳಲ್ಲೂ ಶುಲ್ಕ ಹೆಚ್ಚಳ ಮಾಡಿದರೆ, ಈ ಸಂಸ್ಥೆಗಳ ಪಾಡೂ ಅದೇ ಆಗುತ್ತದೆ. ಬೇರೆಯವರಿಗಿಂತ ಕಡಿಮೆ ಸೌಕರ್ಯ, ಪ್ರಯೋಜನ, ರಕ್ಷಣೆ ಮುಂತಾದವುಗಳನ್ನು ಹೊಂದಿದ ಕುಟುಂಬ ಹಿನ್ನೆಲೆಯಿಂದಾಗಿ ಸಾಲ ಮಾಡಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸಾಲದ ಹೊರೆಯ ಹಿಂಸೆ ಆವರಿಸಿರುವುದರಿಂದ, ಅವರಿಗೆ ಸಾಮಾಜಿಕವಾಗಿ ಅಥವಾ ರಾಜಕೀಯವಾಗಿ ಕ್ರಿಯಾಶೀಲರಾಗಿ ತೊಡಗಿಕೊಳ್ಳುವುದು ಸಾಧ್ಯವಾಗುವುದಿಲ್ಲ. ವಿದ್ಯಾರ್ಥಿ ಸಾಲಗಳು ರಾಜಕೀಯ ಕ್ರಿಯಾಶೀಲತೆಯ ಮೇಲೆ ಉಂಟುಮಾಡುವ ಪರಿಣಾಮಗಳ ಉತ್ತಮ ಚಿತ್ರಣ ಅಮೇರಿಕಾದಲ್ಲಿ ಸಿಗುತ್ತದೆ. ಅಮೇರಿಕಾದಲ್ಲಿ, ವಿದ್ಯಾರ್ಥಿಗಳು ವಿಯಟ್ನಾಂ ಯುದ್ಧ–ವಿರೋಧ ಪ್ರತಿಭಟನೆ ನಡೆಸಿದ ಸಮಯದ ನಂತರದ ಅವಧಿಯಲ್ಲಿ, ಅಲ್ಲಿನ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳು ಹೋಲಿಕೆಯಲ್ಲಿ ಶಾಂತವಾಗಿ ಕಾಣುತ್ತವೆ. ಕ್ಯಾಂಪಸ್‌ಗಳು ಶಾಂತವಾಗಿ ಉಳಿದಿರುವುದಕ್ಕೆ, ಖಂಡಿತವಾಗಿಯೂ, ವಿದ್ಯಾರ್ಥಿಗಳ ಮೇಲಿರುವ ಸಾಲದ ಹೊರೆಯೇ ಕಾರಣ.

ಭಾರತದಲ್ಲಿ, ಅದೃಷ್ಟವಶಾತ್, ಸಂಘ ಪರಿವಾರದ ಶಿಸ್ತು ಹೇರುವ ವ್ಯಕ್ತಿಗಳ ಹರ ಸಾಹಸದ ಬಳಿಕವೂ, ವಿದ್ಯಾರ್ಥಿಗಳು ತಮ್ಮ ಸಾಮಾಜಿಕ ಸಂವೇದನೆಯನ್ನು ಕಳೆದುಕೊಂಡಿಲ್ಲ. ಆಗಿರುವುದು ಏನೆಂದರೆ, ಕ್ಯಾಂಪಸ್ ಡೆಮಾಕ್ರಸಿಯಿಂದ ಹಿಡಿದು, ಇಡೀ ಜನತೆಯನ್ನು ತಟ್ಟುವ ಸಮಸ್ಯೆಗಳಾದ ಸಿಎಎ ಮತ್ತು ಎನ್‌ಆರ್‌ಸಿಯವರೆಗೆ ವಿದ್ಯಾರ್ಥಿಗಳು ಕ್ರಿಯಾಶೀಲವಾಗಿ ತೊಡಗಿಕೊಂಡಿದ್ದಾರೆ. ಅವರ ಈ ಚಟುವಟಿಕೆಗಳಲ್ಲಿ ಎದ್ದು ಕಾಣುವ ಅಂಶವೆಂದರೆ, ತಮ್ಮ ತಮ್ಮ ನಡುವೆ ಬೆಸಗೊಳ್ಳುವಿಕೆಯು (ಒಳಗೊಳ್ಳುವಿಕೆಯ ಸ್ಪಂದನೆ), ಸಮಾಜವು ಯಾವ ರೀತಿಯ ಒಳಗೊಳ್ಳುವಿಕೆಯನ್ನು ಮೈಗೂಡಿಸಿಕೊಳ್ಳಬೇಕು ಎಂಬುದರ ದಿಕ್ಸೂಚಿಯಂತಿದೆ. ಬೇರೊಂದು ಧಾರ್ಮಿಕ ಹಿನ್ನೆಲೆಯ ವಿದ್ಯಾರ್ಥಿಗಳು ಮುಸ್ಲಿಂ ವಿದ್ಯಾರ್ಥಿಗಳೊಂದಿಗೆ ಸಿಎಎ ಮತ್ತು ಎನ್‌ಆರ್‌ಸಿಯ ವಿರುದ್ಧವಾಗಿ ಹೋರಾಡುತ್ತಿರುವುದು, ಶ್ರೀಮಂತ ಹಿನ್ನೆಲೆಯ ವಿದ್ಯಾರ್ಥಿಗಳು ಶುಲ್ಕ ಹೆಚ್ಚಳದ ವಿರುದ್ಧವಾಗಿ ತಮ್ಮ ಬಡ ಸಹಪಾಠಿಗಳೊಂದಿಗೆ ಹೋರಾಡುತ್ತಿರುವ ಅಂಶಗಳು, ಆಪ್ತಗೆಳೆತನ ಮತ್ತು ಸೌಹಾರ್ಧತೆಯ ಅತ್ಯುತ್ತಮ ಉದಾಹರಣೆಗಳಾಗಿವೆ. ವಿದ್ಯಾರ್ಥಿಗಳು ಶರಣಾಗಲು ನಿರಾಕರಿಸುತ್ತಿರುವುದರಿಂದ ಅವರನ್ನು ಪಳಗಿಸಲು ಪೋಲೀಸರು ಪಾಶವೀ ಹಲ್ಲೆ ನಡೆಸುತ್ತಿದ್ದಾರೆ. ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿದ್ಯಾರ್ಥಿಗಳ ಮೇಲೆ ಕೇಂದ್ರ ಗೃಹ ಸಚಿವರ ನೇರ ಹಿಡಿತದಲ್ಲಿರುವ ದಿಲ್ಲಿ ಪೋಲಿಸರು ಪಾಶವೀ ಹಲ್ಲೆ ನಡೆಸಿದ್ದಾರೆ. ಅಲಿಘರ್ ಮುಸ್ಲಿಂ ಯೂನಿವರ್ಸಿಟಿಯಲ್ಲಿ ಉತ್ತರ ಪ್ರದೇಶದ ಭಾಜಪದ ಯೋಗಿ ಆದಿತ್ಯನಾಥರ ಸರ್ಕಾರದ ಪೋಲಿಸರು ಪಾಶವೀ ಹಲ್ಲೆ ನಡೆಸಿದ್ದಾರೆ. ಜೆಎನ್‌ಯುನಲ್ಲಿ, ಘಟನಾ ಸ್ಥಳದಲ್ಲಿ ವಿಶ್ವವಿದ್ಯಾಲಯದ ಸ್ವಂತ ರಕ್ಷಣಾ ಸಿಬ್ಬಂದಿಯ ನಿಗೂಢ ಅನುಪಸ್ಥಿತಿಯಲ್ಲಿ ಮತ್ತು ಆಂತರಿಕ ಮಾಹಿತಿ ಒದಗಿಸುವವರು ಬೆಟ್ಟು ಮಾಡಿ ತೋರಿಸಿದವರನ್ನು ಕ್ಯಾಂಪಸ್ ಹೊರಗಿನಿಂದ ಬಂದ ಮುಖ ಮುಸುಕು ಹೊದ್ದ ಪುಂಡರು ದಿಲ್ಲಿ ಪೋಲೀಸರ ಕಣ್ಣೆದುರಿನಲ್ಲೇ ಜೆಎನ್‌ಯು ವಿದ್ಯಾರ್ಥಿಗಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದಾರೆ.

ಇಂತಹ ಪಾಶವೀ ಹಲ್ಲೆಗೂ ಅಳುಕದ ವಿದ್ಯಾರ್ಥಿಗಳು, ಆಧುನಿಕ ಭಾರತದ ಬುನಾದಿ ಹಾಕಿದ ಮೌಲ್ಯಗಳನ್ನು ಹಿಂದುತ್ವವು ಗುಪ್ತವಾಗಿ ಹಾಳುಗೆಡವಲು ಪ್ರಯತ್ನ ಮಾಡುತ್ತಿರುವ ಸನ್ನಿವೇಶದಲ್ಲಿ, ಭಾರತ ಸಂವಿಧಾನದ ಮೌಲ್ಯಗಳನ್ನು ರಕ್ಷಿಸಲು ವಿದ್ಯಾರ್ಥಿಗಳು ಹೋರಾಡುತ್ತಿರುವುದು ಮನಸ್ಸನ್ನು ಉಲ್ಲಸಿತಗೊಳಿಸಿರುವ ಸಂಗತಿ. ಇದು, ಪ್ರಸ್ತುತದಲ್ಲಿ ಎಷ್ಟೇ ಕಷ್ಟ ನಷ್ಟಗಳು ಎದುರಾದರೂ, ದೇಶದ ಭವಿಷ್ಯ ಸುರಕ್ಷಿತವಾಗಿರಬಲ್ಲದು ಎಂಬ ಭರವಸೆ ಹುಟ್ಟಿಸುತ್ತದೆ.

ಉತ್ತರಪ್ರದೇಶದ 'ಬದ್ಲಾ' ಆಡಳಿತದಲ್ಲಿ ಅಭೂತಪೂರ್ವ ಪೋಲೀಸ್ ಕ್ರೌರ್ಯ



ಪುಟ 2 ರಿಂದ

ಪ್ರಮಾಣಿತ ವೀಡಿಯೋಗಳು ರಾಷ್ಟ್ರೀಯ ವಾಹಿನಿಗಳಲ್ಲಿ ಪ್ರಸಾರಗೊಂಡಿವೆ. ಕಾನ್ಪುರ ಮತ್ತು ಲಕ್ನೌನಲ್ಲಿ ಪೋಲೀಸರು ಮನೆಗಳಿಗೆ ನುಗ್ಗಿ ಧಾಂಧಲೆ ನಡೆಸಿದ, ಹೆಂಗಸರನ್ನೂ ಥಳಿಸಿದ. ಮುಝಫ್ಫರ್‌ನಗರದಲ್ಲಿ ಸಣ್ಣ ಹುಡುಗರು ಮತ್ತು ಒಂದು ಮದರಸಾದ ಮೌಲಾನಾ ಮೇಲೆ ಭೀಕರ ಪೋಲಿಸ್ ಅತ್ಯಾಚಾರದ ಘಟನೆಗಳು ವರದಿಯಾಗಿವೆ.

ಕಾನ್ಪುರ ಮತ್ತು ಮೇರಠ್‌ನ ಪೋಲೀಸ್ ಅಧಿಕಾರಿಗಳು ಗುಂಡೇಟುಗಳಿಗೆ ಗುರಿಯಾದ ಎಲ್ಲರನ್ನೂ (ಸತ್ತವರನ್ನೂ) 'ಗಲಭೆಕೋರರು' ಎಂದು ಪರಿಗಣಿಸುವುದಾಗಿ ಪ್ರಕಟಿಸಿದ್ದಾರೆ! ಸತ್ತವರ ಕುಟುಂಬಗಳಿಗೆ ಯಾವುದೇ ಪರಿಹಾರವನ್ನು ಪ್ರಕಟಿಸಿಲ್ಲ, ಮತ್ತು ಗಾಯಗೊಂಡವರಿಗೆ ವೈದ್ಯಕೀಯ ನೆರವನ್ನೂ ಒದಗಿಸಲಿಲ್ಲ. ಬದಲಿಗೆ ಅವರಲ್ಲಿ ಹಲವರನ್ನು ಬಂಧಿಸಲಾಗಿದೆ.

ಇದಲ್ಲದೆ ಹಲವೆಡೆಗಳಲ್ಲಿ ಆದಿತ್ಯನಾಥ ಸರಕಾರ 'ಪೋಲಿಸ್ ಮಿತ್ರ' ಎಂಬವರನ್ನು ಯಾವುದೇ ವಿಧಿ–ವಿಧಾನಗಳು, ಮಾನದಂಡಗಳಿಲ್ಲದೆ ನೇಮಕ ಮಾಡಿಕೊಂಡು, ಅವರಿಗೆ ಪರಿಚಯ ಬ್ಯಾಡ್ಜುಗಳು, ಜಾಕೆಟ್‌ಗಳು ಮತ್ತು ಲಾಠಿಗಳನ್ನು ಕೊಡಲಾಗಿದೆ. ಇವರೆಲ್ಲರೂ ಬಿಜೆಪಿಯ ಸದಸ್ಯರು ಅಥವ ಬೆಂಬಲಿಗರು ಎಂದು ಸ್ಥಳೀಯ ಜನಗಳಿಂದ ಖಾತ್ರಿಯಾಗಿದೆ. ಇವರೇ ಧಾಂಧಲೆ ನಡೆಸುವ, ಸಾರ್ವಜನಿಕರನ್ನು ಥಳಿಸುವ ಫೋಟೋಗಳು ಪ್ರಕಟವಾಗಿವೆ.

ಪೋಲಿಸರೇ ಸುಳ್ಳು ಸುದ್ದಿ ಹರಡಿಸುವ ಒಂದು ಉದಾಹರಣೆಯನ್ನು ಸುಭಾಷಿಣಿ ಆಲಿ ಹೇಳಿದರು. ಮೇರಠ್‌ನ ಎಸ್‌ಎಸ್‌ಪಿ ಒಂದು ವೀಡಿಯೋ ಪ್ರಕಟಿಸಿ 35 ಪೋಲಿಸ್ ಸಿಬ್ಬಂದಿಯನ್ನು ಜನಗಳು ಒಂದು ಕೋಣೆಯಲ್ಲಿ ಕೂಡಹಾಕಿ ಸುಟ್ಟು ಹಾಕಲು ಪ್ರಯತ್ನಿಸಿದರು ಎಂದು ಹೇಳಿದರು. ಆದರೆ ವಾಸ್ತವವಾಗಿ ಇವರು ಪೋಲಿಸ್ ತರಬೇತಿನಲ್ಲಿದ್ದ ಯುವಕರು., ಗಲಭೆಗಳು ಆರಂಭವಾದಾಗ ಸ್ಥಳೀಯ ಜನಗಳು ಇವರನ್ನು ಕಾಪಾಡಿ ನಂತರ ಪೋಲಿಸರಿಗೆ ಒಪ್ಪಿಸಿದರು ಎಂದು ತಿಳಿದುಬಂದಿದೆ.

ಇಂತಹ ಘೋರ ಪರಿಸ್ಥಿತಿ ಉತ್ತರ 'ಪ್ರದೇಶದಲ್ಲಿ ಉಂಟಾಗಿರುವ ಹಿನ್ನೆಲೆಯಲ್ಲಿ ಸಂಸತ್ತಿನಲ್ಲಿ ಪೌರತ್ವ ತಿದ್ದುಪಡಿ ಮಸೂದೆ ಅಂಗೀಕಾರವಾದ ನಂತರ ರಾಜ್ಯದಲ್ಲಿನ ಸಮಸ್ತ ಘಟನಾವಳಿಯ ನ್ಯಾಯಾಂಗ ತನಿಖೆಯನ್ನು ಅಲಹಾಬಾದ್ ಹೈಕೋರ್ಟಿನ ಒಬ್ಬ ಹಾಲಿ ನ್ಯಾಯಾಧೀಶರಿಂದ ನಡೆಸಬೇಕು ಎಂದು ಸುಭಾಷಿಣಿ ಆಲಿ ಆಗ್ರಹಿಸಿದ್ದಾರೆ. ಅಲ್ಲದೆ, ಎಲ್ಲ ಸತ್ತವರ ಕುಟುಂಬಗಳಿಗೆ ಮತ್ತು ಗಾಯಗೊಂಡವರಿಗೆ ಪರಿಹಾರ ನೀಡಬೇಕು, ಮುಗ್ಧ ಜನಗಳ ಮೇಲೆ ಹಾಕಿರುವ ಕೇಸುಗಳನ್ನು ಹಿಂದಕ್ಕೆ ಪಡೆಯಬೇಕು, ದಂಡ ವಿಧಿಸುವುದು ಇತ್ಯಾದಿ ಪ್ರಯತ್ನಗಳನ್ನು ನಿಲ್ಲಿಸಬೇಕು, ಹಿಂಸಾಚಾರ ಮತ್ತು ಧಾಂಧಲೆಗಳಲ್ಲಿ ತೊಡಗಿದ್ದ ಪೋಲಿಸ್ ಸಿಬ್ಬಂದಿಯ ವಿರುದ್ಧ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು 'ಪೋಲೀಸ್ ಮಿತ್ರ' ಎಂಬ ಕಾವಲುಕೋರ ಪಡೆಯನ್ನು ಸಂಪೂರ್ಣವಾಗಿ ಬರ್ಖಾಸ್ತು ಮಾಡಬೇಕು ಎಂದು ಸುಭಾಷಿಣಿ ಆಲಿಯವರು ಆಗ್ರಹಿಸಿದ್ದಾರೆ.

ಕಾಕಾ ಬಾಬು–ಒಬ್ಬ ಕಮ್ಯುನಿಸ್ಟ್ ಪಥ ಪ್ರದರ್ಶಕ

ಪುಟ 11 ರಿಂದ



1964 ರ ಕಲ್ಕತ್ತಾ ಮಹಾಧಿವೇಶನದ ಸಮಯದಲ್ಲಿ ಅವರು ಜೈಲಿನಲ್ಲಿದ್ದರು ಹಾಗೂ 1972 ರ ಮಧುರೈ ಮಹಾಧಿವೇಶನದ ಸಂದರ್ಭದಲ್ಲಿ ಅವರು ಅನಾರೋಗ್ಯದಿಂದ ಬಳಲುತ್ತಿದ್ದರು. ಮೀರತ್ ಪಿತೂರಿ ಪ್ರಕರಣದಲ್ಲಿ ಬಂಧನವಾಗಿ ಜೈಲಿನಲ್ಲಿದ್ದರೂ ಅವರು ಕೇಂದ್ರ ಸಮಿತಿಗೆ ಆಯ್ಕೆಯಾಗುತ್ತಿದ್ದರು ಮತ್ತು ಸಾಯುವ ತನಕವೂ ಅವರು ಅದರ ಸದಸ್ಯರಾಗಿಯೇ ಇದ್ದರು. ಪಕ್ಷದ ಪತ್ರಿಕೆಗಳು ಮತ್ತು ಪುಸ್ತಕಗಳ ಪ್ರಕಟಣೆಗೆ ಮಾರ್ಗದರ್ಶನ ನೀಡುವಲ್ಲಿ ಮುಜಾಫರ್ ಮುಖ್ಯ ಪಾತ್ರ ವಹಿಸಿದ್ದರು. ಕಮ್ಯುನಿಸ್ಟ್ ಪಕ್ಷಕ್ಕೆ ತನ್ನದೇ ಆದ ಒಂದು ಮುಖವಾಣಿ(ಪತ್ರಿಕೆ) ಇಲ್ಲದೇ ಇದ್ದರೆ ಅದು ಬೆಳೆಯಲು ಸಾಧ್ಯವಿಲ್ಲ ಎಂಬುದನ್ನು ಸದಾ ಒತ್ತಿ ಹೇಳುತ್ತಿದ್ದರು. ಗಣಶಕ್ತಿ ಮುದ್ರಣಾಲಯ ಬೆಳೆಸುವುದರಲ್ಲಿ ಅವರು ಮಾರ್ಗದರ್ಶಕ ಚೇತನವಾಗಿದ್ದರು. ನ್ಯಾಷನಲ್ ಬುಕ್ ಏಜೆನ್ಸಿಯ ವ್ಯವಸ್ಥಾಪಕರಲ್ಲಿ ಅವರೂ ಒಬ್ಬರಾಗಿದ್ದರು. ಪಕ್ಷದ ಹಲವಾರು ಪತ್ರಿಕೆಗಳಾದ **ಜನಯುದ್ಧ**, ದಿನ ಪತ್ರಿಕೆ **ಸ್ವಾಧೀನತಾ**, ಸಂಜೆ ಪತ್ರಿಕೆ **ಗಣಶಕ್ತಿ**, ವಾರ ಪತ್ರಿಕೆ **ದೇಶ್ ಹಿತೈಷಿ**, ಮಾಸ ಪತ್ರಿಕೆ **ನಂದನ್** ಮತ್ತು **ಏಕ್ ಸಾಥಿ**(ಮಹಿಳಾ ಸಂಘಟನೆಯ ಪತ್ರಿಕೆ) ಮುಂತಾದವುಗಳನ್ನು ನಡೆಸುವ ನಿಟ್ಟಿನಲ್ಲಿ ಮಾರ್ಗದರ್ಶನ ಮತ್ತು ಸಲಹೆಗಳನ್ನು ನೀಡುತ್ತಿದ್ದರು.

ಮುಜಾಫರ್ ಅಹಮದವರು ಅಪಾರ ಆಸಕ್ತಿಯ ಓದುಗರಾಗಿದ್ದರು ಮತ್ತು ಅವರ ಸಂಪರ್ಕಕ್ಕೆ ಬಂದ ಎಲ್ಲರನ್ನೂ ಹೆಚ್ಚೆಚ್ಚು ಓದುವಂತೆ ಪ್ರೇರೇಪಿಸುತ್ತಿದ್ದರು. ತಮ್ಮ ದಿನನಿತ್ಯದ ಬಿಡುವಿಲ್ಲದ ಕೆಲಸಗಳ ನಡುವೆಯೂ ಅವರು ಸಂಗಾತಿಗಳ ವೈಯಕ್ತಿಕ ಸಮಸ್ಯೆಗಳ ಬಗ್ಗೆ ತಾಳ್ಮೆಯಿಂದ ಆಲಿಸಲು ಸಮಯ ನೀಡುತ್ತಿದ್ದರು, ಅನಾರೋಗ್ಯದಿಂದ ನರಳುತ್ತಿರುವವರ ದೇಹಸ್ಥಿತಿಯ ಬಗ್ಗೆ ವಿಚಾರಿಸುತ್ತಿದ್ದರು ಹಾಗೂ ಅವರಿಗೆ ಸರಿಯಾದ ಚಿಕಿತ್ಸೆ ಕೊಡಿಸುವ ಬಗ್ಗೆ ವ್ಯವಸ್ಥೆ ಮಾಡುತ್ತಿದ್ದರು, ಜಿಲ್ಲಾ ಸಂಘಟನಾ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತಿದ್ದರು ಮತ್ತು ಹುತಾತ್ಮರಾದ ವೀರ ಸಂಗಾತಿಗಳ ಕುಟುಂಬದವರಿಗೆ ಸಾಂತ್ವನ ನೀಡುತ್ತಿದ್ದರು.

ತಮ್ಮ ಬದುಕಿನುದ್ದಕ್ಕೂ ಮುಜಾಫರ್ ಅವರು ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದಕ್ಕೆ ಅತ್ಯಂತ ವಿನೀತರೂ ಹಾಗೂ ವಿಧೇಯರೂ ಆಗಿದ್ದರು. ವಿನೀತರಾಗಿದ್ದರು ಆದರೆ ಬಲ ಸಮಯಸಾಧಕತನ ಹಾಗೂ ಎಡ–ಪಂಥೀಯವಾದ ಈ ಎರಡರ ವಿರುದ್ಧ ಅಷ್ಟೇ ದೃಢವಾಗಿ ಹೋರಾಡುತ್ತಿದ್ದರು. ಪಕ್ಷದ ಶಿಸ್ತಿನ ವಿಷಯದಲ್ಲಿ ಅವರು ಕಠೋರರಾಗಿದ್ದರು.; ಶಿಸ್ತನ್ನು ನಿರ್ದಾಕ್ಷಿಣ್ಯದಿಂದ, ನಿರ್ದಯವಾಗಿ ಜಾರಿ ಮಾಡುತ್ತಿದ್ದರು. ಇದು ಅವರಲ್ಲಿ ಬೇರೂರಿದ್ದ ಲೆನಿನ್‌ವಾದ.

ಮುಜಾಫರ್ ಅಹಮದ್ ಇತಿಹಾಸ ಎಂದರೇನು ಎಂದು ಅರಿತಿದ್ದರು. ಇತಿಹಾಸ ನಿರ್ಮಿಸುವುರಲ್ಲಿ ನೆರವಾದರು. ಆ ಇತ್ತಿಹಾಸ ಇನ್ನೂ ರೂಪುಗೊಳ್ಳುತ್ತಲೇ ಇದೆ.

ಪುಟ 15 ರಿಂದ



ಮಂಡ್ಯ



ಬಿಜಾಪುರ



ಕೊಡಗು



ರಾಯಚೂರು

ಇರಾನಿನ ಬಗ್ಗೆ ಅಮೆರಿಕಕ್ಕೆ ಏಕಿಷ್ಟು ಭಯ?............

ಪುಟ 6 ರಿಂದ

ಜ್ಯೂ ಧಾರ್ಮಿಕ ರಾಷ್ಟ್ರೀಯತೆ ಮೇಲೆ ಆಧರಿಸಿದ ಇಸ್ರೇಲನ್ನು ಮಿಲಿಟರಿ ಪ್ರತಿಶಕ್ತಿಯಾಗಿ ಬೆಳೆಸಿತ್ತು. ಸೌದಿ ಅರೇಬಿಯ ಮತ್ತು ಕೊಲ್ಲಿ ದೇಶಗಳಲ್ಲಿ ಭಾರೀ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿತ್ತು. ಮುಖ್ಯವಾಗಿ ಸೌದಿ ಅರೇಬಿಯ ಮತ್ತು ಇಸ್ರೇಲ್ ಈ ಪ್ರದೇಶದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ ಹಿತಾಸಕ್ತಿಯನ್ನು ಮುಂದೊಯ್ಯುವಂಥದಾಗಿದ್ದವು. ಈಗಲೂ ಅವೇ ಈ ಪ್ರದೇಶದಲ್ಲಿ ಅಮೆರಿಕದ ಕಾವಲುನಾಯಿಗಳು. ಅವುಗಳನ್ನು ರಕ್ಷಿಸುವತ್ತ ಬಲಪಡಿಸುವತ್ತ ಉಳಿದ ಯಾವುದೇ ಶಕ್ತಿಕೇಂದ್ರ ಬೆಳೆಯದಂತೆ ಮಾಡುವುದು ಮೆರಿಕದ ನೀತಿಯ ಕೇಂದ್ರಬಿಂದು.

1970ರ ದಶಕದಲ್ಲಿ ಅರಬ್ ಪ್ರಗತಿಪರ ರಾಷ್ಟ್ರೀಯವಾದಿ ಪಕ್ಷ, ಶಕ್ತಿ ಮತ್ತು ಸರಕಾರಗಳು ಭಾಗಶಃ ತಮ್ಮದೇ ನ್ಯೂನತೆಗಳೊಂದಿಗೆ ದುರ್ಬಲವಾಗುತ್ತಾ ಹೋದಂತೆ, ಇಡೀ ಪ್ರದೇಶದಲ್ಲಿ ಇಸ್ಲಾಮಿಕ್ ಧಾರ್ಮಿಕ ಶಕ್ತಿಗಳ ಬಲ ಹೆಚ್ಚುತ್ತಾ ಹೋಯಿತು. ಈ ಅವಧಿಯಲ್ಲಿ ಇಸ್ಲಾಮಿಕ್ ಧಾರ್ಮಿಕ ಶಕ್ತಿಗಳನ್ನು ಬಳಸಿ ಈ ಪ್ರದೇಶದ ರಾಜಕೀಯವನ್ನು ಬದಲಾಯಿಸುವ ಪ್ರಯತ್ನವನ್ನು ಅಮೆರಿಕ ಮಾಡಿತು. ಇಷ್ಟು ಹೊತ್ತಿಗೆ ಇರಾನಿನಲ್ಲಿ ಚಕ್ರವರ್ತಿ ಶಾ ನ ದಮನಕಾರಿ ಆಡಳಿತ, ಅಮೆರಿಕನ್ ಸಾಮ್ರಾಜ್ಯಶಾಹಿಯ ಪೂರ್ಣ ನೆರವು ಕುಮ್ಮಕ್ಕಿನೊಂದಿಗೆ ಎಲ್ಲ ಪ್ರಜಾಪ್ರಭುತ್ವವಾದಿ ಪ್ರಗತಿಪರ ರಾಜಕೀಯ ಶಕ್ತಿಗಳನ್ನು ಮಟ್ಟ ಹಾಕಿ ಅತ್ಯಂತ ಕ್ರೂರ ಸರ್ವಾಧಿಕಾರ ನಡೆಸುತ್ತಿತ್ತು. ಅದರಿಂದ ಉಂಟಾದ ತೀವ್ರ ಅತೃಪ್ತಿಯ ವಿರುದ್ಧ ಈ ಎಲ್ಲಾ ಶಕ್ತಿಗಳು ಜನತೆಯ ಪ್ರತಿರೋಧ, ದಂಗೆಗಳನ್ನು ಸಂಘಟಿಸುತ್ತಿದ್ದರೂ, ಅವನ್ನು ಹೆಚ್ಚಾಗಿ ಶಾ ಕೈ ಹಾಕಲು ಧೈರ್ಯ ಮಾಡದ ಮಸೀದಿಗಳಲ್ಲಿ ಧಾರ್ಮಿಕ ಚಟುವಟಿಕೆಯ ನೆರಳಿನಲ್ಲಿ ಮಾಡಲಾಯಿತು. ಶಾ ಸರ್ವಾಧಿಕಾರಕ್ಕೆ ಸಾಂಪ್ರದಾಯಿಕ ಧಾರ್ಮಿಕ ಶಕ್ತಿಗಳೂ ವಿರೋಧವಾಗಿದ್ದು, ಪ್ರಗತಿಪರ–ಪ್ರಜಾಫ್ರಭುತ್ವವಾದಿ ಶಕ್ತಿಗಳ ಜತೆಗಿನ ಅವುಗಳ ಐಕ್ಯರಂಗ ಭಾರೀ ಪ್ರತಿರೋಧ ಒಡ್ಡಿತ್ತು. ಈ ಪ್ರತಿರೋಧ 1979ರಲ್ಲಿ ಆಸ್ಫೋಟಗೊಂಡು ವಿದ್ಯಾರ್ಥಿಗಳು ಅಮೆರಿಕನ್ ರಾಯಭಾರ ಕಚೇರಿಯನ್ನು ಸುತ್ತುವರೆದು ವಶಪಡೆಸುವುದರೊಂದಿಗೆ ಶಾ ಸರಕಾರವನ್ನು ಉರುಳಿಸಲಾಯಿತು. ಆದರೆ ಕ್ರಾಂತಿಯ ನಂತರ ಇಸ್ಲಾಮಿಕ್ ಧಾರ್ಮಿಕ ಶಕ್ತಿಗಳ ಕೈಮೇಲಾಗಿ ಇರಾನ್ ಇಸ್ಲಾಮಿಕ್ ರಿಪಬ್ಲಿಕ್ ಆಯಿತು. ಇರಾನಿ ಸರಕಾರ ಕಟು ಸಾಂಪ್ರದಾಯಿಕ ಧಾರ್ಮಿಕ ನೀತಿಗಳನ್ನು ಎತ್ತಿ ಹಿಡಿದರೂ ಸೆಕ್ಯುಲರ್ ಶಕ್ತಿ/ಪಕ್ಷಗಳನ್ನು ದಮನ ಮಾಡಿದರೂ ಸಾಮ್ರಾಜ್ಯಶಾಹಿ–ವಿರೋಧಿ ರಾಷ್ಟ್ರೀಯ ನೀತಿಯನ್ನು ಅನುಸರಿಸಿತು. ಈ ಪ್ರದೇಶದಲ್ಲಿರುವ (ಹಲವು ದೇಶಗಳಲ್ಲಿ ಪ್ರಮುಖ ಧಾರ್ಮಿಕ ಅಲ್ಪಸಂಖ್ಯಾತರಾಗಿದ್ದ) ಶಿಯಾ ಜನತೆಯ ಆಕಾಂಕ್ಷೆಗಳ ಕೇಂದ್ರ ಬಿಂದುವಾಯಿತು. ಈ ಪ್ರದೇಶದ ಹಲವು ದೇಶಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿ–ವಿರೋಧಿ ಚಳುವಳಿಗಳಿಗೆ ಸ್ಫೂರ್ತಿ ಮತ್ತು ಭೌತಿಕ ಬೆಂಬಲದ ಮೂಲವೂ ಆಯಿತು. ಆ ಮೂಲಕ ಈ ಪ್ರದೇಶದಲ್ಲಿ ಇರಾನಿನ ಪ್ರಭಾವ ಬೆಳೆಯುತ್ತಾ ಬಂದಿದೆ.

ಹೀಗಾಗಿ 1980ರ ದಶಕದ ನಂತರ ಇರಾನ್ ಅಮೆರಿಕಕ್ಕೆ ನುಂಗಲಾರದ ತುತ್ತಾಗಿದೆ. ಈ ಸವಾಲನ್ನು ಚಿಗುರಿನಲ್ಲೆ ಚಿವುಟಿ ಹಾಕಲು ಅಮೆರಿಕ ಸುನ್ನಿ–ಶಿಯಾ ಇಸ್ಲಾಮಿಕ್ ಪಂಥಗಳ ನಡುವೆ ಇದ್ದ ವೈಷಮ್ಯಗಳನ್ನು ಬಳಸಿ ತನ್ನ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸಿತು. ಆಗ ಸಾಕಷ್ಟು ಪ್ರಬಲವಾಗಿದ್ದ ಸುನ್ನಿ ಬಹುಸಂಖ್ಯಾತರಾಗಿದ್ದ (ಆದರೆ ಶಿಯಾ ದಮನಿತ ಗಮನಾರ್ಹ ಅಲ್ಪಸಂಖ್ಯಾತ ಪಂಥವಾಗಿದ್ದ) ಇರಾಕನ್ನು ಶಿಯಾ ಬಹುಸಂಖ್ಯಾತರಾಗಿದ್ದ ಇರಾನಿನ ವಿರುದ್ಧ ಎತ್ತಿ ಕಟ್ಟಿ 8 ವರ್ಷಗಳ ಯುದ್ಧ ನಡೆಸಿ, ಈ ಪ್ರದೇಶದ ಎರಡು ದೊಡ್ಡ ದೇಶಗಳ ಪರಸ್ಪರ ವಿನಾಶಕ್ಕೆ ಕಾರಣವಾಯಿತು. ಇನ್ನೊಂದು ಕಡೆ ಇದೇ ಅವಧಿಯಲ್ಲಿ ಇಸ್ಲಾಮಿಕ್ ಮೂಲಭೂತವಾದಿ ಸಿದ್ಧಾಂತದ 'ಜೆಹಾದಿ' ಸಶಸ್ತ್ರ ಗುಂಪುಗಳನ್ನು ಎಲ್ಲೆಡೆ ಕಟ್ಟಿತು. ಅಫ್ಘಾನಿಸ್ತಾನಲ್ಲಿ ಕ್ರಾಂತಿ ನಡೆದು ರಚನೆಯಾದ ಪ್ರಗತಿಪರ ಸರಕಾರವನ್ನು ಉರುಳಿಸಲು 'ಇಸ್ಲಾಂ ಅಪಾಯದಲ್ಲಿದೆ' ಎಂಬ ಕೂಗು ಎಬ್ಬಿಸಿ, ಅದರ ಮತ್ತು ಅದರ ನೆರವಿಗೆ ಬಂದ ಸೋವಿಯೆಟ್ ಒಕ್ಕೂಟದ ವಿರುದ್ಧ ಹರಿಯ ಬಿಟ್ಟಿತು. 1980–90ರ ಅವಧಿಯಲ್ಲಿ ಇರಾನ್–ಇರಾಕ್ ಯುದ್ಧ, ಕೊಲ್ಲಿ ಯುದ್ಧ ಮತ್ತಿತರ ಅಂಶಗಳ ಮೂಲಕ, ಈ ಪ್ರದೇಶದಲ್ಲಿ ತನ್ನ ಪ್ರಭಾವ ಉಳಿಸಿಕೊಂಡಿತು.

ಈ ಪ್ರದೇಶದಲ್ಲಿ ಸ್ವತಂತ್ರವಾಗಿ ಬೆಳೆದು ಪ್ರಬಲವಾಗಿದ್ದ ಇರಾಕ್ ಮತ್ತು ಸಿರಿಯಾಗಳ ವಿರುದ್ಧ ಈ ಶತಮಾನದಲ್ಲಿ ಯುದ್ಧದ ಮೂಲಕ 'ಸರಕಾರ ಬದಲಾವಣೆ'ಯ ಅಮೆರಿಕದ ಪ್ರಯತ್ನ ಇರಾನನ್ನು ಆಶ್ಚರ್ಯಕರ ರೀತಿಯಲ್ಲಿ ಬಲಪಡಿಸಿದೆ. ಸದ್ದಾಂ ಹುಸೇನ್ ಸರಕಾರ ಉರುಳಿಸಿ ಇರಾಕ್ ಯುದ್ಧದ ನಂತರ ಬಂದ ಇರಾಕಿ ಸರಕಾರದಲ್ಲಿ ಇರಾನ್–ಪರ ಶಕ್ತಿಗಳು ಬಲವಾಗಿ ಬೇರೂರಿವೆ. ಐಸಿಸ್ ವಿರುದ್ಧ ಯುದ್ಧದಲ್ಲಿ ಸಹ ಇರಾನ್ ಇರಾಕಿನಲ್ಲಿರುವ ಶಿಯಾ ಪೌರಸೈನ್ಯಗಳ ಮೂಲಕ ಪ್ರಧಾನ ಪಾತ್ರ ವಹಿಸಿದೆ. ಸಿರಿಯಾದಲ್ಲಿ 'ಸರಕಾರ ಬದಲಾವಣೆ'ಯ ಪ್ರಯತ್ನ ವಿಫಲವಾಗಿದೆ ಮಾತ್ರವಲ್ಲ, ಅಮೆರಿಕಕ್ಕೆ ಮುಖಭಂಗಕ್ಕೆ ಕಾರಣವಾಗಿದೆ. ಇದರಲ್ಲಿ ಇರಾನಿನ ಪಾತ್ರ ಕಡಿಮೆಯೇನಲ್ಲ. ಇದರಿಂದಾಗಿ ಇರಾನಿನ ಅಣುಶಕ್ತಿ ಬೆಳವಣಿಗೆಯ ಪ್ರಶ್ನೆ ಮುಂದು ಮಾಡಿ ಕಳೆದ ಹಲವು ವರ್ಷಗಳಿಂದ ಇರಾನಿನ ಮೇಲೆ ತೀವ್ರ ಆರ್ಥಿಕ ದಿಗ್ಬಂಧನವನ್ನೂ ಹಾಕಿತು. ಆದರೆ ಅಣು ಒಪ್ಪಂದದ ನಂತರ ಅದನ್ನು ಸಡಿಲಗೊಳಿಸಬೇಕಾಯಿತು. ಈ ನಡುವೆ ಲೆಬನಾನ್, ಪ್ಯಾಲೆಸ್ಟೈನ್ ಮತ್ತಿತರ ದೇಶಗಳಲ್ಲಿ ಇರಾನಿ ಬೆಂಬಲದ ಗೆರಿಲ್ಲಾ ಗುಂಪುಗಳು ಪ್ರಬಲವಾಗಿವೆ. ಒಟ್ಟಾರೆಯಾಗಿ ಇರಾನಿನ ಬಲ ಹೆಚ್ಚಾಗಿದೆಯೇ ವಿನಹ ಕಡಿಮೆಯಾಗಿಲ್ಲ. ಇದೇ ಇರಾನಿನ ಬಗ್ಗೆ ಅಮೆರಿಕದ ಹತಾಶೆಗೆ ಕಾರಣ. ಈಗಿನ ಬಿಕ್ಕಟ್ಟಿಗೆ ಕಾರಣವಾಗಿರುವ ಇರಾನ್ ಜತೆಗಿನ ಅಣು ಒಪ್ಪಂದದಿಂದ ಅಮೆರಿಕ ಹಿಂದೆ ಸರಿಯುವುದರಿಂದ ಆರಂಭವಾದ ಸರಣಿ ಬೆಳವಣಿಗೆಗಳಿಗೆ ಕಾರಣವಾಗಿದೆ.

ಇರಾನನ್ನು ಪಶ್ಚಿಮ ಏಶ್ಯಾದಲ್ಲಿ ಒಂಟಿಯಾಗಿಸುವ ಪ್ರಯತ್ನ ಬ್ಯೂಮರಾಂಗ್ ಆಗಿ ಅಮೆರಿಕ ಒಂಟಿಯಾಗುತ್ತಾ ನಡೆದಿದೆ. ಇರಾನ್ ಜತೆಗಿನ ಅಣು ಒಪ್ಪಂದದಿಂದ ಹಿಂತೆಗೆತದಿಂದ ಆರಂಭವಾಗಿ ಸೊಲೆಮಾನಿ ಹತ್ಯೆವರೆಗಿನ ಟ್ರಂಪ್ ಕ್ರಮಗಳ ಬಗ್ಗೆ ಯುರೋಪಿಯನ್ ಕೂಟಕ್ಕೆ ತೀವ್ರ ಅಸಮ್ಮತಿ ಇದೆ. ಸೊಲೆಮಾನಿ ಹತ್ಯೆಯ ನಂತರ ಟ್ರಂಪ್ ಮತ್ತು ಆತನ ಸಚಿವರು ಅಧಿಕಾರಿಗಳ ವರ್ತನೆಯಿಂದ ಇಡೀ ಜಗತ್ತಿನಲ್ಲಿ ಅಮೆರಿಕ ಇಂದು ಒಂಟಿಯಾಗಿದೆ.

ಟ್ರಂಪ್ ಅಮೆರಿಕದ ಆಕ್ರಾಮಕ ಸಾಮ್ರಾಜ್ಯಶಾಹಿ ನೀತಿಯನ್ನು ಮುಂದುವರೆಸುತ್ತಿರುವುದು ಅಷ್ಟೇ ಎಂಬುದು ನಿಜವಾದರೂ ಅವರ ಅಧಿಕ ತಿಕ್ಕಲುತನ ಇನ್ನೂ ಹೆಚ್ಚಿನ ಸವಾಲುಗಳನ್ನು ಅಮೆರಿಕಕ್ಕೆ ಒಡ್ಡಿದೆ. ಮುಂದೇನು ಎಂಬ ಪ್ರಶ್ನೆ ಕಾಡಿದೆ. ಇರಾನ್ ಕ್ಷಿಪಣಿ ದಾಳಿಯ ನಂತರ ಟ್ರಂಪ್ ಹೇಳಿಕೆ ಸಂಘರ್ಷ ಮುಂದುವರೆಯಲಿಕ್ಕಿಲ್ಲ ಎಂಬ ಸೂಚನೆ ಕೊಟ್ಟರೂ ಅಮೆರಿಕದ ಸವಾಲುಗಳು ಸಂಕೀರ್ಣಗೊಳ್ಳುತ್ತಾ ಹೋಗುವಂತೆ ಕಾಣುತ್ತದೆ. ಇರಾನ್ ಈ ಬಿಕ್ಕಟ್ಟಿನಿಂದಲೂ ಪ್ರಭಾವ ಹೆಚ್ಚಿಸಿಕೊಂಡಂತೆ ಕಾಣುತ್ತದೆ. ನೇರ ಯುದ್ಧ ಆಗದಿದ್ದರೂ ಈ ಪ್ರದೇಶದಲ್ಲಿ ಅಮೆರಿಕದ ನೆಲೆಗಳಲ್ಲಿರುವ ಸೈನಿಕರು ಸದಾ ಭಯದ ನೆರಳಿನಲ್ಲಿ ಬದುಕುವಂಥಾಗಬಹುದು.

ಇರಾಕ್ ನಿಂದ ಅಮೆರಿಕನ್ ಪಡೆಗಳನ್ನು ಹಿಂತೆಗೆದರೆ ಅದಕ್ಕೆ ತೀವ್ರ ಮುಖಭಂಗವಾಗಲಿದೆ. ಹಿಂತೆಗೆಯದಿದ್ದರೆ ಅಲ್ಲಿ ನೆಲೆಸಿರುವ ಅಮೆರಿಕ ಮತ್ತು ನಾಟೋ ಸೈನಿಕರಿಗೆ ತೀವ್ರ ಅಪಾಯ ಕಾದಿದೆ. ಇರಾಕ್–ಇರಾನ್ ಸರಕಾರ ಏನು ಮಾಡದಿದ್ದರೂ ಆಕ್ರೋಶಭರಿತ ಜನತೆ ಸುಮ್ಮನಿರುತ್ತಾರೆ ಎಂದು ನಂಬಲು ಸಾಧ್ಯವಿಲ್ಲ. ಸಿರಿಯಾ ದಿಂದ ಈಗಾಗಲೇ ಅಮೆರಿಕನ್ ಪಡೆ ಹಿಂತೆಗೆಯುವ ಪರಿಸ್ಥಿತಿ ಇದೆ. ಒಟ್ಟಾರೆಯಾಗಿ ಇಡೀ ಪ್ರದೇಶದಲ್ಲಿ ಮಿಲಿಟರಿ ಅಥವಾ ಇತರ ರೀತಿಯ ಮಧ್ಯಪ್ರವೇಶ ಮಾಡುವ ಅಮೆರಿಕದ ಶಕ್ತಿ ಕುಂದಿದೆ. ಇದರಿಂದ ಅದರ ಕಾವಲು ನಾಯಿಗಳಾದ ಸೌದಿ ಅರೇಬಿಯ, ಇಸ್ರೇಲುಗಳ ಆತಂಕವೂ ಹೆಚ್ಚಾಗುತ್ತದೆ. ಟ್ರಂಪ್ ಹತಾಶೆಯಿಂದ ಇನ್ಯಾವುದೇ ತಿಕ್ಕಲು ನಿರ್ಧಾರ ಕೈಗೊಂಡರೆ ಏನನ್ನೂ ಹೇಳಲು ಸಾಧ್ಯವಿಲ್ಲ. ●

JANASHAKTHI KANNADA VARA PATRIKE JANUARY 13-19, 2020 Price: Rs. 10/- Date of Publication: 10 JANUARY 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಜನವರಿ 8: ಕರ್ನಾಟಕದಲ್ಲಿ 50 ಲಕ್ಷ ಕಾರ್ಮಿಕರ ಮುಷ್ಕರ, ರಾಜ್ಯಾದ್ಯಂತ ಪ್ರತಿಭಟನೆಗಳು



ಕರ್ನಾಟಕದಲ್ಲಿ ಆರಂಭಿಕ ಅಂದಾಜಿನ ಪ್ರಕಾರ 50 ಲಕ್ಷ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು. ರಾಜ್ಯದಲ್ಲಿನ ಬಿಜೆಪಿ ಸರಕಾರ ಮುಷ್ಕರವನ್ನು ಹತ್ತಿಕ್ಕಲು ಪ್ರಜಾಪ್ರಭುತ್ವ–ವಿರೋಧಿ ಕ್ರಮಗಳನ್ನು ಕೈಗೊಂಡರೂ ತಯಾರಿಕಾ ವಲಯ, ಅಸಂಘಟಿತ ವಲಯಗಳ ಕಾರ್ಮಿಕರು, ಸ್ಕೀಮ್ ಕಾರ್ಮಿಕರು ಮತ್ತು ಸ್ಥಳೀಯ ಸಂಸ್ಥೆಗಳ ನೌಕರರು ರಾಜ್ಯಾದ್ಯಂತ ಈ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ದೊರೆತ ಆರಂಭಿಕ ವರದಿಗಳ ಪ್ರಕಾರ ದೇಶದ ಅತಿದೊಡ್ಡ ಕೈಗಾರಿಕಾ ಪ್ರದೇಶವಾದ ಪೀಣ್ಯ ಸೇರಿದಂತೆ ಬೆಂಗಳೂರು ಸುತ್ತಮುತ್ತಲಿನ ಕೈಗಾರಿಕಾ ಪ್ರದೇಶಗಳಲ್ಲಿ ಸುಮಾರಾಗಿ ಎಲ್ಲ ಕಡೆಯೂ ಸಂಪೂರ್ಣ ಮುಷ್ಕರ ನಡೆದಿದೆ. ಮೈಸೂರಿನ ನಂಜನಗೂಡು ಕೈಗಾರಿಕಾ ಪ್ರದೇಶ, ಕೋಲಾರದ ನರಸಾಪುರ ಕೈಗಾರಿಕಾ ಪ್ರದೇಶಗಳಲ್ಲೂ ಸಂಪೂರ್ಣ ಮುಷ್ಕರ ನಡೆದಿದೆ. ಕೆಜಿಎಫ್‌ನ ಬೆಮೆಲ್‌ನಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ಕಲಬುರ್ಗಿ ಜಿಲ್ಲೆಯಲ್ಲಿ ಸಿಮೆಂಟ್ ಉದ್ಯಮದಲ್ಲಿ ಸುಮಾರಾಗಿ ಸಂಪೂರ್ಣ ಮುಷ್ಕರ ನಡೆದಿದೆ.

ಕೋಲಾರ ಮತ್ತು ಚಿಕ್ಕಬಳ್ಳಾಪುರದ ಹಲವೆಡೆಗಳಲ್ಲಿ ಬಂದ್ ನಡೆದಿದೆ, ಬಳ್ಳಾರಿಯ ಕಂಪ್ಲಿಯಲ್ಲಿ ಹರತಾಳ ಸಂಪೂರ್ಣವಾಗಿ ನಡೆಯಿತು. ರಾಯಚೂರು ಜಿಲ್ಲೆಯ ಹಲವೆಡೆಗಳಲ್ಲೂ ಭಾಗಶಃದಿಂದ ಸಂಪೂರ್ಣ ಬಂದ್ ನಡೆದಿದೆ. ಯಾದಗೀರ್ ತಾಲೂಕಿನಲ್ಲಿ ಸಂಪೂರ್ಣ ಹರತಾಳ ನಡೆದಿದೆ ಎಂದು ವರದಿಯಾಗಿದೆ.

ಇದಲ್ಲದೆ ರಾಜ್ಯದಾದ್ಯಂತ ಹಲವೆಡೆಗಳಲ್ಲಿ ಪ್ರತಿಭಟನೆಗಳು, ಮೆರವಣಿಗೆಗಳಲ್ಲಿ ನೂರಾರು ಕಾರ್ಮಿಕರು, ರೈತರು, ಇತರರು ಭಾಗವಹಿಸಿದ್ದಾರೆ.

ಪುಟ 16 ಕ್ಕೆ





















JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**